ಡಿಸೆಂಬರ್ 2021

# ಧರ್ಮಾಚರಣೆಯ ಅಪರಾಧೀಕರಣ




## ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ಮೇಲಿನ ದ್ವೇಷ ಅಪರಾಧಗಳ ಕುರಿತು ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಕರ್ನಾಟಕದ ಒಂದು ಸಮಗ್ರ ವರದಿ

# ಧರ್ಮಾಚರಣೆಯ ಅಪರಾಧೀಕರಣ

# Criminalizing the Practice of Faith

## ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ಮೇಲಿನ ದ್ವೇಷ ಅಪರಾಧಗಳ ಕುರಿತು

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ ಕರ್ನಾಟಕದ

ಒಂದು ಸಮಗ್ರ ವರದಿ 2021

## A report on the Hate Crimes on Christians in Karnataka, 2021

**People's Union for Civil Liberties – Karnataka**

# ಪರಿವಿಡಿ


ಸ್ಮರಣೆ........ 3

ಪರಿಚಯ........ 4

ಅಧ್ಯಾಯ ೧: ದ್ವೇಷ ಅಪರಾಧಗಳ ಮಾದರಿಗಳು ........ 12

೧.೧ ಧರ್ಮವನ್ನು ಮುಕ್ತವಾಗಿ ಆಚರಿಸುವ ಹಕ್ಕು........ 13

೧.೨ ಕ್ರಿಶ್ಚಿಯನ್ನರ ವಿರುದ್ಧ ದ್ವೇಷ ಅಪರಾಧಗಳು ........ 21

೧.೩ ಕರ್ನಾಟಕದಲ್ಲಿ ಕರೋನಾ ಸಾಂಕ್ರಾಮಿಕದ ನಂತರದ ದಿನಗಳಲ್ಲಿ ಆತಂಕದಿಂದ ಬದುಕುತ್ತಿರುವ ಸ್ಥಿತಿ........ 22

೧.೪ ದ್ವೇಷದ ಅಪರಾಧವೆಸಗುವ ಅಪರಾಧಿಗಳು ........ 24

೧.೫ ಬದುಕಿನ ಘನತೆಗೆ ಧಕ್ಕೆ ತರುವ ಜಾತಿ ನಿಂದನೆ........ 27

೧.೬ ಹಿಂದುಳಿದ ಸಮುದಾಯಗಳ ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿ ........ 31

೧.೭ ದ್ವೇಷ ಅಪರಾಧಗಳ ಸಂದರ್ಭದಲ್ಲಿ ಪೊಲೀಸರ ಶಾಮೀಲು........ 33

೧.೮ ಸಮುದಾಯಗಳನ್ನು ಕಡೆಗಣಿಸುವುದರಿಂದಾಗುವ ದೂರಗಾಮಿ ಪರಿಣಾಮ ........ 39

ಅಧ್ಯಾಯ ೨: ಧರ್ಮವನ್ನು ಆಚರಿಸುವ, ಶ್ರದ್ಧೆ ಹೊಂದುವ ಮತ್ತು ಪ್ರಚಾರ ಮಾಡುವ ಸಂವಿಧಾನದತ್ತ ಸ್ವಾತಂತ್ರ್ಯ........ 41

ಅಧ್ಯಾಯ ೩: 'ಧರ್ಮದ ಸ್ವಾತಂತ್ರ್ಯ' ಕಾನೂನುಗಳ ವ್ಯಂಗ್ಯ........ 48

ಅಧ್ಯಾಯ ೪ : ಮತಾಂತರದ ಕಟ್ಟುಕತೆಗಳನ್ನು ಮಾಧ್ಯಮದ ವರದಿಗಳನ್ನಾಧರಿಸಿ ಅರ್ಥೈಸಿಕೊಳ್ಳುವುದು........ 57

ಅಧ್ಯಾಯ ೫: ದೃಢ ನಿಶ್ಚಯದಿಂದ ಮುನ್ನಡೆಯುವುದು ........ 64

ಶಿಫಾರಸ್ಸುಗಳು........ 68

# ಸ್ಮರಣೆ

ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ನಂಬಿಕೆಯ ಹಕ್ಕಿನ ಮೇಲೆ ಹೆಚ್ಚುತ್ತಿರುವ ಆಕ್ರಮಣವನ್ನು ಅರ್ಥ ಮಾಡಿಕೊಳ್ಳುವ ಮತ್ತು ಪ್ರತಿಕ್ರಿಯಿಸುವ ಪ್ರಯತ್ನವೇ ಈ ವರದಿ. ದಾಳಿಗಳ ಕುರಿತಾಗಿ ವಾಸ್ತವ ಸಂಗತಿಗಳನ್ನು ನವದೆಹಲಿಯ ಯುನೈಟೆಡ್ ಕ್ರಿಶ್ಚಿಯನ್ ಫೋರಮ್ (ಯುಸಿಎಫ್) ದಾಖಲಾತಿ ಮತ್ತು ಅಂಕಿಅಂಶಗಳ ಸಹಿತ ಪಿಯುಸಿಎಲ್ ಕರ್ನಾಟಕದ ಗಮನಕ್ಕೆ ತಂದಿದೆ. ಬಹುಸಂಖ್ಯಾತರು ಎಸಗುತ್ತಿರುವ ಹಿಂಸಾಚಾರಕ್ಕೆ ಬಲಿಯಾದ ಅನೇಕರಿಗೆ ಯುಸಿಎಫ್ ತನ್ನ ಸಂಪರ್ಕಗಳನ್ನು ಬಳಸಿ ಕಾನೂನು ನೆರವು ಒದಗಿಸಿದೆ ಮತ್ತು ಕಾನೂನು ನೆರವು ಮುಂದುವರಿಸಿದೆ, ಅಂತೆಯೇ ಈ ದಾಳಿ ಪ್ರಕರಣಗಳನ್ನು ವ್ಯವಸ್ಥಿತವಾಗಿ ದಾಖಲಿಸುತ್ತಿದೆ. ಅವರ ನೆರವಿನಿಂದ ಪಿಯುಸಿಎಲ್ ಸಂತ್ರಸ್ತರನ್ನು ಭೇಟಿಯಾಗಲು, ಅವರೊಂದಿಗೆ ಪ್ರತ್ಯೇಕವಾಗಿ ಮಾತನಾಡಲು ಮತ್ತು ಅವರ ಮನದಾಳದ ಮಾತುಗಳನ್ನು ಆಲಿಸಲು ಸಾಧ್ಯವಾಯಿತು. ನಮ್ಮೊಂದಿಗೆ ಅಗತ್ಯ ಮಾಹಿತಿ ಹಂಚಿಕೊಂಡಿದ್ದಕ್ಕಾಗಿ ಅವರಿಗೆ ಋಣಿಯಾಗಿದ್ದೇವೆ. ಅವರ ನಿರಂತರ ಪ್ರತಿರೋಧ ಮತ್ತು ದೃಢ ನಿಶ್ಚಯದೊಂದಿಗೆ ಮುಂದುವರೆಯುವ ಕ್ರಿಯೆಯಲ್ಲಿ ನಾವು ಸದಾ ಜೊತೆಗಿದ್ದೇವೆ. ಈ ವರದಿಗೆ ಪೂರಕವಾದ ಅರ್ಥಪೂರ್ಣ ಚಿತ್ರಣಗಳನ್ನು ರಚಿಸಿದ ತಾನ್ಯಾ ರಾಮನ್ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ವರದಿ ಸಿದ್ಧಪಡಿಸಿದ ತಂಡ:**

ಆಕಾರ್ ಪಟೇಲ್, ಐಶ್ವರ್ಯ ರವಿಕುಮಾರ್, ಅರವಿನಂದ್ ನರೈನ್, ಮಾನವಿ, ರಾಮ್, ಶುಜಾಯತ್ತುಲ್ಲ ಇ, ಶಶಾಂಕ್ ಎಸ್. ಆರ್.

ಪರಾಮರ್ಶೆ: ಮೈತ್ರೇಯಿ ಕೃಷ್ಣನ್ ಮತ್ತು ವೈ. ಜೆ. ರಾಜೇಂದ್ರ

**ಕನ್ನಡಕ್ಕೆ ಅನುವಾದ: ಕೆ. ಎನ್. ನಾಗೇಶ್**

ಕರಡು ತಿದ್ದುಪಡಿ (ಪ್ರೋಫ್ ರೀಡಿಂಗ್): ಫಾದರ್. ಜೆರಾಲ್ಡ್ ಡಿಸೌಜ ಮತ್ತು ವೈ. ಜೆ. ರಾಜೇಂದ್ರ

# ಪರಿಚಯ

ಕರ್ನಾಟಕದಲ್ಲಿ ಕ್ರಿಶ್ಚಿಯನ್ ಸಮುದಾಯವನ್ನು ಗುರಿಯಾಗಿಸಿಕೊಂಡಿರುವುದು ಹೊಸ ವಿದ್ಯಮಾನವಲ್ಲ. ನಾವು ಹಿಂತಿರುಗಿ ನೋಡಿದಾಗ, 2008 ರಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಅಧಿಕಾರದಲ್ಲಿದ್ದಾಗ, ಚಿಕ್ಕಮಗಳೂರು, ಉಡುಪಿ, ಮಂಗಳೂರು ಮತ್ತು ದಕ್ಷಿಣ ಕನ್ನಡ ಸೇರಿದಂತೆ ಅನೇಕ ಭಾಗಗಳಲ್ಲಿ ಹಲವಾರು ಚರ್ಚ್‌ಗಳ ಮೇಲೆ ದಾಳಿಗಳು ನಡೆದವು. 2021 ರಲ್ಲಿ ಬಿಜೆಪಿಯ ಆಡಳಿತದಲ್ಲಿ ಇದೇ ರೀತಿಯ ಅಪರಾಧ ಮಾದರಿಗಳನ್ನು ಗಮನಿಸಬಹುದು. 2008 ರಲ್ಲಿ ಕೂಡ ಹಿಂದುತ್ವದ ಗುಂಪುಗಳು ಕ್ರಿಶ್ಚಿಯನ್ನರು ಹಿಂದೂಗಳನ್ನು ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಿತ್ತು. ಕಳೆದ ಐದು ದಶಕಗಳಿಂದ ದೇಶ ಹಾಗೂ ರಾಜ್ಯದಲ್ಲಿ ಜನಗಣತಿಯಲ್ಲಿ ದಾಖಲಾದಂತೆ ಕ್ರಿಶ್ಚಿಯನ್ ಸಮುದಾಯದ ಜನಸಂಖ್ಯೆ ಕಡಿಮೆ ಆಗುತ್ತಿರುವುದು ದಾಖಲಾಗಿದ್ದಾಗ್ಯೂ ಕ್ರಿಶ್ಚಿಯನ್ನರು ಮತಾಂತರ ಮಾಡುವಲ್ಲಿ ತೊಡಗಿದ್ದಾರೆ ಎಂಬ ಕಟ್ಟುಕತೆಯನ್ನು ನಿರಂತರವಾಗಿ ಪ್ರಚಾರದಲ್ಲಿಡಲಾಗಿದೆ.

2021 ರಲ್ಲೂ ಸಹ ಮತಾಂತರವೆಂಬ ಬಣ್ಣಕಟ್ಟಿ ಉದ್ದೇಶಿತ ದಾಳಿಗಳು ನಡೆದವು. ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಪ್ರಾರ್ಥನಾ ಸಭೆಗಳು ನಡೆಯುವ ಸಮಯದಲ್ಲಿ ಕ್ರಿಶ್ಚಿಯನ್ನರ ಮೇಲಿನ ಈ ದಾಳಿಗಳು ಈ ವರ್ಷ ಹೆಚ್ಚು ತೀಕ್ಷ್ಣವಾಗಿಯೂ ಮತ್ತು ಹಿಂಸಾತ್ಮಕವಾಗಿಯೂ ನಡೆಯುತ್ತಿವೆ.

ಸಂವಿಧಾನದ 25 ನೇ ವಿಧಿಯ ಅಡಿಯಲ್ಲಿ ಮಾನ್ಯತೆ ಪಡೆದಿರುವ ಧರ್ಮವನ್ನು ಆಚರಿಸುವ, ಪ್ರತಿಪಾದಿಸುವ ಮತ್ತು ಪ್ರಚಾರ ಮಾಡುವ ಸಾಂವಿಧಾನಿಕ ಹಕ್ಕನ್ನು ಮೊಟಕುಗೊಳಿಸುವ ಸಲುವಾಗಿ ಮತಾಂತರ ಮಾಡಲಾಗುತ್ತಿದೆ ಎಂಬ ಕಟ್ಟುಕತೆಯು ನಿರಂತರವಾಗಿ ಉಳಿದಿದೆ. ಇನ್ನೂ ಆಘಾತಕಾರಿ ಅಂಶವೇನೆಂದರೆ ಇದೀಗ ರಾಜ್ಯದಲ್ಲಿ ಮತಾಂತರವನ್ನು ಮುಂದಿಟ್ಟುಕೊಂಡು ಕ್ರಿಶ್ಚಿಯನ್ನರು ತಮ್ಮ ಧರ್ಮವನ್ನು ಆಚರಿಸುವ ಮತ್ತು ಪ್ರತಿಪಾದಿಸುವ ಸಾಂವಿಧಾನಿಕ ಹಕ್ಕನ್ನು ಮೊಟಕುಗೊಳಿಸಲಾಗುತ್ತಿದೆ. ಮತಾಂತರಕ್ಕೆ ಸಂಬಂಧಿಸಿದಂತೆ ಸಹ ಗಮನಿಸಬೇಕಾದ ಮುಖ್ಯ ವಿಷಯವೇನೆಂದರೆ ಯಾವುದೇ ವ್ಯಕ್ತಿಯು ತಾನು ಯಾವ ಧರ್ಮವನ್ನು ಆಚರಿಸಬೇಕು ಎಂಬುದನ್ನು ತಾನೇ ತೀರ್ಮಾನ ಮಾಡಿಕೊಳ್ಳುವುದು ಸಂವಿಧಾನಿಕ ಹಕ್ಕು. ಅದು ಮೂಲಭೂತ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಮತ್ತು ವ್ಯಕ್ತಿ ಘನತೆಯ ಪ್ರಮುಖ ಭಾಗ. ಜೊತೆಗೆ ಭಾರತೀಯ ಸಾಂವಿಧಾನಿಕ ಚೌಕಟ್ಟಿನ ಅಡಿಯಲ್ಲಿ ಅದನ್ನು ಯಾರೂ ಮೊಟಕುಗೊಳಿಸುವಂತಿಲ್ಲ.

ಭಾರತೀಯ ಸಂವಿಧಾನದಲ್ಲಿ ಮತಾಂತರದ ಯಾವುದೇ ಅಪರಾಧೀಕರಣವನ್ನು ತಿರಸ್ಕರಿಸಬೇಕು ಎಂಬ ದೃಢ ನಿಲುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರದ್ದಾಗಿತ್ತು ಎಂಬುದನ್ನೂ ಇಲ್ಲಿ ಗಮನಿಸಬೇಕು. ಮೂಲಭೂತ ಹಕ್ಕುಗಳ ಮಧ್ಯಂತರ ವರದಿಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ಷರತ್ತು 17 ಅನ್ನು ಸರ್ದಾರ್ ವಲ್ಲಭಭಾಯಿ ಪಟೇಲ್ ಮಂಡಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

> "ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಬಲಾತ್ಕಾರದಿಂದ ಅಥವಾ ಅನಗತ್ಯ ಪ್ರಭಾವದಿಂದ ಮತಾಂತರವನ್ನು ಕಾನೂನಿನಿಂದ ಗುರುತಿಸಲಾಗುವುದಿಲ್ಲ."

ಶ್ರೀ. ಕೆ. ಎಂ. ಮುನ್ಷಿ ಅವರು ಈ ಷರತ್ತಿಗೆ ತಿದ್ದುಪಡಿ ತಂದರು

ವಂಚನೆ, ದಬ್ಬಾಳಿಕೆ ಅಥವಾ ಅನಗತ್ಯ ಪ್ರಭಾವದಿಂದ ಅಥವಾ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪ್ರಾಪ್ತ ವಯಸ್ಸಿನ ಯಾವುದೇ ವ್ಯಕ್ತಿಯ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರವನ್ನು ಕಾನೂನಿನಿಂದ ಗುರುತಿಸಲಾಗುವುದಿಲ್ಲ.

ಅಂಬೇಡ್ಕರ್ ಅವರು ಷರತ್ತು ಮತ್ತು ಪ್ರಸ್ತಾವಿತ ತಿದ್ದುಪಡಿ ಎರಡನ್ನೂ ತಿರಸ್ಕರಿಸುವಲ್ಲಿ ದೃಢವಾಗಿದ್ದರು. ಅವರ ಮನಸ್ಸಿನಲ್ಲಿ ಮತಾಂತರಗೊಳ್ಳುವ ವಯಸ್ಕರ ಹಕ್ಕಿನ ಬಗೆಗೆ ಯಾವುದೇ ಪ್ರಶ್ನೆ ಇರಲಿಲ್ಲ. ಆದಾಗ್ಯೂ ಮಕ್ಕಳಿಗೆ ಸಂಬಂಧಿಸಿದಂತೆ ಅವರು ಮೂರು ಸಾಧ್ಯತೆಗಳನ್ನು ವಿವರಿಸಿದರು. ಅನಾಥ ಮಕ್ಕಳಾಗಿದ್ದರೆ ಮತಾಂತರ ನಿಷೇಧ ಜಾರಿಯಿದ್ದಲ್ಲಿ ಅದು ಅವರಿಗೆ ಯಾವುದೇ ಧರ್ಮವನ್ನು ಸ್ವೀಕರಿಸದ ಪರಿಸ್ಥಿತಿಗೆ ಕಾರಣವಾಗುತ್ತದೆ, ಅದೊಂದು ಅಸಂಗತ ಪರಿಸ್ಥಿತಿಯಾಗುತ್ತದೆ. ಪೋಷಕರೊಂದಿಗಿನ ಮಕ್ಕಳಾಗಿದ್ದಲ್ಲಿ ಪೋಷಕರ ಅನುಮತಿಯಿಲ್ಲದೆ ಮಕ್ಕಳನ್ನು ಮತಾಂತರ ಮಾಡಬಾರದೆಂದು ಹೇಳುವುದು ಸರಿಯಾದ ಕ್ರಮವಾಗುತ್ತದೆ ಎಂದರು. ಆದರೆ ಪೋಷಕರು ಸ್ವಯಂಪ್ರೇರಣೆಯಿಂದ ಮತಾಂತರಗೊಂಡರೆ ಮಕ್ಕಳ ಸ್ಥಿತಿ ಏನು?

**ಅದಕ್ಕೆ ಅಂಬೇಡ್ಕರ್ ಅವರು ಈ ರೀತಿಯಾಗಿ ಹೇಳಿದರು**

> "ನೀವು ಹೇಳಿದಂತೆ ಪೋಷಕರು ಮೇಜರ್ (ಪ್ರೌಢ) ಆಗಿರುವುದರಿಂದ ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟಿರುವುದರಿಂದ ಮತಾಂತರಗೊಳ್ಳಬಹುದು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪ್ರಾಪ್ತರು ತಮ್ಮ ಮಕ್ಕಳಾಗಿದ್ದರೂ ಪೋಷಕರೊಂದಿಗೆ ಮತಾಂತರಗೊಳ್ಳಬಾರದು.. ಈ ಪ್ರಶ್ನೆಯನ್ನು ಗಮನಿಸಬೇಕು. ನಾವು ಮಕ್ಕಳಿಗೆ ಸಂಬಂಧಿಸಿದಂತೆ ಯಾವ ವ್ಯವಸ್ಥೆಯನ್ನು ಮಾಡಲಿದ್ದೇವೆ ಎಂಬುದನ್ನು ಪರಿಗಣಿಸಬೇಕು? ಪೋಷಕರು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂದು ಭಾವಿಸೋಣ. ಅಂತಹ ಪೋಷಕರ ಮಗು ಸತ್ತಿದೆ ಎಂದು ಭಾವಿಸೋಣ. ಕ್ರಿಶ್ಚಿಯನ್ ನಂಬಿಕೆಯಲ್ಲಿ ಬೆಳೆದು ಬಂದಿರುವ ಪೋಷಕ ತನ್ನ ಸತ್ತ ಮಗುವಿಗೆ ಕ್ರಿಶ್ಚಿಯನ್ ವಿಧಿವಿಧಾನಗಳಲ್ಲಿ ಅಂತ್ಯಸಂಸ್ಕಾರ ಮಾಡುತ್ತಾನೆ. ತನ್ನ ನಂಬಿಕೆ ಆಚರಣೆಗೆ ಅನುಗುಣವಾಗಿ ತನ್ನ ಮಗುವಿಗೆ ಕ್ರಿಶ್ಚಿಯನ್ ವಿಧಿವಿಧಾನಗಳಲ್ಲಿ ಅಂತ್ಯ ಸಂಸ್ಕಾರ ಮಾಡಿದ ಆ ಪೋಷಕನ ಕ್ರಮವನ್ನು ಕಾನೂನಿನಡಿಯಲ್ಲಿ ಅಪರಾದವೆಂದು ಪರಿಗಣಿಸಬಹುದೇ?"

ಮುಂದುವರೆದು ಮಾತನಾಡುತ್ತಾ.. 'ಮಕ್ಕಳನ್ನು ಪರಿವರ್ತಿಸುವುದು ಬೇಡ ಎಂಬುದು ನಿಮ್ಮ ವಾದವಾದರೆ ಪೋಷಕರಿಗೆ ತಮ್ಮ ಮಕ್ಕಳನ್ನು ಯಾವ ಧರ್ಮದಲ್ಲಿ ನಂಬಿಕೆ ಇಟ್ಟುಕೊಳ್ಳಬೇಕು ಮತ್ತು ಧಾರ್ಮಿಕ ಜೀವನ ಹೇಗಿರಬೇಕು ಎಂಬುದರ ಬಗ್ಗೆ ಹೇಳಿಕೊಡಲು ಅಥವ ಪ್ರಭಾವಿಸಲು ಪೋಷಕರಿಗಿರುವ ಹಕ್ಕನ್ನು ತಡೆಯುವುದಾದಲ್ಲಿ ಪೋಷಕರು ಅಥವಾ ಪಾಲಕತ್ವಕ್ಕೆ ಸಂಬಂಧಿಸಿದಂತೆ ನೀವು ಬೇರೆ ರೀತಿಯ ಕಾನೂನನ್ನು ಮಾಡಬೇಕಾಗಿದೆ ಎಂದು ಅವರು ಹೇಳಿದರು. ಉದಾಹರಣೆಗೆ, ಪೋಷಕರು ಕ್ರಿಶ್ಚಿಯನ್ ಧರ್ಮವನ್ನು ಅಥವಾ ಮೂಲತಃ ಅವರದಲ್ಲದ ಕೆಲವು ಧರ್ಮವನ್ನು ಅಳವಡಿಸಿಕೊಂಡಿದ್ದಾರೆ ಎಂಬ ಕಾರಣಕ್ಕಾಗಿ ಅವರ ಐದು ವರ್ಷದ ಮಗುವನ್ನು ತನ್ನ ಹೆತ್ತವರಿಂದ ಬೇರ್ಪಡಿಸಬೇಕೆಂದು ಈ ಸದನವು ಒಪ್ಪಿಕೊಳ್ಳಲು ಸಾಧ್ಯವೇ? ಮುಂದೆ ಮಾತನಾಡುತ್ತಾ 'ಒಬ್ಬ ವ್ಯಕ್ತಿಯನ್ನು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿ ಪರಿವರ್ತಿಸಬಾರದು

ಎಂಬ ಪ್ರತಿಪಾದನೆಯಯನ್ನು ಒಪ್ಪಿದಲ್ಲಿ ಅದು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಹಲವಾರು ದುಷ್ಪರಿಣಾಮಗಳಿಗೆ ಕಾರಣವಾಗುತ್ತದೆ. ಹಾಗಾಗಿ ಈ ವಿಷಯವನ್ನು ಇಲ್ಲಿಗೇ ಸಂಪೂರ್ಣವಾಗಿ ಕೈಬಿಡುವುದು ಒಳ್ಳೆಯದೆಂದು ಹೇಳಿದರು...' [1]

ಅಂಬೇಡ್ಕರ್ ಅವರ ಈ ವಾದದಲ್ಲಿ ಮತಾಂತರ ಎನ್ನುವುದೇ ಸಂವಿಧಾನಿಕ ಹಕ್ಕು ಎಂಬುದು ಸ್ಪಷ್ಟವಾಗುತ್ತದೆ. ಅಂಬೇಡ್ಕರ್ ವಾದವನ್ನು ಒಪ್ಪುವವರು ಮತ್ತು ಪಾಲಿಸುವವರು ಅವರಿಗೆ ಅತ್ಯಂತ ಪ್ರಿಯವಾದ ಈ ಸಂಗತಿಯನ್ನು ಗೌರವಿಸಬೇಕು. ವ್ಯಕ್ತಿಗೆ ತಾನು ಒಪ್ಪುವ ಧರ್ಮವನ್ನು ಪ್ರತಿಪಾದಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಗೌರವಿಸಬೇಕು.

**ಈ ವರದಿಯ ಪ್ರಸ್ತುತತೆ ಮತ್ತು ಅಗತ್ಯ**

7ನೇ ಜುಲೈ 2021 ರಂದು ಅಲ್ಪಸಂಖ್ಯಾತರ ನಿರ್ದೇಶನಾಲಯವು ಚರ್ಚ್‌ಗಳ ಸಮೀಕ್ಷೆಯನ್ನು ನಡೆಸಬೇಕೆಂದು ಆದೇಶ ಪತ್ರವನ್ನು ಕಳುಹಿಸಿತು. ಅದರಲ್ಲಿ ಜಿಲ್ಲೆಯ ಹೆಸರು, ತಾಲೂಕು, ಸಂಸ್ಥೆಯ ಹೆಸರು ಮತ್ತು ವಿಳಾಸ, ಖಾತಾ ಸಂಖ್ಯೆ ಮತ್ತು ಚರ್ಚ್‌ನ ಪಾದ್ರಿ/ಫಾದರ್‌ನ ವಿವರಗಳನ್ನು ಕೊಡಬೇಕಾಗಿ ಆದೇಶಿಸಿತ್ತು. ನಿರ್ದೇಶನಾಲಯದ ಈ ಅಸಾಂವಿಧಾನಿಕ ನಡವಳಿಕೆಯನ್ನು ಗಮನಿಸಿದ ಪಿಯುಸಿಎಲ್-ಕರ್ನಾಟಕ ಈ ಸಮೀಕ್ಷೆಯ ಉದ್ದೇಶದ ಬಗ್ಗೆ ತಿಳಿಸಬೇಕೆಂದು ಇಲಾಖೆಗೆ ಪತ್ರ ಬರೆಯಿತು.  ಸದರಿ ಪತ್ರಕ್ಕೆ ಇಲಾಖೆ ಸ್ಪಂದಿಸದ ಕಾರಣ ಪಿಯುಸಿಎಲ್-ಕರ್ನಾಟಕದಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ ತಾರತಮ್ಯ ಮಾಡುವಂತಿರುವ ಈ ಸಮೀಕ್ಷೆಯನ್ನು ನಿಲ್ಲಿಸುವಂತೆ ಕೋರಲಾಯಿತು. ಕರ್ನಾಟಕ ಹೈಕೋರ್ಟ್ ರಾಜ್ಯ ಸರ್ಕಾರದ ಈ ವಿಚಾರದಲ್ಲಿ ಸಮೀಕ್ಷೆ ನಡೆಸಲಿರುವ ಇಲಾಖೆಗೆ ಯಾವುದೇ ತಡೆಯಾಜ್ಞೆ ಕೊಟ್ಟಿಲ್ಲ ಮತ್ತು ಹೈಕೋರ್ಟ್‌ನಲ್ಲಿ ಈ ಕೇಸು ಇನ್ನೂ ಬಾಕಿ ಇದೆ.

ತದನಂತರ ಸೆಪ್ಟೆಂಬರ್ 21, 2021 ರಂದು ವಿಧಾನಸಭಾ ಅಧಿವೇಶನದಲ್ಲಿ ಹೊಸದುರ್ಗ ಕ್ಷೇತ್ರದ ಚುನಾಯಿತ ಪ್ರತಿನಿಧಿಯಾದ ಶ್ರೀ ಗೂಳಿಹಟ್ಟಿ ಡಿ ಶೇಖರ್ ಅವರು ತಮ್ಮ ಕ್ಷೇತ್ರದಲ್ಲಿ ಅವ್ಯಾಹತವಾಗಿ ಮತಾಂತರಗಳು ನಡೆಯುತ್ತಿವೆ ಎಂದು ಆರೋಪಿಸಿದ್ದರು. ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಶಾಸಕರು ತಮ್ಮ ಕ್ಷೇತ್ರದಲ್ಲಿ ತಾಯಿ ಸೇರಿದಂತೆ ಸುಮಾರು 15,000-20,000 ಜನರನ್ನು ಮತಾಂತರ ಮಾಡಿದ್ದಾರೆ ಎಂದು ಹೇಳಿದರು. ತನ್ನ ವೈಯಕ್ತಿಕ ಅನುಭವದ ಆದಾರದ ಮೇಲೆ "ಸಾಮೂಹಿಕ ಮತಾಂತರ" ನಡೆಯುತ್ತಿದೆ ಎಂದು ಆರೋಪಿಸಿದರು. ತನ್ನ ತಾಯಿ ತನ್ನ ಇಚ್ಛೆಯಂತೆಯೇ ಮತಾಂತರಗೊಂಡಿದ್ದಾಳೆ ಎಂದು ಸ್ಪಷ್ಟವಾಗಿ ಹೇಳಿದ್ದರೂ ತನ್ನ ತಾಯಿಯನ್ನು ಬಲವಂತವಾಗಿ ಮತಾಂತರಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಗೂಳಿಹಟ್ಟಿ ಶೇಖರ್ ಹೇಳಿಕೆಯ ನಂತರ ಹುಬ್ಬಳ್ಳಿಯಲ್ಲಿ ಬಲಪಂಥೀಯ ಗುಂಪುಗಳು ಪಾದ್ರಿ ಮತಾಂತರದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು. ಆಶ್ಚರ್ಯವೇನೂ ಅಲ್ಲವೆಂಬಂತೆ ಅದಾಗ ಸ್ಥಳೀಯ ಬಿಜೆಪಿ ಶಾಸಕ ಅರವಿಂದ್ ಬೆಲ್ಲದ್ ರಸ್ತೆ ತಡೆ ನಡೆಸಿ ಪಾದ್ರಿಯನ್ನು ಬಂಧಿಸುವಂತೆ ಒತ್ತಾಯಿಸಿದರು.

---

[1] B.R. Ambedkar, Dr. Babasaheb Ambedkar: Writings and Speeches, Volumes XIII Bombay, Department of Education, Government of Maharashtra. p. 17.

ಈ ಎಲ್ಲಾ ವಿಷಯಗಳು ಪಕ್ವವಾದಂತೆ ಅಕ್ಟೋಬರ್ 13, 2021 ರಂದು ಶಾಸಕಾಂಗ ಸಮಿತಿಯ ಸಭೆಯಲ್ಲಿ ಗೂಳಿಹಟ್ಟಿ ಶೇಖರ್ ಅವರು "ಬಲವಂತದ ಮತಾಂತರಗಳನ್ನು" ಪರಿಶೀಲಿಸುವುದು ಸಮೀಕ್ಷೆಯ ಗುರಿ ಎಂದು ಹೇಳಿದರು.[2]

ಈ ಸಭೆಯ ನಂತರ, ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣದ ಶಾಸಕಾಂಗ ಉಪಸಮಿತಿಯು ರಾಜ್ಯದ ಚರ್ಚ್‌ಗಳ ಸಮೀಕ್ಷೆಗೆ ಆದೇಶಿಸಿತು. ತರುವಾಯ ಮತ್ತೊಂದು ಬೆಳವಣಿಗೆಯಲ್ಲಿ ಕರ್ನಾಟಕ ವಿಧಾನಸಭೆಯ ಸಚಿವಾಲಯವು ರಾಜ್ಯದಲ್ಲಿ ಕಳೆದ 25 ವರ್ಷಗಳ ಮತಾಂತರದ ವಿವರಗಳನ್ನು ಸಲ್ಲಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸೂಚನೆ ನೀಡಿತು.[3]

ನವೆಂಬರ್ 6, 2021 ರಂದು ಪೊಲೀಸರು ನಡೆಸಿದ ಸಮೀಕ್ಷೆಯ ಪ್ರಕಾರ ಯಾವುದೇ ಅಕ್ರಮ ಚರ್ಚ್‌ಗಳಿಲ್ಲ ಎಂದು ಕ್ವಿಂಟ್ ವರದಿ ಮಾಡಿದೆ. ಇದಕ್ಕೆ ವ್ಯತಿರಿಕ್ತವಾಗಿ, ರಾಜ್ಯ ಗುಪ್ತಚರ ಇಲಾಖೆಯು ರಾಜ್ಯದಾದ್ಯಂತ 236 "ಕಾನೂನುಬಾಹಿರ ಎಂದು" ಕ್ರಿಶ್ಚಿಯನ್ ಪೂಜಾ ಸ್ಥಳಗಳನ್ನು ಮುಚ್ಚಿಸಿದೆ.[4]

ಹೊಸದುರ್ಗ ತಹಶೀಲ್ದಾರ್ ಅವರ ಅಧಿಕೃತ ಸಮೀಕ್ಷೆಯಲ್ಲಿ ಎಲ್ಲಾ ಕುಟುಂಬಗಳು ಕ್ರಿಶ್ಚಿಯನ್ ಧರ್ಮಕ್ಕೆ ಸ್ವ ಇಚ್ಛೆಯಿಂದ ಮತಾಂತರಗೊಂಡಿರುವುದಾಗಿ ಜೊತೆಗೆ ಯಾರೂ ಒತ್ತಾಯಿಸಲಿಲ್ಲ ಎಂಬುದು ತಿಳಿದುಬಂದಿದೆ. ಆದಾಗ್ಯೂ ಹೊಸದುರ್ಗ ತಾಲೂಕಿನ ಎರಡು ಗ್ರಾಮಗಳಲ್ಲಿ 46 ಕುಟುಂಬಗಳನ್ನು ಬಲವಂತವಾಗಿ ಮತಾಂತರ ಮಾಡಲಾಗಿದೆ ಎಂದು ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ಪ್ರತಿಪಾದಿಸುತ್ತಿದ್ದಾರೆ.[5]

## ಬಲವಂತದ ಸಾಮೂಹಿಕ ಮತಾಂತರವೆಂಬ ಕಟ್ಟುಕತೆಯ ಬಗೆಗಿನ ನಿಜಸ್ಥಿತಿ ಬಯಲುಗೊಳಿಸುವುದು

ಒಕ್ಕೂಟ ವ್ಯವಸ್ಥೆಯಾದ ಭಾರತವು ಹಲವು ಧರ್ಮಗಳು, ಸಂಸ್ಕೃತಿಗಳು, ಭಾಷೆಗಳು ಮತ್ತು ಸಂಪ್ರದಾಯಗಳ ವೈವಿಧ್ಯಮಯ ದೇಶ. ಈ ದೇಶ ಕಟ್ಟುವಲ್ಲಿ ಎಲ್ಲ ಧರ್ಮೀಯರೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕೊಡುಗೆ ನೀಡಿದ್ದಾರೆ. ರಾಷ್ಟ್ರವನ್ನು ನಿರ್ಮಿಸುವಲ್ಲಿ ಕ್ರಿಶ್ಚಿಯನ್ನರು ಪ್ರಮುಖ ಪಾತ್ರ ವಹಿಸಿದ್ದಾರೆಂದು ನಿಸ್ಸಂದೇಹವಾಗಿ ಹೇಳಬಹುದು. ಅನೇಕ ವರ್ಷಗಳಿಂದ ಕ್ರಿಶ್ಚಿಯನ್ ಸಮುದಾಯವು ದೇಶದ ಜನರಿಗೆ ಶಿಕ್ಷಣ, ಆರೋಗ್ಯ ಸೇವೆಗಳು, ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿಯಂತಹ ಸೇವೆಗಳನ್ನು ಒದಗಿಸುತ್ತಾ ಬಂದಿದೆ. ಆತಂಕಕಾರಿ ಅಂಶವೆಂದರೆ ಕ್ರಿಶ್ಚಿಯನ್ನರ ಸಂಖ್ಯೆ ಇಳಿಮುಖವಾಗಿದೆ. 1971 ರ ಜನಗಣತಿಯ ಪ್ರಕಾರ ಕ್ರಿಶ್ಚಿಯನ್ನರು 2.60%. 1981 ರಲ್ಲಿ ಅವರು 2.44%, 1991 ರಲ್ಲಿ 2.33%, 2001 ರಲ್ಲಿ 2.18%

[2] https://thewire.in/government/karnataka-legislative-panel-orders-survey-of-churches-to-check-forced-conversions

[3] https://www.telegraphindia.com/india/karnataka-assembly-secretariat-calls-for-25-year-conversion-data/cid/1836504

[4] https://www.thequint.com/news/india/karnataka-anti-conversion-bill-church-survey-intelligence-police-disagree-on-illegal-churches#read-more

[5] https://www.newindianexpress.com/states/karnataka/2021/dec/01/contrary-to-bjp-mlas-claim-official-survey-finds-no-forced-conversions-in-karnatakas-hosadurga-2390411.html

ಮತ್ತು ಪ್ರಸ್ತುತ 2.30%.[6] ಕರ್ನಾಟಕ ರಾಜ್ಯದಲ್ಲಿ 1971 ರಲ್ಲಿ ಕ್ರಿಶ್ಚಿಯನ್ನರ ಜನಸಂಖ್ಯೆಯು 2.09%, 1981 ರಲ್ಲಿ 2.08%, 1991 ರಲ್ಲಿ 1.91%[7], 2001 ರಲ್ಲಿ 1.9%[8] ಮತ್ತು 2011 ರ ಜನಗಣತಿಯ ಪ್ರಕಾರ 1.87%.[9]

| ಭಾರತದ ಜನಗಣತಿಯ ಪ್ರಕಾರ ಭಾರತ ಮತ್ತು ಕರ್ನಾಟಕದಲ್ಲಿ ಕ್ರಿಶ್ಚಿಯನ್ ಜನಸಂಖ್ಯೆಯ ಪ್ರಮಾಣ | | |
|---|---|---|
| **ವರ್ಷ** | **ಭಾರತ** | **ಕರ್ನಾಟಕ** |
| 1971 | 2.6 | 2.09 |
| 1981 | 2.4 | 2.08 |
| 1991 | 2.33 | 1.91 |
| 1971 | 2.6 | 2.09 |
| 2001 | 2.18 | 1.9 |
| 2011 | 2.3 | 1.87 |

ಈ ಅಂಕಿ ಅಂಶಗಳು ಕ್ರಿಶ್ಚಿಯನ್ ಸಮುದಾಯ ಹೆಚ್ಚುತ್ತಿದೆ ಎಂದು ಹೇಳಲು ಯಾವ ಪುರಾವೆಯನ್ನೂ ಒದಗಿಸುವುದಿಲ್ಲ. ಹಾಗಾಗಿ ಬಲವಂತದ "ಸಾಮೂಹಿಕ ಮತಾಂತರ" ಮಾಡಲಾಗುತ್ತಿದೆ ಎಂಬ ಆರೋಪಕ್ಕೆ ಇಂಬುಕೊಡುವ ಯಾವ ಪುರಾವೆಯೂ ಲಭ್ಯವಾಗುವುದಿಲ್ಲ. ಬಲವಂತದ ಸಾಮೂಹಿಕ ಮತಾಂತರ ಎನ್ನುವುದು ಒಂದು ಕಟ್ಟುಕತೆ. ಇದನ್ನು ಮುಂದೆ ಇಟ್ಟುಕೊಂಡು ಕ್ರಿಶ್ಚಿಯನ್ ಧರ್ಮ ಆಚರಣೆ ಮತ್ತು ಪ್ರಚಾರವನ್ನು ಅಪರಾಧವೆಂಬಂತೆ ಬಿಂಬಿಸುವ ಸಂಚಿದು.

ಈ ವಿಷಯವನ್ನು ಇನ್ನಷ್ಟು ಹದಗೆಡಿಸುವಂತೆ ಮುಖ್ಯಮಂತ್ರಿ ಮತ್ತು ಗೃಹ ಸಚಿವರು 2021 ರ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಯನ್ನು ಮಂಡಿಸುವ ಉದ್ದೇಶವನ್ನು ಸಾರ್ವಜನಿಕವಾಗಿ ಹೇಳಿದ್ದಾರೆ.

---

[6] https://clarionindia.net/conversions-and-anti-christian-violence-in-india-prof-ram-puniyani/

[7] http://lsi.gov.in:8081/jspui/bitstream/123456789/6270/1/39965_1991_POR.pdf

[8] https://dom.karnataka.gov.in/storage/pdf-files/Sir%20Syed%20Ahmed%20Khan/DALIT%20CHRISTIANS%20-%20Moses.pdf

[9] https://www.census2011.co.in/data/religion/state/29-karnataka.html#:~:text=Christian%20Population%20in%20Karnataka%20is,0%20out%20of%2030%20districts

ಕ್ರಿಶ್ಚಿಯನ್ನರ ವಿರುದ್ಧ ಹೆಚ್ಚುತ್ತಿರುವ ದ್ವೇಷದ ಅಪರಾಧಗಳ ಹಿನ್ನೆಲೆಯಲ್ಲಿ, ಸರಣಿ ಸಮೀಕ್ಷೆಗಳು ನಡೆಸುತ್ತಿರುವ ಈ ಹೊತ್ತಿನಲ್ಲಿ, ರಾಜ್ಯದಲ್ಲಿ ಮತಾಂತರ ವಿರೋಧಿ ಕಾನೂನು ತರಬಹುದಾದ ನಿರೀಕ್ಷೆಯಿಂದ ಹಾಗೂ ರಾಜ್ಯದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲಾಗುತ್ತಿರುವ ಕಿರುಕುಳವನ್ನು ದಾಖಲಿಸಲು ನಾವು ಈ ವರದಿಯನ್ನು ತಯಾರಿಸಿದ್ದೇವೆ.

2021ರ ಜನವರಿಯಿಂದ ನವೆಂಬರ್ ವರೆಗೆ ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ವಿರುದ್ಧ ನಡೆದಿರುವ 39 ದ್ವೇಷದ ಅಪರಾಧ ಘಟನೆಗಳನ್ನು ದಾಖಲಿಸಿದ್ದೇವೆ. ಪುನರಾವರ್ತನೆಗೊಳ್ಳುತ್ತಿರುವ ದಾಳಿಗಳು ಮತ್ತವುಗಳ ತೀವ್ರತೆಯನ್ನು ಗಮನಿಸಿದರೆ ಈ ವರದಿಯಲ್ಲಿ ಬಹುಸಂಖ್ಯಾತರು ನಡೆಸುತ್ತಿರುವ ದಾಳಿಯ ಸ್ವರೂಪವನ್ನು ಕ್ರಿಶ್ಚಿಯನ್ ಸಮುದಾಯ ಹೇಳಿಕೊಂಡಂತೆ ದಾಖಲಿಸಲಾಗಿದೆ. ವಿಶೇಷವಾಗಿ ಗ್ರಾಮೀಣ ಕರ್ನಾಟಕದ ಕ್ರಿಶ್ಚಿಯನ್ ಸಮುದಾಯದ ಸದಸ್ಯರು ತಮ್ಮ ದೈನಂದಿನ ಜೀವನದಲ್ಲಿ ಹಿಂಸೆ, ತಾರತಮ್ಯ ಮತ್ತು ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನೋವುಂಡವರಿಗೆ ಮುಂದೆ ಯಾವುದೇ ಹೆಚ್ಚಿನ ಬೆದರಿಕೆಯನ್ನು ತಪ್ಪಿಸಲು ವರದಿಯಲ್ಲಿ ಪ್ರತಿಕ್ರಿಯಿಸಿದವರ ಹೆಸರನ್ನು ಬದಲಾಯಿಸಿದ್ದೇವೆ.

ಕ್ರಿಶ್ಚಿಯನ್ನರ ಮೇಲೆ ಕರ್ನಾಟಕದಲ್ಲಾಗುತ್ತಿರುವ ದಾಳಿಗಳಿಗೆ ಪ್ರತಿಕ್ರಿಯೆಯಾಗಿ ಈ ವರದಿಯಲ್ಲಿ ಈ ಕೆಳಗಿನ ಅಂಶಗಳನ್ನು ದಾಖಲು ಮಾಡಲಾಗಿದೆ.

1. 2021 ಜನವರಿ ಯಿಂದ ನವೆಂಬರ್ ವರೆಗೆ ಕರ್ನಾಟಕದಲ್ಲಿ ಪಾದ್ರಿಗಳು, ಅನುಯಾಯಿಗಳು ಮತ್ತು ಚರ್ಚ್‌ಗಳ ಮೇಲೆ ನಡೆದಿರುವ ದಾಳಿಗಳು.
2. ಈ ದಾಳಿಗಳ ಹಿಂದಿರುವ ಹಿಂದುತ್ವ ಗುಂಪುಗಳ ಕಾರ್ಯವೈಖರಿ (ಮೋಡಸ್ ಆಪರೆಂಡಿ)
3. ಈ ದಾಳಿಗಳಿಂದ ಕಾಣಸಿಗುವ ಮಾದರಿಗಳು (ಅಪರಾಧ ಮಾದರಿಗಳು)

ರಾಜ್ಯದ ವಿವಿಧ ಭಾಗಗಳಲ್ಲಿ ಕೋಮುವಾದಿಗಳಿಂದ ದಾಳಿಗೊಳಗಾದ ವಿವಿಧ ಪಾದ್ರಿಗಳಿಗೆ ನಮ್ಮ ತಂಡವು ಕರೆ ಮಾಡಿ ಭೇಟಿ ಮಾಡುವ ಕೆಲಸ ಮಾಡಿತು. ಹೀಗೆ ಮಾಡಿದ್ದು ಸಂತ್ರಸ್ಥರು ಎದುರಿಸಿದ ಸನ್ನಿವೇಷಗಳು ಮತ್ತು ಸಮಸ್ಯೆಗಳನ್ನು ಅವರಿಂದಲೇ ಆಲಿಸಲು ಮತ್ತು ಅವರಿಗೆ ಅಗತ್ಯವಿರುವ ಕಾನೂನು ನೆರವು ನೀಡಲೆಂದು. 2021 ರಲ್ಲಿ ವಿವಿಧ ಭಾಗದ 39 ಪಾದ್ರಿಗಳ ಬಗೆಗೆ ವಸ್ತುನಿಷ್ಟವರದಿಯನ್ನು ನಾವು ತಯಾರು ಮಾಡುವ ಅವಧಿಯಲ್ಲಿಯೇ ಇನ್ನಷ್ಟು ಕಡೆ ದಾಳಿಗಳಾಗಿವೆ. ಆ ದಾಳಿಗಳ ಬಗ್ಗೆ ಸ್ಥಳೀಯ ಮಾಧ್ಯಮಗಳಲ್ಲಿ ವರದಿಯೂ ಆಗಿಲ್ಲ ಮತ್ತು ಅವರಿಗೆ ಅಗತ್ಯ ಕಾನೂನು ನೆರವು ಹಾಗೂ ಹಣಕಾಸಿನ ನೆರವು ಕೂಡಾ ಸಿಕ್ಕಿಲ್ಲ. ಈ ವರದಿ ತಯಾರಿಸುವುದಕ್ಕೂ ಮುನ್ನ ಎಪಿಸಿಆರ್ ಮತ್ತು ಯುಸಿಎಫ್ ಕಳೆದ 9 ತಿಂಗಳ ಅವಧಿಯಲ್ಲಿ ಕ್ರಿಶ್ಚಿಯನ್ನರ ಮೇಲಾಗಿರುವ 300 ದಾಳಿಗಳನ್ನು ದಾಖಲಿಸಿದೆ.[10] ಅದೊಂದು ಮಹತ್ವದ ವರದಿಯಾಗಿದ್ದು, ದೇಶದಲ್ಲಿ ಕ್ರಿಶ್ಚಿಯನ್ನರ ವಿರುದ್ಧ ನಡೆಯುತ್ತಿರುವ ದಾಳಿಗಳ ಪ್ರಮಾಣವನ್ನು ಕಾಣಿಸುತ್ತದೆ. ಈ ವರದಿಯಲ್ಲಿ ನಾವು ಕರ್ನಾಟಕ ರಾಜ್ಯದ

[10] https://thewire.in/communalism/india-violence-hate-against-christians-hindutva-religious-conversion-report

ಭೌಗೋಳಿಕ ಪ್ರದೇಶಕ್ಕೆ ಸೀಮಿತವಾದಂತೆ ದಾಖಲಿಸಿದ್ದೇವಾದರೂ ಈ ದಾಳಿಗಳನ್ನು ಅರ್ಥಮಾಡಿಕೊಳ್ಳಲು ವಿಶಾಲ ಚೌಕಟ್ಟನ್ನು ಒದಗಿಸಿದ್ದೇವೆ.

ಮತಾಂತರ ವಿರೋಧಿ ಕಾನೂನು ಇಲ್ಲದಿದ್ದರೂ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲಿನ ದಾಳಿ ಪ್ರತಿವಾರ ನಡೆಯುತ್ತಿರುವ ವಿದ್ಯಮಾನವಾಗಿದೆ. ಇನ್ನು ಅಂಥದೊಂದು ಕಾನೂನು ತಂದಲ್ಲಿ ಕ್ರಿಶ್ಚಿಯನ್ ಸಮುದಾಯಕ್ಕೆ ಕೆಟ್ಟ ದಿನಗಳು ಎದುರಾಗಲಿವೆ ಅಂತೆಯೇ ಈ ಕಾನೂನು ಸಮುದಾಯಗಳ ಮೇಲೆ ಕಣ್ಣಿಟ್ಟಿರುವವರಿಗೆ ದಾಳಿ ಮಾಡಲು ಪೂರ್ಣ ಸ್ವಾತಂತ್ರ ಒದಗಿಸುತ್ತದೆ.

ಈ ದಾಳಿಗಳು ಶ್ರೀ ಬಸವರಾಜ ಬೊಮ್ಮಾಯಿ ಅವರು ಗೃಹ ಮಂತ್ರಿಯಾಗಿದ್ದಾಗ ಮತ್ತು ಮುಖ್ಯಮಂತ್ರಿಯಾಗಿ ಆಡಳಿತ ನಡೆಸುತ್ತಿರುವ ಸಂದರ್ಭದಲ್ಲಿ ನಡೆದಿವೆ ಎಂಬುದು ಗಮನಿಸಬೇಕಾದ ಸಂಗತಿ. ವಿಪರ್ಯಾಸವೆಂದರೆ ಬಸವರಾಜ ಬೊಮ್ಮಾಯಿ ಅವರ ತಂದೆ ಶ್ರೀ ಎಸ್.ಆರ್ ಬೊಮ್ಮಾಯಿ ಅವರು ನಿರಂಕುಶ ರಾಷ್ಟಪತಿ ಆಳ್ವಿಕೆಯ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು.  ಸುಪ್ರೀಂ ಕೋರ್ಟ್ ಧರ್ಮ ಮತ್ತು ರಾಜಕೀಯದ ಬಗ್ಗೆ ವಿಮರ್ಶಾತ್ಮಕ ಅವಲೋಕನಗಳನ್ನು ಮಾಡಿತು. ಎಸ್.ಆರ್. ಬೊಮ್ಮಾಯಿ ಮತ್ತು ಒಕ್ಕೂಟ ಸರ್ಕಾರದ[11] ನಡುವಣೆ ಇದ್ದ ಈ ಕೇಸಿನ ಬಗೆಗೆ ಕೋರ್ಟ್ ಈ ರೀತಿಯಾಗಿ ಹೇಳಿದೆ

> *"148. ನಮ್ಮ ಸಂವಿಧಾನದ ಅಡಿಯಲ್ಲಿ ಜಾತ್ಯತೀತತೆಯ ಚರ್ಚೆಯಿಂದ ಎದ್ದುಕಾಣುವ ಅಂಶವೇನೆಂದರೆ ಧರ್ಮಗಳು, ಧಾರ್ಮಿಕ ಪಂಗಡಗಳು ಮತ್ತು ಉಪ ಪಂಗಡಗಳ ಬಗೆಗೆ ಪ್ರಭುತ್ವದ ಯಾವುದೇ ದೋರಣೆಯನ್ನು ರಾಜ್ಯದ ಜಾತ್ಯತೀತ ದೋರಣೆಯೊಂದಿಗೆ ಬೆರೆಸಲಾಗುವುದಿಲ್ಲ. ವಾಸ್ತವವಾಗಿ, ಜಾತ್ಯತೀತ ಚಟುವಟಿಕೆಗಳಲ್ಲಿ ಧರ್ಮದ ಅತಿಕ್ರಮಣವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ನಾವು ಮೇಲೆ ಉಲ್ಲೇಖಿಸಿರುವ ಸಂವಿಧಾನದ ನಿಬಂಧನೆಗಳಲ್ಲಿ ಈ ಅಂಶವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಧರ್ಮ ಅಥವಾ ಧರ್ಮಗಳ ಬಗೆಗೆ ಪ್ರಭುತ್ವದ ಸಹಿಷ್ಣುತೆಯು ಅದನ್ನು ಧಾರ್ಮಿಕ ಅಥವಾ ದೇವಪ್ರಭುತ್ವದ ರಾಜ್ಯವನ್ನಾಗಿ ಮಾಡುವುದಿಲ್ಲ. ಪ್ರಭುತ್ವವು ತನ್ನ ನಾಗರಿಕರಿಗೆ ಧರ್ಮಗಳನ್ನು ಅಭ್ಯಾಸ ಮಾಡಲು ಮತ್ತು ಪ್ರತಿಪಾದಿಸಲು ಅನುಮತಿಸುವುದೆಂದರೆ ಅದು ಸೂಚ್ಯವಾಗಿ ಧರ್ಮವನ್ನು ರಾಜ್ಯದ ಧಾರ್ಮಿಕೇತರ ಮತ್ತು ಜಾತ್ಯತೀತ ಚಟುವಟಿಕೆಗಳಲ್ಲಿ ಪರಿಚಯಿಸಲು ಅನುಮತಿ ನೀಡಿದಂತಲ್ಲ. ಧರ್ಮಕ್ಕೆ ನೀಡಲಾದ ಸ್ವಾತಂತ್ರ್ಯ ಅವರ ಆಯ್ಕೆಯ ಆಧ್ಯಾತ್ಮಿಕ ಜೀವನವನ್ನು ಅನುಸರಿಸಲು ಅನುಮತಿಸುವ ಮಟ್ಟಿಗೆ ಮಾತ್ರ ಇರುತ್ತದೆಯೇ ವಿನಃ ಅದು ಜಾತ್ಯಾತೀತೆಯ ಜೀವನಕ್ಕಿಂತ ಭಿನ್ನವಾದುದಾಗಿದೆ."*

ಕ್ರಿಶ್ಚಿಯನ್ನರ ವಿರುದ್ಧದ ಈ ದ್ವೇಷದ ಅಪರಾಧಗಳನ್ನು ಸಮಗ್ರವಾಗಿ ಗ್ರಹಿಸಲು ನಡೆದಿರುವ ದಾಳಿಗಳ ಮಾದರಿಗಳನ್ನು ವಿಸ್ತೃತವಾಗಿ ಅರ್ಥಮಾಡಿಕೊಳ್ಳುವಂತೆ ರಚಿಸಲಾಗಿದೆ. ನಾವು ಆರು ನಮೂನೆಗಳನ್ನು ಗುರುತಿಸುತ್ತೇವೆ ಅವುಗಳೆಂದರೆ ಕ್ರಿಶ್ಚಿಯನ್ನರ ವಿರುದ್ಧದ ದ್ವೇಷದ ಅಪರಾಧಗಳು, ಸಾಂಕ್ರಾಮಿಕ ನಂತರದ ದಿನಗಳಲ್ಲಿ ಕರ್ನಾಟಕದಲ್ಲಿ ಆತಂಕದಿಂದ ಬದುಕಬೇಕಾದ ಸ್ಥಿತಿ, ದ್ವೇಷದ ಅಪರಾಧ ಎಸಗುವ ಅಪರಾಧಿಗಳು, ಆತ್ಮಾಭಿಮಾನಕ್ಕೆ ದಕ್ಕೆ ತರುವ ಜಾತಿನಿಂದನೆ, ಸಣ್ಣ ಸಮುದಾಯದ ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿ,  ದ್ವೇಷದ ಅಪರಾಧಗಳ ಬಗೆಗೆ ಪೊಲೀಸರ ಜಡಿಲತೆ ನಂತರ ಸಮುದಾಯಗಳನ್ನು ಕಡೆಗಣಿಸುವುದರಿಂದಾಗುವ ದೂರಗಾಮಿ ಪರಿಣಾಮಗಳ ಬಗ್ಗೆ ಮೌಲ್ಯಮಾಪನ ಮಾಡಿದ್ದೇವೆ.

---

[11] 1994 SCC (3)

ಅಧ್ಯಾಯ 2 ಧರ್ಮದ ಆಚರಣೆ, ಪ್ರತಿಪಾದನೆ, ಪ್ರಚಾರ ಮಾಡುವುದು ಸಂವಿಧಾನಿಕ ಹಕ್ಕು- ಈ ಅಧ್ಯಾಯದಲ್ಲಿ ನಾವು ಧರ್ಮದ ಸಾಂವಿಧಾನಿಕ ಹಕ್ಕಿನ ಬಗೆಗೆ ಗಮನಹರಿಸಿದ್ದೇವೆ. ಇದು ನಮಗೆ ಕಾನೂನಿನ ಪ್ರಕಾರ ಹೇಗಿರಬೇಕು ಮತ್ತು ವಾಸ್ತವದ ಸ್ಥಿತಿಗತಿಗಳ ಬಗೆಗೆ ವ್ಯತಿರಿಕ್ತ ಸ್ಥಿತಿಯನ್ನು ಕಾಣಿಸುತ್ತದೆ. ಇದು ಸಂವಿಧಾನದ 25 ನೇ ವಿಧಿಯನ್ನು ಅಭಿವ್ಯಕ್ತಿಗೊಳಿಸುವ ಐತಿಹಾಸಿಕ ಹಿನ್ನೆಲೆಯನ್ನು ನಮಗೆ ಒದಗಿಸುತ್ತದೆ.

ಅಧ್ಯಾಯ 3 ರಲ್ಲಿ ಸ್ವಾಂತ್ರ್ಯ ನಂತರದ ದಿನಗಳಲ್ಲಿ ಭಾರತದ ವಿವಿಧ ರಾಜ್ಯಗಳಲ್ಲಿನ ಧರ್ಮದ ಸ್ವಾತಂತ್ರ್ಯದ ಕಾನೂನುಗಳ ಇತಿಹಾಸವನ್ನು ಗುರುತಿಸುತ್ತದೆ. ಇಲ್ಲಿ ಕಾನೂನುಗಳಿಗೆ ಆದ ಮಾರ್ಪಾಡುಗಳು ಮತ್ತು ಆ ಮಾರ್ಪಾಡುಗಳು ನಂಬಿಕೆಯ ಆಚರಣೆಯನ್ನು ಅಪರಾಧೀಕರಿಸುವಲ್ಲಿ ಯಾವ ರೀತಿಯಾಗಿ ಪಾತ್ರವಹಿಸಿದವು ಎಂಬುದನ್ನು ಕಾಣಿಸುತ್ತದೆ.

ಅಧ್ಯಾಯ 4 ಮತಾಂತರವೆಂಬ ಕಟ್ಟುಕತೆಯ ಬಗೆಗೆ ಮಾಧ್ಯಮಗಳ ನೋಟವನ್ನು ಅರ್ಥೈಸುತ್ತದೆ. ಕನ್ನಡ ಟಿವಿ ಮಾಧ್ಯಮಗಳು ತನಿಖಾ ಪತ್ರಿಕೋದ್ಯಮದ ಹೆಸರಿನಲ್ಲಿ (ತಂತ್ರಗಾರಿಕೆಯಲ್ಲಿ) ಮತಾಂತರದ ಕುರಿತು ಹಿಂದುತ್ವದ ದೃಷ್ಟಿಕೋನದಲ್ಲಿ ಭಾವೋದ್ರೇಕಗೊಳಿಸುವಲ್ಲಿ ತೊಡಗಿರುವುದನ್ನು ಗುರುತಿಸಿ ದಾಖಲಿಸಲಾಗಿದೆ.

ಅಧ್ಯಾಯ 5 ದ್ವೇಷದ ಅಪರಾಧಗಳಿಗೆ ಸಮುದಾಯದ ದೃಢ ಪ್ರತಿಕ್ರಿಯೆಯನ್ನು ಚರ್ಚಿಸುತ್ತದೆ ಮತ್ತು ಯಾವುದೇ ರೂಪದಲ್ಲಿ ತರಲಿರುವ ಮತಾಂತರ ವಿರೋಧಿ ಕಾಯಿದೆಯನ್ನು ಸಾಮೂಹಿಕವಾಗಿ ವಿರೋಧಿಸುವ ಈ ಕ್ಷಣದ ಅಗತ್ಯವನ್ನು ಪ್ರಸ್ತಾಪಿಸುತ್ತದೆ. ಈ ಅಧ್ಯಾಯವು ಪ್ರಭುತ್ವ, ಮಾಧ್ಯಮ ಹಾಗೂ ಜನಸಮೂಹದಿಂದ ಕೇಳಲಾಗುತ್ತಿರುವ ಪ್ರಶ್ನೆಗಳನ್ನು ಎತ್ತಿತೋರಿಸುತ್ತದೆ. ಅಂತಿಮವಾಗಿ ನಾವು ಪ್ರಭುತ್ವ, ಮಾಧ್ಯಮ, ನಾಗರೀಕರು ಹಾಗೂ ಶಾಸಕರಿಂದ ನಾವು ನೀಡಿರುವ ಸಮಗ್ರ ಶಿಫಾರಸ್ಸುಗಳನ್ನು ಜಾರಿಗೆ ತರುವಂತೆ ಒತ್ತಾಯಿಸುತ್ತಿದ್ದೇವೆ.

# ಅಧ್ಯಾಯ ೧: ದ್ವೇಷ ಅಪರಾಧಗಳ ಮಾದರಿಗಳು

ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ಪ್ರಾರ್ಥನಾ ಸಭೆಗಳ ಮೇಲೆ ಹಿಂದುತ್ವದ ಗುಂಪುಗಳು ನಡೆಸುತ್ತಿರುವ ಹಿಂಸಾತ್ಮಕ ದಾಳಿಗಳಿಂದ ಹಿಡಿದು ಮೌಖಿಕ ನಿಂದನೆಗಳ ಪುನರಾವರ್ತನೆ ಹಾಗೂ ತೀವ್ರತೆ ಹೆಚ್ಚಾಗಿದೆ. ಮೇಲ್ನೋಟಕ್ಕೆ ಈ ದಾಳಿಗಳು ಕೆಲವು ಭೌಗೋಳಿಕ ಪ್ರದೇಶಗಳಲ್ಲಿ ಘಟಿಸುತ್ತಿವೆ ಎಂದೆನಿಸಿದರೂ ವಾಸ್ತವದಲ್ಲಿ ಕ್ರಿಶ್ಚಿಯನ್ನರನ್ನು ಎರಡನೆಯ ದರ್ಜೆಯ ಪ್ರಜೆಗಳನ್ನಾಗಿಸುವ ರಾಜಕೀಯ ದುರುದ್ದೇಶದಿಂದ ಕೂಡಿವೆ ಅಂತೆಯೇ ಕ್ರಿಶ್ಚಿಯನ್ನರಿಗೆ ಸಾಂವಿಧಾನಿಕವಾಗಿ ಪ್ರದತ್ತವಾಗಿರುವ ಧರ್ಮದ ಆಚರಣೆ ಮಾಡಲು ಬಿಡಬಾರದೆಂಬ ಉದ್ದೇಶವೂ ಈ ದಾಳಿಗಳಲ್ಲಿ ಇದೆ. ಇದರ ಮೂಲ ಎಂ.ಎಸ್. ಗೋಲ್ವಾಲ್ಕರ್ ರಾಷ್ಟ್ರೀಯತೆಯನ್ನು ಈ ರೀತಿಯಾಗಿ ಅರ್ಥೈಸುತ್ತಾರ[12]

> "ಹಿಂದೂಸ್ಥಾನದಲ್ಲಿರುವ ಹಿಂದೂಯೇತರ ಜನರು ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಳವಡಿಸಿಕೊಳ್ಳಬೇಕು. ಹಿಂದೂ ಧರ್ಮವನ್ನು ಗೌರವಿಸುವುದನ್ನು ಕಲಿಯಬೇಕು, ಹಿಂದೂ ಜನಾಂಗ ಮತ್ತು ಸಂಸ್ಕೃತಿಯ ಬಗೆಗೆ ಇರುವ ಅಸಹನೆ ಮತ್ತು ಕೃತಜ್ಞತೆಯಿಲ್ಲದ ರೀತಿ ವರ್ತಿಸಬಾರದು, ಪರಂಪರಾಗತವಾಗಿ ಬಂದಿರುವ ಈ ಧರ್ಮದ ಬಗೆಗೆ ಸಕಾರಾತ್ಮಕ ಭಾವನೆ ಹಾಗೂ ಭಕ್ತಿ ಬೆಳೆಸಿಕೊಳ್ಳಬೇಕು- ಅಥವಾ ಅವರು ವಿದೇಶಿಯರೆಂಬುದನ್ನು ಮರೆಯಬೇಕು, ಹಿಂದೂ ರಾಷ್ಟ್ರಕ್ಕೆ ಅಧೀನವಾಗಿ ಈ ದೇಶದಲ್ಲಿ ಇರಬೇಕು. ಏನನ್ನೂ ಕೇಳುವಂತಿಲ್ಲ, ಯಾವ ವಿಶೇಷ ಸೌಕರ್ಯ ಸವಲತ್ತುಗಳನ್ನೂ ಅಪೇಕ್ಷಿಸುವಂತಿಲ್ಲ, ಯಾವ ಆದ್ಯತೆಗಳೂ ಇರಬಾರದು ಮತ್ತು ಪೌರತ್ವ ಹಕ್ಕು ಕೂಡಾ ಕೇಳಬಾರದು. ಇಲ್ಲಿ ಅವರು ಬೇರೆ ಏನನ್ನೂ ಅನುಸರಿಸುವಂತಿಲ್ಲ. ನಮ್ಮದು ಪುರಾತನ ದೇಶ. ನಮ್ಮ ದೇಶದಲ್ಲಿ ಬದುಕಲಿಚ್ಛಿಸುವ ಅನ್ಯ ಧರ್ಮೀಯರೊಂದಿಗೆ ನಾವು ವ್ಯವಹರಿಸುತ್ತೇವೆ".

ಗೋಲ್ವಾಲ್ಕರ್ ಅವರು ತಮ್ಮ 'ಬಂಚ್ ಆಫ್ ಥಾಟ್ಸ್' ಪುಸ್ತಕದಲ್ಲಿ 'ಇಂಟರ್ನಲ್ ತ್ರೆಟ್ಸ್" ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಕ್ರಿಶ್ಚಿಯನ್ನರನ್ನು ಉಲ್ಲೇಖಿಸುತ್ತಾರೆ. ಅವರು ಹೀಗೆ ಹೇಳುತ್ತಾರೆ: "ಎಲ್ಲಿಯವರೆಗೆ ಕ್ರಿಶ್ಚಿಯನ್ನರು ತಮನ್ನು ಕ್ರೈಸ್ತ ಧರ್ಮ ಪ್ರಚಾರಕರೆಂದೂ ಭಾವಿಸಿಕೊಂಡು, ತಾವು ಹುಟ್ಟಿದ ನೆಲದ, ತಮ್ಮ ಪೂರ್ವಿಕರ ಈ ನೆಲದ ಸ್ಥಳೀಯ ಧರ್ಮಕ್ಕೆ ತಮ್ಮ ಮೊದಲ ವಿಧೇಯತೆ ತೋರುವುದಿಲ್ಲವೋ ಅಲ್ಲಿಯವರೆಗೆ ಅವರು ನಮ್ಮ ಶತ್ರುಗಳಾಗಿಯೇ ಇರುತ್ತಾರೆ, ಹಾಗೆಯೇ ನಡಿಸಿಕೊಳ್ಳಬೇಕು ಕೂಡಾ".[13]

ಕ್ರಿಶ್ಚಿಯನ್ನರ ವಿರುದ್ಧ ಹಿಂಸೆಗಿಳಿಯುವ ಹಿಂದುತ್ವದ ಗುಂಪುಗಳ ಕುತಂತ್ರದಲ್ಲಿ ಪೊಲೀಸರು ಭಾಗಿಯಾಗಿದ್ದಾರೆ. ಕ್ರಿಶ್ಚಿಯನ್ನರ ವಿರುದ್ಧ ನಡೆಯುವ ಹಿಂಸೆ, ಲೈಂಗಿಕ ಕಿರುಕುಳ, ಆರ್ಥಿಕ ಹಾಗೂ ಸಾಮಾಜಿಕ ಬಹಿಷ್ಕಾರಗಳ ಬಗೆಗೆ ಜಾಣ ಕುರುಡರಾಗಿದ್ದಾರೆ.

ಕೆಲವು ಘಟನೆಗಳಲ್ಲಿ ಭಾನುವಾರದ ಬೆಳಗಿನ ಪ್ರಾರ್ಥನಾ ಸಭೆಗಳಿಗೆ ದೊಡ್ಡ ಗುಂಪುಗಳು ನುಗ್ಗಿ ದೈಹಿಕವಾಗಿ ಹಲ್ಲೆ ನಡೆಸಿ ಆಸ್ತಿಪಾಸ್ತಿ ಧ್ವಂಸ ಮಾಡಿ ಮಾನಸಿಕ ಆಘಾತಕ್ಕೀಡು ಮಾಡಿದ್ದಾರೆ. ಮತ್ತೆ ಕೆಲವು ಘಟನೆಗಳಲ್ಲಿ ಸಣ್ಣ ಗುಂಪುಗಳು ಪ್ರಾರ್ಥನಾ ಸಭೆಗಳನ್ನು ಅಡ್ಡಿಪಡಿಸಿ ಕೊಲೆ ಬೆದರಿಕೆ ಹಾಕಿ ಬಲವಂತದ ಮತಾಂತರದ ಕ್ರಿಮಿನಲ್ ಆರೋಪಗಳನ್ನು ಹೊರಿಸುವ ಬೆದರಿಕೆ ಹಾಕಿ ಪ್ರಾರ್ಥನಾ ಸಭೆಗಳಿಗೆ ಅಡ್ಡಿಪಡಿಸಲಾಗಿದೆ. ಈ ದಾಳಿಗಳಲ್ಲಿ ಸಾಮಾನ್ಯ ಅಂಶವೇನೆಂದರೆ ಭಾರತೀಯ ದಂಡ ಸಂಹಿತೆ,

---

[12] Golwalkar, M.S. (1944), We or Our nationhood defined, Bharat Prakashan.

[13] M.S. Golwalkar, A bunch of thoughts cf. Christophe Jafferlot, Hindu Nationalism: A reader

1860 ರ ಸೆಕ್ಷನ್ 295 ಎ[14] ಮತ್ತು ಸೆಕ್ಷನ್ 298[15] ರ ಅಡಿಯಲ್ಲಿ ಕ್ರಿಮಿನಲ್ ಆರೋಪಗಳನ್ನು ದಾಖಲಿಸುವ ಬೆದರಿಕೆಯಾಗಿದೆ.

ಪ್ರತಿ ಬಾರಿ ಸಂತ್ರಸ್ಥರನ್ನು ಸಂಪರ್ಕಿಸಿ ಮಾತುಕತೆ ನಡೆಸುವಾಗ ಮಾತಿನ ಮಧ್ಯೆ ನೀಡುವ ಸಾಮಾನ್ಯ ಪ್ರತಿಕ್ರಿಯೆ ಎಂದರೆ ಯಾವ ಘಟನೆಯನ್ನು ಉಲ್ಲೇಖಿಸಲಾಗುತ್ತಿದೆ ಎಂಬುದರ ಬಗ್ಗೆ ಗೊಂದಲಕ್ಕೀಡಾಗುತ್ತಿದ್ದರು. ಇದು ಹಿಂದುತ್ವದ ಗುಂಪುಗಳು ಅದೆಷ್ಟು ಬಾರಿ ಇವರ ಮೇಲೆ ಆಕ್ರಮಣ ಮಾಡಿದ್ದಾರೆ ಎಂಬುದನ್ನು ತೋರಿಸುತ್ತಿದೆ. ಅಂತೆಯೇ ಒಂದು ಧರ್ಮದಲ್ಲಿ ನಂಬಿಕೆ ಇಟ್ಟುಕೊಂಡಿರುವುದಕ್ಕಾಗಿ ಸಾವಿರಾರು ಜನ ಭಯಭೀತರಾಗಿ ಬದುಕುತ್ತಿರುವ ವಾತಾವರಣವನ್ನು ಕಾಣಿಸುತ್ತದೆ.

ಅನೇಕ ಸಂದರ್ಭಗಳಲಿ ಪಾದ್ರಿಗಳು ಮತ್ತು ಅನುಯಾಯಿಗಳು ಕೇವಲ ಒಂದು ನಿರ್ದಿಷ್ಟ ದಾಳಿಯ ಆಘಾತದಿಂದ ಬಳಲುತ್ತಿಲ್ಲ. ಬದಲಿಗೆ ಧಾರ್ಮಿಕ ಅಲ್ಪಸಂಖ್ಯಾತರಾಗಿರುವ ಅವರು ನಿತ್ಯದ ಬದುಕಿನಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ನಡುವೆ ಬದುಕುತ್ತಿದ್ದಾರೆ. ಈ ಎಲ್ಲಾ 39 ದಾಳಿಗಳನ್ನು ಸಂವಿಧಾನದ 25 ನೇ ವಿಧಿಯ ಅಡಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಮೇಲಿನ ದಾಳಿ ಎಂದೇ ನೋಡಬೇಕಿದೆ.

## ೧.೧ ಧರ್ಮವನ್ನು ಮುಕ್ತವಾಗಿ ಆಚರಿಸುವ ಹಕ್ಕು

ಹೆಚ್ಚಿನ ಘಟನೆಗಳಲ್ಲಿ ಕ್ರಿಶ್ಚಿಯನ್ನರು ತಮ್ಮ ಪೂಜಾ ಸ್ಥಳಗಳನ್ನು ಮುಚ್ಚುವಂತೆ ಒತ್ತಾಯಿಸಲಾಗುತ್ತದೆ ಮತ್ತು ಅವರ ಭಾನುವಾರದ ಪ್ರಾರ್ಥನೆಗಾಗಿ ಸೇರುವುದನ್ನು ತಡೆಯಲಾಗುತ್ತಿದೆ. ಹಿಂದುತ್ವ ಗುಂಪುಗಳ ಈ ದಾಳಿಗಳು ಒಂದು ಧರ್ಮದ ಅನುಯಾಯಿಗಳು ಒಟ್ಟುಗೂಡಿ ತಮ್ಮ ನಂಬಿಕೆ ಆಚರಣೆಯನ್ನು ಸ್ವಾತಂತ್ರ್ಯವನ್ನು ಹತ್ತಿಕ್ಕುವುದೇ ಆಗಿದೆ. ಧರ್ಮ ಪ್ರಚಾರದ ಹಕ್ಕನ್ನು ಬಿಟ್ಟುಬಿಡಿ ಇಂದು ಕರ್ನಾಟಕದಲ್ಲಿ ನಡೆಯುತ್ತಿರುವ ದಾಳಿಗಳು ನಿಜವಾಗಿ ಧರ್ಮವನ್ನು ಮುಕ್ತವಾಗಿ ಪ್ರತಿಪಾದಿಸುವ ಮತ್ತು ಆಚರಿಸುವ ಹಕ್ಕನ್ನೂ ಕಿತ್ತುಕೊಳ್ಳಲಾಗಿದೆ. ಇದು ಭಾರತೀಯ ಸಂವಿಧಾನವು ಖಾತ್ರಿ ಮಾಡಿರುವ ಮೂಲಭೂತ ಹಕ್ಕಿನ ನೇರ ಉಲ್ಲಂಘನೆಯಾಗಿದೆ:

> *"ಪರಿಚ್ಛೇಧ 25. ಆತ್ಮಸಾಕ್ಷಿಯ ಸ್ವಾತಂತ್ರ ಮತ್ತು ಮುಕ್ತ ವೃತ್ತಿ, ಧರ್ಮದ ಆಚರಣೆ ಮತ್ತು ಪ್ರಚಾರ*

---

[14] "[295A. Deliberate and malicious acts, intended to outrage religious feelings of any class by insulting its religion or religious beliefs.—Whoever, with deliberate and malicious intention of outraging the religious feelings of any class of 273 [citizens of India], 274 [by words, either spoken or written, or by signs or by visible representations or otherwise], insults or attempts to insult the religion or the religious beliefs of that class, shall be punished with imprisonment of either description for a term which may extend to 4[three years], or with fine, or with both.]"

[15] "298. Uttering, words, etc., with deliberate intent to wound the religious feelings of any person.—Whoever, with the deliberate intention of wounding the religious feelings of any person, utters any word or makes any sound in the hearing of that person or makes any gesture in the sight of that person or places, any object in the sight of that person, shall be punished with imprisonment of either description for a term which may extend to one year, or with fine, or with both."

*(1) ಸಾರ್ವಜನಿಕ ಆದೇಶದನ್ವಯ ನೈತಿಕತೆ, ಆರೋಗ್ಯ ಮತ್ತು ಈ ಭಾಗದ ಇತರ ನಿಬಂಧನೆಗಳಿಗೆ ಒಳಪಟ್ಟು, ಎಲ್ಲಾ ವ್ಯಕ್ತಿಗಳು ಆತ್ಮಸಾಕ್ಷಿಯ ಸ್ವಾತಂತ್ರ್ಯಕ್ಕೆ ಸಮಾನವಾಗಿ ಅರ್ಹರಾಗಿದ್ದಾರೆ ಮತ್ತು ಧರ್ಮವನ್ನು ಪ್ರತಿಪಾದಿಸಲು, ಅಭ್ಯಾಸ ಮಾಡಲು ಮತ್ತು ಪ್ರಚಾರ ಮಾಡಲು ಮುಕ್ತವಾಗಿ ಹಕ್ಕನ್ನು ಹೊಂದಿದ್ದಾರೆ."*

ಗ್ರಾಮೀಣ ಮತ್ತು ಅರೆ-ಗ್ರಾಮೀಣ ಕರ್ನಾಟಕದ ಕ್ರಿಶ್ಚಿಯನ್ ಸಮುದಾಯವು ಬಡ ಹಿನ್ನೆಲೆಯಿಂದ ಬಂದವರು ಮತ್ತು ಹೆಚ್ಚಾಗಿ ದಲಿತ ಮತ್ತು ಕೆಳ ಜಾತಿಯ ಸಮುದಾಯಗಳಿಂದ ಬಂದವರು ಎಂಬುದನ್ನು ಗಮನಿಸುವುದು ಬಹಳ ಮುಖ್ಯ. ಭಾನುವಾರ ಬೆಳಿಗ್ಗೆ ನಡೆಯುವ ಪ್ರಾರ್ಥನಾ ಸಭೆಗಳು ಇವರಿಗೆ ಬೆಂಬಲ ಮತ್ತು ನೈತಿಕ ಸ್ಥೈರ್ಯ ಒದಗಿಸುವ ಪ್ರಮುಖ ಸ್ಥಳಗಳಾಗಿವೆ. ಈ ಸ್ಥಳಗಳು ಅನುಯಾಯಿಗಳ ಧಾರ್ಮಿಕ ಅಭಿವ್ಯಕ್ತಿ ಮತ್ತು ಭವಿಷ್ಯದಲ್ಲಿ ಭರವಸೆಯ ಭಾವನೆ ಎರಡನ್ನೂ ಕಟ್ಟುಕೊಡುತ್ತಿವೆ.

ಇಂಥಃ ಪ್ರಾರ್ಥನಾ ಸಭೆಗಳನ್ನು ಮುಚ್ಚುವಂತೆ ಹಿಂದುತ್ವ ಗುಂಪುಗಳಿಂದ ಪಾದ್ರಿಗಳಿಗೆ ಬೆದರಿಕೆ ಬಂದಾಗ, ಅದು ಅವರ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಸಂಪೂರ್ಣ ಉಲ್ಲಂಘನೆ ಮಾತ್ರವಲ್ಲದೆ ಇಡೀ ಸಮುದಾಯದ ಘನತೆಯ ಹಕ್ಕನ್ನು ಕಸಿದುಕೊಳ್ಳುತ್ತದೆ ಮತ್ತು ಮಾನಸಿಕ ಸ್ಥರ್ಯವನ್ನು ಕುಗ್ಗಿಸುತ್ತದೆ.

ಅನೇಕ ಸ್ಥಳಗಳಲ್ಲಿ ದಾಳಿಯನ್ನು ಎದುರಿಸಿದ ನಂತರ ಅಥವಾ ರಾಜ್ಯದ ವಿವಿಧ ಭಾಗಗಳಲ್ಲಿ ಕ್ರಿಶ್ಚಿಯನ್ನರ ಮೇಲಿನ ದಾಳಿಗಳ ಬಗ್ಗೆ ಕೇಳಿದ ನಂತರ, ಸಮುದಾಯದ ಸದಸ್ಯರು ಭಯಭೀತರಾಗಿದ್ದಾರೆ. ದಾಳಿಯ ನಂತರ, ಅನೇಕ ಸ್ಥಳಗಳಲ್ಲಿ ಪ್ರಾರ್ಥನಾ ಸಭೆಗಳನ್ನು ಸ್ಥಗಿತಗೊಳಿಸಲಾಗಿದೆ. ಎಲ್ಲೆಡೆ ಕ್ರಿಶ್ಚಿಯನ್ನರಲ್ಲಿ ಭಯವಿದೆ. ಈ ಭಯವು ತಮ್ಮ ಘನತೆಯುತವಾದ ಬದುಕು ಮತ್ತು ಅಸ್ತಿತ್ವಕ್ಕೆ ಅಡ್ಡಿಯಾಗಿದೆ.

ತಮ್ಮ ಧರ್ಮದ ಆಯ್ಕೆಯ ಕಾರಣಕ್ಕಾಗಿಯೇ ಹಲವಾರು ಕ್ರೈಸ್ತರು ತಮ್ಮ ಮನೆಗಳಲ್ಲಿಯೇ ಹಿಂಸಾತ್ಮಕವಾಗಿ ದಾಳಿಗೊಳಗಾಗುತ್ತಿದ್ದಾರೆ. ಜೈಲಿನಲ್ಲಿ ದಿನಗಟ್ಟಲೆ ಕಳೆಯುತ್ತಿದ್ದಾರೆ. ಅಪರಾಧಿಗಳೆಂಬಂತೆ ಬಿಂಬಿಸಲಾಗುತ್ತಿದೆ. ಅವಮಾನಕ್ಕೊಳಗಾಗಿದ್ದಾರೆ ಮತ್ತು ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ. ಇದು ಇಂದಿನ ಕರ್ನಾಟಕ ರಾಜ್ಯ ಪ್ರಾಯೋಜಿಸುತ್ತಿರುವ ಹಿಂದುತ್ವ ಉಗ್ರವಾದದ ಪರಿಣಾಮ.

ಈ ದಾಳಿಗಳು ನಡೆಯುವ ವಿಧಾನವನ್ನು ಸ್ಥೂಲವಾಗಿ ಈ ಕೆಳಗಿನ ಹತ್ತು ಹಂತಗಳಲ್ಲಿ ಅರ್ಥೈಸಿಕೊಳ್ಳಬಹುದು:





ಈ ದುಷ್ಕರ್ಮಿಗಳ ಗುಂಪು ಹತ್ತಿರದ ಪೊಲೀಸ್ ಠಾಣೆಗೆ ಕರೆ ಮಾಡಿ ತಾವು ನಡೆಸಲಿರುವ ದಾಳಿಯ ಬಗ್ಗೆ ಮಾಹಿತಿ ನೀಡುತ್ತದೆ. ಬಹುತೇಕ ಎಲ್ಲಾ ಪ್ರಕರಣಗಳಲ್ಲಿ ಪೊಲೀಸರು ಈ ದುಷ್ಕರ್ಮಿಗಳ ಗುಂಪಿನ ನಂತರವಷ್ಟೇ ಸ್ಥಳಕ್ಕೆ ಆಗಿಮಿಸುತ್ತಾರೆ ಮತ್ತು ಕ್ರಿಶ್ಚಿಯನ್ನರನ್ನು ರಕ್ಷಿಸಲು ವಿಫಲರಾಗುತ್ತಾರೆ.




ಈ ದುಷ್ಕರ್ಮಿಗಳ ಗುಂಪು ಹತ್ತಿರದ ಪೊಲೀಸ್ ಠಾಣೆಗೆ ಕರೆ ಮಾಡಿ ತಾವು ನಡೆಸಲಿರುವ ದಾಳಿಯ ಬಗ್ಗೆ ಮಾಹಿತಿ ನೀಡುತ್ತದೆ. ಬಹುತೇಕ ಎಲ್ಲಾ ಪ್ರಕರಣಗಳಲ್ಲಿ ಪೊಲೀಸರು ಈ ದುಷ್ಕರ್ಮಿಗಳ ಗುಂಪಿನ ನಂತರವಷ್ಟೇ ಸ್ಥಳಕ್ಕೆ ಆಗಿಮಿಸುತ್ತಾರೆ ಮತ್ತು ಕ್ರಿಶ್ಚಿಯನ್ನರನ್ನು ರಕ್ಷಿಸಲು ವಿಫಲರಾಗುತ್ತಾರೆ.




ಕನಿಷ್ಠ 25 ರಿಂದ 30 ಮಂದಿ ಗೇಟುಗಳು, ಬಾಗಿಲುಗಳು ಮತ್ತು ಗಾಜುಗಳನ್ನು ಕೆಡವಿ ಪೂಜಾ ಸ್ಥಳಕ್ಕೆ ಪ್ರವೇಶಿಸುತ್ತಾರೆ ಮತ್ತು ಹಿಂದೂಗಳನ್ನು ಕ್ರೈಸ್ತ ಧರ್ಮಕ್ಕೆ 'ಬಲವಂತವಾಗಿ ಮತಾಂತರಿಸುವುದಕ್ಕಾಗಿ' ಪಾದ್ರಿಗಳನ್ನು ನಿಂದಿಸುತ್ತಾರೆ.





ಈ ದುಷ್ಕರ್ಮಿಗಳ ಗುಂಪು ಜಾತಿ ನಿಂದನೆಯಲ್ಲಿ ತೊಡಗುತ್ತಾರೆ ಮತ್ತು ಭಯದಲ್ಲಿರುವ ಮಕ್ಕಳ ಕಣ್ಣುಮುಂದೆಯೇ ಅಲ್ಲಿ ನೆರೆದಿರುವವರನ್ನು ದೊಣ್ಣೆಗಳಿಂದ, ರಾಡುಗಳಿಂದ  ಅಥವಾ ಬರೀ ಕೈಗಳಿಂದ ಹಿಂಸಾತ್ಮಕವಾಗಿ ಥಳಿಸುತ್ತಾರೆ.





ಅಲ್ಲಿರುವ ಮಹಿಳೆಯರನ್ನು ನಿಂದಿಸಿ, ಅವರ ಮೇಲೆ ದೈಹಿಕವಾಗಿ ಮತ್ತು ಲೈಂಗಿಕವಾಗಿ ಹಲ್ಲೆ ನಡೆಸುತ್ತಾರೆ ಮತ್ತು ಈ ಮಹಿಳೆಯರು ಅದನ್ನು ಪ್ರತಿರೋಧಿಸಿದರೆ, ಈ ಹಲ್ಲೆಗಳು ಇನ್ನಷ್ಟೂ ತೀವ್ರವಾಗುತ್ತದೆ.





ಇವೆಲ್ಲ ನಡೆದ ಸರಿಯಾಗಿ  ೫ ರಿಂದ ೧೦ ನಿಮಿಷಗಳ ನಂತರ ಪೊಲೀಸರು ಪ್ರವೇಶಿಸುತ್ತಾರೆ ಮತ್ತು ಪಾದ್ರಿಗಳು ಹಾಗು ಭಕ್ತರೊಟ್ಟಿಗೆ ಅದೇ ರೀತ್ಯ ನಿಂದನೀಯ ಭಾಷೆಯನ್ನು ಬಳಸುತ್ತಾರೆ. ಅಲ್ಲದೆ, ಅವರ ಗುರುತಿನ ದಾಖಲೆಗಳನ್ನು ನೀಡುವಂತೆ ಉಗ್ರವಾಗಿ ಒತ್ತಾಯಿಸುತ್ತಾರೆ.




ಪ್ರಾರ್ಥನಾ ಸಭೆಯ ಮೇಲಿನ ಹಿಂಸಾತ್ಮಕ ದಾಳಿಯನ್ನು ದುಷ್ಕರ್ಮಿಗಳ ಗುಂಪಿನ ಯಾರಾದರೊಬ್ಬರು ತಮ್ಮ ಫೋನಿನಲ್ಲಿ ಚಿತ್ರೀಕರಿಸುತ್ತಾರೆ. 'ಕ್ರಿಶ್ಚಿಯನ್ ಪಡೆಗಳ' ವಿರುದ್ಧದ ವಿಜಯವಾಗಿ ಮತ್ತು ತಮ್ಮ ಧರ್ಮಾಚರಣೆಯ ಮೂಲಭೂತ ಹಕ್ಕನ್ನು ಪ್ರತಿಪಾದಿಸುವವರಲ್ಲಿ ಭಯವನ್ನು ಹುಟ್ಟುಹಾಕಲು ಇದನ್ನು ಹರಿಬಿಡಲಾಗುತ್ತದೆ.




ಪೊಲೀಸರು ಪಾದ್ರಿ ಮತ್ತು ಭಕ್ತರನ್ನು ಬಲವಂತವಾಗಿ ಸ್ಥಳೀಯ ಪೊಲೀಸ್ ಠಾಣೆಗೆ ಕರೆದೊಯ್ದು, ಇವರ ವಿರುದ್ಧ ಭಾರತೀಯ ದಂಡ ಸಂಹಿತೆ (IPC) 1860 ರ ಸೆಕ್ಷನ್ 295A ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸುತ್ತಾರೆ. ತಮ್ಮ ಧರ್ಮವನ್ನು ಆಚರಿಸುವ ಮುಗ್ಧ ಜನರನ್ನು ಬಂಧಿಸಲಾಗುತ್ತದೆ.




ತಮಗೆ ಲಭ್ಯವಿರುವ ಕಾನೂನು ಸಹಾಯ ಮತ್ತು ಸಂಪನ್ಮೂಲಗಳನ್ನು ಅವಲಂಬಿಸಿ ಕೆಲವು ಕ್ರಿಶ್ಚಿಯನ್ನರು ಜೈಲಿನಿಂದ ಬಿಡುಗಡೆಯನ್ನು ಪಡೆದುಕೊಳ್ಳುತ್ತಾರೆ. ಆದಾಗ್ಯೂ ಅವರು ತೀವ್ರ ಆಘಾತಕ್ಕೆ ಒಳಗಾಗುತ್ತಾರೆ ಮತ್ತು ತಮ್ಮ ಮೇಲೆ ಹೂಡಲಾಗಿರುವ ಪ್ರಕರಣಗಳನ್ನು ಎದುರಿಸುವುದನ್ನು ಮುಂದುವರೆಸಬೇಕಾಗುತ್ತದೆ.




ಕ್ರಿಶ್ಚಿಯನ್ ಧರ್ಮವನ್ನು ಆಚರಿಸುವ ನಾಗರಿಕರು ಸಾಮಾಜಿಕ ಬಹಿಷ್ಕಾರವನ್ನು ಎದುರಿಸುತ್ತಾರೆ ಮತ್ತು ಶಾಲೆಗಳು, ಸ್ಥಳೀಯ ವ್ಯಾಪಾರಗಳು, ಪಂಚಾಯತ್ ಸದಸ್ಯರು, ಭೂಮಾಲೀಕರು, ಉದ್ಯೋಗದಾತರಿಂದ ನಿರಂತರ ಬೆದರಿಕೆಗಳನ್ನು ಎದುರಿಸುತ್ತಾರೆ. ಅವರು ತಮ್ಮ ಜೀವನೋಪಾಯವನ್ನು ಕಳೆದುಕೊಳ್ಳುತ್ತಾರೆ ಮತ್ತು ಬಹಳಷ್ಟು ಬಾರಿ ತಮ್ಮ ಬಾಡಿಗೆ ಮನೆಗಳಿಂದ ಹೊರ ದೂಡಲ್ಪಡುತ್ತಾರೆ. ಅವರನ್ನು ಎರಡನೇ ದರ್ಜೆಯ ಪ್ರಜೆಗಳ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತದೆ. ಅವರ ಮೂಲಭೂತ ಹಕ್ಕನ್ನು ಪ್ರತಿಪಾದಿಸಿದ್ದಕ್ಕಾಗಿ ಅವರ ಘನತೆಯನ್ನು ಕಸಿದುಕೊಳ್ಳಲಾಗುತ್ತದೆ.

ಈ ಯೋಜಿತ ಕಾರ್ಯವಿಧಾನವು ಪ್ರತಿವಾರ ದಾಳಿಗಳು ಹೇಗೆ ನಡೆಯುತ್ತಿವೆ ಎಂಬುದನ್ನು ಕ್ರಮವಾಗಿ ಅರ್ಥೈಸುತ್ತದೆ. ಈ ದಾಳಿಗಳಲ್ಲಿ ಉಳಿದಿರುವ ಸಂತ್ರಸ್ಥರು ತಂತಮ್ಮ ಪ್ರದೇಶಗಳಲ್ಲಿ ಯಾವಾವ ದಿನಗಳಂದು ದ್ವೇಷ ಅಪರಾಧಗಳಿಗೆ ಸಿಲುಕಿದ್ದರು ಮತ್ತು ಆ ಸಂಬಂಧ ದಾಖಲಾಗಿರುವ ದೂರುಗಳನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ. ದಾಳಿಗಳ ಕಾರ್ಯವಿಧಾನವನ್ನು ಅರ್ಥ ಮಾಡಿಕೊಳ್ಳುವುದರ ಜೊತೆಗೆ ಕ್ರಿಶ್ಚಿಯನ್ನರನ್ನು ತುಳಿಯುವುದಕ್ಕೆ ಅನುಸರಿಸುತ್ತಿರುವ ದಾಳಿಗಳ ಮಾದರಿಯನ್ನು ಗುರುತಿಸಬಹುದಾಗಿದೆ. ಈ ಮಾದರಿಗಳನ್ನು ಗಮನಿಸಿದರೆ ದಾಳಿಕೋರರನ್ನು (ಅಪರಾದವೆಸಗುತ್ತಿರುವವರನ್ನು) ಮತ್ತು ಅವರ ನಂಬಿಕೆಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ.

## ೧.೨ ಕ್ರಿಶ್ಚಿಯನ್ನರ ವಿರುದ್ಧ ದ್ವೇಷ ಅಪರಾಧಗಳು

ಪಾದ್ರಿಗಳು, ಕ್ರೈಸ್ಥ ಧರ್ಮದ ಅನುಯಾಯಿಗಳು ಮತ್ತು ಚರ್ಚ್ ಗಳ ಮೇಲೆ ನಡೆದಿರುವ ಈ ಎಲ್ಲಾ ದಾಳಿಗಳು ವಾಸ್ಥವವಾಗಿ ದ್ವೇಷದ ಅಪರಾಧಗಳು. ದ್ವೇಷ ಅಪರಾಧಗಳು ಒಬ್ಬ ವ್ಯಕ್ತಿ ಅಥವಾ ಒಂದು ಸಾಮಾಜಿಕ ಗುಂಪಿಗೆ ಸೇರಿದವರ ಮೇಲೆ ನಡೆಸುವ ದಾಳಿ ಎಂದು ಪರಿಗಣಿಸಲ್ಪಡುತ್ತವೆ. ಇಂಗ್ಲೇಂಡ್ ನಲ್ಲಿ "ಜನಾಂಗ, ಧರ್ಮ, ಲೈಂಗಿಕ ಅಲ್ಪಸಂಖ್ಯಾತರು, ದೈಹಿಕ ವಿಕಲಾಂಗತೆ ಇತ್ಯಾದಿ ವ್ಯಕ್ತಿಗಳು ಅಥವ ಗುಂಪುಗಳ ಮೇಲಿನ ಹಗೆತನದಿಂದ ನಡೆಯುವ ಅಪರಾಧಗಳನ್ನು ದ್ವೇಷ ಅಪರಾಧ" ಎಂದು ಹೇಳಲಾಗುತ್ತದೆ.[16] ಭಾರತದ ಸಂದರ್ಭಕ್ಕೆ ಸಾಮಾಜಿಕ ಗುಂಪುಗಳು ಮತ್ತು ಲಿಂಗವನ್ನು ಅವುಗಳೊಟ್ಟಿಗೆ ಸೇರಿಸಬೇಕಿದೆ.

ತೆಹಸೀನ್ ಪೂನ್ವಾಲಾ ಮತ್ತು ಭಾರತದ ಒಕ್ಕೂಟದ[17] ನಡುವಣ ಮೊಖದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ದ್ವೇಷ ಅಪರಾಧವನ್ನು ಈ ರೀತಿಯಾಗಿ ಹೇಳಿದೆ

*"20. ದ್ವೇಷ ಅಪರಾಧವು ಅಸಹನೆಯ ರೂಪ, ತತ್ವದ ಪ್ರಾಬಲ್ಯ, ಸಹಿಸಬಾರದೆಂಬ ಪೂರ್ವಾಗ್ರಹ; ಭಯೋತ್ಪಾದನೆಯ ಆಳ್ವಿಕೆಯಲ್ಲಿ ಫಲಿತಗೊಳ್ಳುತ್ತದೆ. ಕಾನೂನೇತರರು ಮತ್ತು ಪ್ರಭುತ್ವ ಹೊರತುಪಡಿಸಿ ಬೇರಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಲು ಬಿಡಬಾರದು. ನ್ಯಾಯಾಂಗ ವ್ಯವಸ್ಥೆಯ ಆಚೆನವರು ಅಥವಾ ಪ್ರಭುತ್ವ ಅಥವ ರಾಜ್ಯದ ಅಧಿಕಾರ ಸ್ಥಾನದಲ್ಲಿಲ್ಲದ ವ್ಯಕ್ತಿ ಅಥವ ಸಂಸ್ಥೆಗಳು ಕಾನೂನು ಜಾರಿಗೊಳಿಸಲು ಅವಕಾಶವಿಲ್ಲ. ಬಹುತ್ವ ಮತ್ತು ವೈವಿಧ್ಯತೆಯ ಸ್ಥರದಲ್ಲಿರದ ಮತಾಂಧರನ್ನು ಒಪ್ಪಿಕೊಳ್ಳುವುದೆಂದರೆ ಅದು ಪ್ರಚೋದನಕಾರಿ ಭಾವನೆಗಳಿಗೆ ಕಾರಣವಾಗುತ್ತದೆ ಮತ್ತು ಪ್ರತೀಕಾರದ ಮನೋಭಾವವನ್ನು ಪ್ರಕಟಿಸುವಂತಃ ಅಮಾನವೀಯತೆಯಾಗಿ ಪ್ರಕಟಗೊಳ್ಳುತ್ತದೆ. ಅಂತಹ ವಾತಾವರಣವು ತಾರ್ಕಿಕ ಚರ್ಚೆ ಮತ್ತು ಕಾನೂನಿನ ಸರಿಯಾದ ಆಡಳಿತವನ್ನು ಇಲ್ಲವಾಗಿಸುತ್ತದಲ್ಲದೆ ಅದರಿಂದಾಗಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಸೇರಿದಂತೆ ವಿವಿಧ ಸ್ವಾತಂತ್ರ್ಯಗಳಿಗೆ ಧಕ್ಕೆ ಉಂಟಾಗುತ್ತದೆ. ಒಬ್ಬ ವ್ಯಕ್ತಿಯ ಆಲೋಚನೆ, ಕ್ರಿಯೆ, ಮಾತು, ಅಭಿವ್ಯಕ್ತಿ, ನಂಬಿಕೆ, ಆತ್ಮಸಾಕ್ಷಿ ಮತ್ತು ವೈಯಕ್ತಿಕ ಆಯ್ಕೆಗಳ ಸ್ವಾತಂತ್ರ್ಯವನ್ನು ಇನ್ನೊಬ್ಬರು ಸಹಿಸುವುದಿಲ್ಲವೆಂದರೆ ಅದು ವಿಷಯಗಳನ್ನು ವಸ್ತುನಿಷ್ಟವಾಗಿ ಗ್ರಹಿಸುವ ಮತ್ತು ಅರ್ಥೈಸಿಕೊಳ್ಳುವ ಮನಸ್ಥಿತಿಯ ಕೊರತೆಯಿಂದಾಗಿಯೇ ವಿನಃ ಬೇರೇನೂ ಅಲ್ಲ."*

---

[16] Hate crime: a thematic review of the current evidence Research Report by Olivia Hambly, Joanne Rixom, Shivani Singh and Tamsyn Wedlake-James, UK Government, October, 2018, https://assets.publishing.service.gov.uk/government/uploads/system/uploads/attachment_data/file/748140/hate-crime-a-thematic-review-of-the-current-evidence-oct2018-horr102.pdf

[17] AIR 2018 SC 3354

## ೧.೩ ಕರ್ನಾಟಕದಲ್ಲಿ ಕರೋನಾ ಸಾಂಕ್ರಾಮಿಕದ ನಂತರದ ದಿನಗಳಲ್ಲಿ ಆತಂಕದಿಂದ ಬದುಕುತ್ತಿರುವ ಸ್ಥಿತಿ

**ಹುಬ್ಬಳ್ಳಿಯಲ್ಲಿ ಅಕ್ಟೋಬರ್ 17, 2021 ರಂದು ನಡೆದ ದಾಳಿ[18]**

**ಪಾದ್ರಿ ಸಂಕೇತ್ ಅವರ ಹೇಳಿಕೆ**

ನಾವು ಪ್ರಾರ್ಥನೆ  ಆರಂಭಿಸುವ ಹೊತ್ತಿಗೆ ಚರ್ಚ್ ನಲ್ಲಿ ಅದಾಗಲೇ ಕೇಸರಿ ಸ್ಕಾರ್ಫ್ ಧರಿಸಿದ್ದ ಕೆಲವರು ಕುಳಿತಿದ್ದರು. ಪ್ರಾರ್ಥನಾ ಸಮಯದಲ್ಲಿ ಇದ್ದಕ್ಕಿದ್ದಂತೆ ಅವರು ಜೈಶ್ರೀರಾಮ್ ಎಂದೂ ಕೂಗುತ್ತಾ ಬಜನೆ ಮಾಡತೊಡಗಿದರು. ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ಗೆ ಸೇರಿದ ಈ ಗುಂಪಿನ ಜನ ವಿಶ್ವನಾಥ್ ಎಂಬುವ ವ್ಯಕ್ತಿಯನ್ನು ಬಲವಂತವಾಗಿ ಕ್ರೈಸ್ಥ ಧರ್ಮಕ್ಕೆ ಮತಾಂತರ ಮಾಡಲು ನಾನು ಪ್ರಯತ್ನಪಟ್ಟೆ ಎಂಬುದಾಗಿ ಆರೋಪಿಸಿದರು.

ಚರ್ಚ್ ನಲ್ಲಿ ಸೇರಿದ್ದ ಕ್ರೈಸ್ಥ ಧರ್ಮದ ಅನುಯಾಯಿಗಳನ್ನು ಥಳಿಸಲು ಶುರುವಿಟ್ಟರು. ನನ್ನ ಮೇಲೆ ದಾಳಿ ನಡೆಸಿದರು, ಆ ದಾಳಿಯನ್ನು ನನಗೆ ತೀವ್ರವಾದ ಗಾಯಗಳಾದವು.

ನನ್ನನ್ನು ಮತ್ತು ಅನುಯಾಯಿಗಳನ್ನು ಪೊಲೀಸ್ ಠಾಣೆಗೆ ಎಳೆದೊಯ್ಯುವ ಹೊತ್ತಿಗೆ ಅಲ್ಲಿ ಸುಮಾರು 100 ಮಂದಿ ಜಮಾಯಿಸಿದ್ದರು.  ಗುಂಪು ದೊಡ್ಡದಾಗಿ ಬೆಳೆಯುತ್ತಲೇ ಇತ್ತು. ಜನ ಉದ್ರಿಕ್ತರಾಗಿದ್ದರು ಹಾಗಾಗಿ ಪೊಲೀಸರು ಹೆಚ್ಚಿನದೇನನ್ನೂ ಮಾಡಲಾಗಲಿಲ್ಲ. ನಮ್ಮಲ್ಲಿ ಕೆಲವರನ್ನು ಪೊಲೀಸ್ ಠಾಣೆಯಲ್ಲಿಟ್ಟುಕೊಂಡು ನಮ್ಮ ಮೇಲೆ ಎಫ್ ಐ ಆರ್ ದಾಖಲಿಸಿದರು. ನನ್ನನ್ನೂ ಒಳಗೊಂಡಂತೆ ಆರು ಮಂದಿಯನ್ನು ಅಂಬುಲೆನ್ಸ್ ನಲ್ಲಿ ಆಸ್ಪತ್ರೆಗೆ ಕೊಂಡೊಯ್ದರು. ಆಸ್ಪತ್ರೆಯಲ್ಲಿ ನಮಗೆ ಸಣ್ಣ ಪುಟ್ಟ ಗಾಯಗಳಾಗಿರುವುದಾಗಿ ವರದಿ ಕೊಡಲಾಯಿತು. ನಮ್ಮಲ್ಲಿ ಕೆಲವರನ್ನು ಪೊಲೀಸರು ಬಂಧಿಸಿದರು. 11 ದಿನ ನಾವು ಜೈಲಿನಲ್ಲಿದ್ದೆವು.

ಇದೀಗ ನಾವು ಚರ್ಚ್ ನಲ್ಲಿ ಪ್ರಾರ್ಥನೆ ಮಾಡುತ್ತಿಲ್ಲ. ನಗರದ ವಿವಿದೆಡೆ ಮತ್ತು ಚರ್ಚ್ ನ ನೆರೆಹೊರೆಯವರಿಂದ ಕ್ರಿಶ್ಚಿಯನ್ನರಿಗೆ ಬೆದರಿಕೆ ಇದೆ. ನನ್ನನ್ನಷ್ಟೇ ಅಲ್ಲದೆ ಅನೇಕ ಕ್ರೈಸ್ಥ ಧರ್ಮದ ಅನುಯಾಯಿಗಳಿಗೆ ಮನೆ ಕಾಲಿ ಮಾಡುವಂತೆ ಮನೆಯ ಮಾಲೀಕರು ಹೇಳುತ್ತಿದ್ದಾರೆ. ಬಜರಂಗ ದಳ ಮತು ವಿಶ್ವ ಹಿಂದೂ ಪರಿಷತ್ ನ ಇದೇ ಗುಂಪು ಕ್ರಿಶ್ಚಿಯನ್ನರನ್ನು ಕೆಲಸಗಳಿಂದ ತೆಗೆದುಹಾಕಿಸುತ್ತಿದೆ, ಅಂತೆಯೇ ಹೊಸ ಕೆಲಸ ಹುಡುಕಿಕೊಳ್ಳಲು ಕ್ರಿಶ್ಚಿಯನ್ನರಿಗೆ ಕಷ್ಟವಾಗುತ್ತಿದೆ ಎಂಬ ದುರುದ್ದೇಶಪೂರಿತ ವದಂತಿಗಳನ್ನೂ ಹಬ್ಬಿಸಲಾಗುತ್ತಿದೆ.

ನಮ್ಮ ಪ್ರಾಂತ್ಯದಲ್ಲಿ ಕ್ರಿಶ್ಚಿಯನ್ನರು ಪಾವಿತ್ರ್ಯಕ್ಕೆ ಹೆಸರಾದವರು. ಇಂತಾ ಪರಿಸ್ಥಿತಿಯಲ್ಲೂ ಅನೇಕರು ಭಾನುವಾರದ ಪ್ರಾರ್ಥನೆಗಳಿಗೆ ಮರಳುತ್ತಿದ್ದಾರೆ.

ಹನ್ನೊಂದು ದಿವಸಗಳ ಕಾಲ ನಾನು ಅನುಭವಿಸಿದ ಮಾನಸಿಕ ಹಾಗೂ ದೈಹಿಕ ಯಾತನೆಯಿಂದಾಗಿ ನಡೆದ ಘಟನೆಯನ್ನು ಮತ್ತೆ ನೆನಪು ಮಾಡಿಕೊಂಡು ಹೇಳಲು ಕಷ್ಟವಾಗುತ್ತಿದೆ.

[18] https://www.thenewsminute.com/article/row-between-bengaluru-church-followers-and-local-residents-cops-file-firs-145630

**ಯಾದಗಿರಿಯಲ್ಲಿ ಸೆಪ್ಟೆಂಬರ್ 19, 2021 ರಂದು ನಡೆದ ದಾಳಿ**[19]

**ಪಾದ್ರಿ ಜಿಮ್ ಅವರ ಹೇಳಿಕೆ**

ಹದಿನೈದು ಅನುಯಾಯಿಗಳಿಗಾಗಿ ಕಳೆದ ಎಂಟು ತಿಂಗಳಿಂದ ಒಂದೇ ಸ್ಥಳದಲ್ಲಿ ವಾರಾಂತ್ಯದ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದೆ. ಅದೊಂದು ಭಾನುವಾರದಂದು 200 ಮಂದಿ ನಮ್ಮ ಚರ್ಚ್ ಗೆ ಬಂದು ಕ್ರಿಶ್ಚಿಯನ್ ಧರ್ಮದ ವಿರುದ್ಧ ಘೋಷಣೆಗಳನ್ನು ಕೂಗತೊಡಗಿದರು. ನರಸಪ್ಪ ಎಂಬ ಪಂಚಾಯಿತಿ ಸದಸ್ಯ ಕ್ರೈಸ್ಥ ಅನುಯಾಯಿಗಳಿಗೆ ಇನ್ನು ಮುಂದೆ ಚರ್ಚ್ ಗೆ ಹೋಗಬೇಡಿ ಎಂದು ತಾಕೀತು ಮಾಡತೊಡಗಿದರು. ನನ್ನ ವಿರುದ್ಧ ಹಾಗೂ ನನ್ನ ನಂಬಿಕೆಗಳ ವಿರುದ್ಧ ಹೀನಾಯವಾಗಿ ಮಾತನಾಡಿದರು.

ಈ ಗುಂಪು ನಮ್ಮನ್ನು ಅವಾಚ್ಯ ಶಬ್ಧಗಳಿಂದ ನಿಂದಿಸುತ್ತಿರುವಾಗಲೇ ಕೇವಲ ಐದು ನಿಮಿಷಗಳಲ್ಲಿ ಪೊಲೀಸರು ಬಂದರು. ಅವರು ಅಲ್ಲಿಯೇ ಎಲ್ಲೋ ಹತ್ತಿರದಲ್ಲಿದ್ದರೇನೋ ಈ ಘಟನೆ ತಿಳಿದು ಬಂದಿರಬಹುದು. ಪೊಲೀಸರು ಯಾವುದೇ ಮಾಹಿತಿ ನೀಡದೆ ನಮ್ಮಲ್ಲಿ ನಾಲ್ಕು ಮಂದಿಯನ್ನು ರಾತ್ರಿ ಎಂಟು ಗಂಟೆಯವರೆಗೆ ವಶದಲ್ಲಿಟ್ಟುಕೊಂಡಿದ್ದರು. ನನ್ನ ವಿರುದ್ಧ ಹಾಗೂ ಒಂದು ದಂಪತಿ ಹಾಗೂ ಅವರ ಮಗನ ವಿರುದ್ಧ 295 ಎ ಸೆಕ್ಷನ್ ಹಾಕಿ ದೂರು ದಾಖಲಿಸಿಕೊಂಡರು. ಹಿಂದುತ್ವ ಗುಂಪು ನಮ್ಮ ವಿರುದ್ಧ ನಡೆಸಿದ ವಾಗ್ದಾಳಿಯ ಬಗ್ಗೆ ನಾವು ನೀಡಲೆತ್ನಿಸಿದ ದೂರನ್ನು ನಿರಾಕರಿಸಿದರು.

ನಮ್ಮ ವಕೀಲರು ಸಂಜೆ ಐದು ಗಂಟೆಗೆ ಪೊಲೀಸ್ ಠಾಣೆಗೆ ಬಂದರು. ಪೊಲೀಸರೊಂದಿಗೆ ಅವರು ನಡೆಸಿದ ಮಾತುಕತೆಯ ನಂತರವೂ ಪೊಲೀಸರು ದೂರು ಸ್ವೀಕರಿಸಲು ನಿರಾಕರಿಸಿದರು. ನಮ್ಮ ದೂರುಗಳನ್ನು ತೆಗೆದುಕೊಳ್ಳಬಾರದೆಂದು ಸಬ್ ಇನ್ಸ್ಪೆಕ್ಟರ್ ಹೇಳಿದ್ದಾರೆ ಎಂದು ಹೇಳಿದ್ದಲ್ಲದೆ ನಮ್ಮನ್ನು ಮೂರು ದಿನ ಜೈಲಿನಲ್ಲಿರಿಸಿದ್ದರು.

ಇದೀಗ ಪ್ರಾರ್ಥನಾ ಸಭೆಗಳು ಸಂಪೂರ್ಣ ಸ್ಥಗಿತಗೊಂಡಿವೆ. ಆ ಹಳ್ಳಿಯ ಮಂದಿ ಚರ್ಚ್ ಗೆ ಬರುತ್ತಿಲ್ಲ. ಶಾಲಾ ಶಿಕ್ಷಕರು ಇವರ ಮಕ್ಕಳನ್ನು ಶಾಲೆ ಬಿಡಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ನ್ಯಾಯಬೆಲೆ ಅಂಗಡಿ ಹಾಗೂ ಸಣ್ಣ ಪುಟ್ಟ ಚಿಲ್ಲರೆ ಅಂಗಡಿಗಳಲ್ಲಿಯೂ ಕೂಡಾ ಕ್ರಿಶ್ಚಿಯನ್ನರಿಗೆ ಸರಕು ಸರಂಜಾಮುಗಳನ್ನು ಕೊಡದೆ ನಿರಾಕರಿಸಲಾಗುತ್ತಿದೆ.

ಇಡೀ ರಾಜ್ಯದಲ್ಲಿ ಕ್ರಿಶ್ಚಿಯನ್ನರ ವಿರುದ್ಧ ಇರುವ ದ್ವೇಷದ ಕಾರಣ ಅನೇಕ ಕ್ರಿಶ್ಚಿಯನ್ನರು ಕೆಲಸ ಕಳೆದುಕೊಂಡಿರುವುದಲ್ಲದೆ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ. ಶಾಲೆಗಳಲ್ಲಿ ಕ್ರಿಶ್ಚಿಯನ್ನರ ಮಕ್ಕಳನ್ನು ಶಾಲೆ ಬಿಡಿಸುವುದಾಗಿ ಶಿಕ್ಷಕರು ಬೆದರಿಸುತ್ತಿದ್ದರೆ. ಮನೆ ಮಾಲೀಕರು ಮನೆ ಖಾಲಿ ಮಾಡಿಸುತ್ತಿದ್ದಾರೆ. ಸಣ್ಣ ಪುಟ್ಟ ಅಂಗಡಿಗಳಲ್ಲಿ ಸರಕು ನೀಡಲು ನಿರಾಕರಿಸಲಾಗುತ್ತಿದೆ.

[19] https://drive.google.com/drive/folders/1tZn72UWhww1F9E9qX0p-zYJRjyFawovA

ಒಂದು ಘಟನೆಯಲ್ಲಿ ಪಾದ್ರಿಯೊಬ್ಬರಿಗೆ ಮನೆ ಕಾಲಿ ಮಾಡುವಂತೆ ಒತ್ತಾಯಿಸಲಾಗಿದೆ. ಪೋಲೀಸರು ಹೊಸ ಮನೆಯಲ್ಲಿಯೂ ಆತನನ್ನು ಇರಲು ಬಿಡದೆ ಹೊಸ ಮನೆ ಮಾಲೀಕರನ್ನು ಸಂಪರ್ಕಿಸಿ ಕೇವಲ ಹತ್ತು ದಿನಗಳು ವಾಸವಿದ್ದ ಮನೆಯಿಂದ ಹೊರಗೆ ಹಾಕುವಂತೆ ಮನೆ ಮಾಲೀಕರನ್ನು ಬೆದರಿಸಿದ್ದರು. ಇದೀಗ ಆ ಪಾದ್ರಿ ಹಳ್ಳಿಯಿಂದ 40 ಕಿಲೋಮೀಟರ್ ದೂರದಲ್ಲಿ ವಾಸವಿದ್ದಾರೆ. ಈ ರೀತಿಯಾಗಿ ಕ್ರಿಶ್ಚಿಯನ್ನರನ್ನು ಅನಾದರ ಮಾಡಲಾಗುತ್ತಿದೆ. ಧಾರ್ಮಿಕ ಅಲ್ಪಸಂಖ್ಯಾತರನ್ನು ಈ ರೀತಿಯಾಗಿ ಹಳ್ಳಿಗಳಿಂದ ಹೊರದಬ್ಬುವುದು ಪ್ರಜಾಪ್ರಭುತ್ವದಲ್ಲಿ ಸಮಾನವಾಗಿ ಪಾಲ್ಗೊಳ್ಳಲು ದೊಡ್ಡ ತೊಡಕಾಗಿದೆ.

ಕರ್ನಾಟಕದಲ್ಲಿ ಕೋವಿಡ್ 19 ಸಾಂಕ್ರಾಮಿಕ ತೀವ್ರ ಸಂಕಷ್ಟಗಳನ್ನು ತಂದೊಡ್ಡಿದೆ. ಸಣ್ಣ ಪುಟ್ಟ ಸಮುದಾಯಗಳು ಆಹಾರ ಹಾಗೂ ಆರೋಗ್ಯ ಸೇವೆಗಳೂ ಸಿಕ್ಕಿಲ್ಲ. ಕೃಷಿ ಕೂಲಿಗಳು, ದಿನಗೂಲಿ ನೌಕರರು ಇನ್ನಿತರ ಅಸಂಘಟಿತ ನೌಕರರು ಸಂಬಳ ಸಾಲಿಗೆ ಇಲ್ಲದೆ ತೊಂದರೆಗೊಳಗಾಗಿದ್ದಾರೆ.

ಸಾವಿರಾರು ಜನರು ಅಸುನೀಗಿರುವ, ಸಾವಿರಾರು ಜನರು ಬದುಕುಳಿಯಲು ಕಷ್ಟಪಡುತ್ತಿರುವ ಈ ಸಂದರ್ಭದಲ್ಲಿ ಜನಪರವಾದ, ಜನರ ಆರೋಗ್ಯ ಕಾಳಜಿ ಮಾಡುವ ಆಡಳಿತ ಬೇಕು, ಸಮುದಾಯಗಳು ಪರಸ್ಪರ ಐಕ್ಯತೆಯಲ್ಲಿ ಬದುಕುವಂತಿರಬೇಕು. ಜನರನ್ನು ಬಡತನ ಹಾಗೂ ಹಸಿನಿಂದ ಬಳಲುವುದನ್ನು ತಪ್ಪಿಸುವಂತಃ ಆಡಳಿತ ಬೇಕು.

ಆದರೆ, ಪ್ರಭುತ್ವ ತನ್ನ ಆಡಳಿತ ವ್ಯವಸ್ಥೆ ಹಾಗೂ ಪೊಲೀಸರನ್ನು ಮುಂದೆಬಿಟ್ಟು ಪ್ರಾರ್ಥನಾ ಮಂದಿರಗಳ ಮೇಲೆ ಎತ್ತಿಕಟ್ಟುತ್ತಿದ್ದಾರೆ. ಅನೇಕ ಗುಂಪು ಗಲಬೆಗಳಲ್ಲಿ ಪೊಲೀಸರು ಪಾದ್ರಿಗಳು ಮತ್ತು ಅನುಯಾಯಿಗಳನ್ನು ಬಂಧಿಸಿದ್ದಾರೆ. ಪ್ರಾರ್ಥನಾ ಮಂದಿರಗಳಿಗೆ ಪ್ರಾರ್ಥನೆಯನ್ನು ನಿಲ್ಲಿಸುವಂತೆ ನೋಟೀಸು ಜಾರಿ ಮಾಡಿದ್ದಾರೆ. ಚರ್ಚ್ ಗಳು ಕೋವಿಡ್-19 ಪ್ರೋಟೋಕಾಲ್ ಪಾಲಿಸುತ್ತಿಲ್ಲವೆಂಬುದು ಒಂದು ಕಾರಣವಾಗಿ ನೀಡಲಾಗುತ್ತಿದೆ. ಕೋವಿಡ್ ಪ್ರೋಟೋಕಾಲ್ ನ ಲಾಕ್ ಡೌನ್ ಆಗಲಿ, ಸಣ್ಣ ಗುಂಪುಗಳು ಸೇರಲು ನಿರ್ಭಂದವಾಗಲಿ ಇಲ್ಲದೇ ಹೋದರೂ .ಕೋವಿಡ್ ಹೆಸರಿನಲ್ಲಿ ಕ್ರಿಶ್ಚಿಯನ್ನರನ್ನು ಪ್ರಶ್ನಿಸಲು ಮತ್ತು ಆರೋಪಿಸಲು ಬಳಸಿಕೊಳ್ಳಲಾಗುತ್ತಿದೆ. ಸರ್ಕಾರ ಈ ಅಲ್ಪಸಂಖ್ಯಾತ ಸಮುದಾಯಗಳ ಮೂಲಭೂತ ಹಕ್ಕನ್ನು ರಕ್ಷಿಸಲು ಸೋಲುತ್ತಿದೆ. ಪರಿಸ್ಥಿತಿ ಹೀಗಿರುವಾಗ ಅಲ್ಪಸಂಖ್ಯಾತರು ಇನ್ನಷ್ಟು ಕಡೆಗಣನೆಗೆ ಒಳಗಾಗಿ ಶಿಕ್ಷಣ, ಸೂರು, ಜೀವನೋಪಾಯ ಮಾಡಿಕೊಂಡು ಘನತೆಯಿಂದ ಬದುಕುವುದೇ ಕೋವಿಡ್ ಸಂದರ್ಭದಲ್ಲಿ ದುಸ್ಥರವಾಗಿದೆ. ಹೀಗೆ ಸ್ವತಂತ್ರವಾಗಿ ಬದುಕುವುದೇ ಹೋರಾಟವಾಗಿರುವ ಈ ದಿನಮಾನಗಳಲ್ಲಿ ಸಾಮಾಜಿಕ ಆರ್ಥಿಕ ನಾಗರೀಕ ಹಾಗೂ ರಾಜಕೀಯ ಹಕ್ಕುಗಳನ್ನು ಪಡಕೊಳ್ಳುವುದು ದೂರದ ಮಾತೇ ಆಗಿ ಉಳಿಯುತ್ತದೆ.

ದಲಿತರು, ಆದಿವಾಸಿಗಳು ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರು ಅನುಭವಿಸುತ್ತಿರುವ ತಾರತಮ್ಯ ಹಾಗೂ ದೌರ್ಜನ್ಯವು ಜಾತ್ಯಾತೀತವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕರ್ನಾಟಕಕ್ಕೆ ಕಪ್ಪುಚುಕ್ಕೆಯಂತಿದೆ.

## ೧.೪ ದ್ವೇಷದ ಅಪರಾಧವೆಸಗುವ ಅಪರಾಧಿಗಳು

**ಮಾರ್ಚ್ 18, 2021 ರಂದು ಬೆಂಗಳೂರಿನಲ್ಲಿ ನಡೆದ ದಾಳಿ**[20]

**ಪಾದ್ರಿ ಜಾನ್ ಅವರ ಹೇಳಿಕೆ**

ನಾನು ಭಾನುವಾರದ ಪ್ರಾರ್ಥನಾ ಸಭೆಗಳನ್ನು ನಡೆಸುವ ಕೆಲಸ ಮಾಡುತ್ತಿದ್ದೆ. ಅದೊಂದು ದಿನ ಗುರುವಾರ ನನ್ನ ಬೀದಿಯಲ್ಲಿಯೇ ವಾಸವಾಗಿದ್ದ ವ್ಯಕ್ತಿಯೊಬ್ಬ ಇನ್ನಿಬ್ಬರ ಜೊತೆಯಾಗಿ ಚರ್ಚ್ ಗೆ ಬಂದ. ನಾನು ಮತ್ತು ನನ್ನ ಮಡದಿಯನ್ನು ಹೀಯಾಳಿಸಿ ಬೈಯ್ಯತೊಡಗಿದೆ. "ನಮ್ಮನ್ನು ಸುಟ್ಟುಬಿಡುವುದಾಗಿ" ಧಮಕಿ ಹಾಕಿದ.

ಚರ್ಚ್ ನ ಸದಸ್ಯರೊಬ್ಬರು ಮುಂದೆ ಬಂದು ಆತನನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ನಾನೂ ಕೂಡಾ ಆ ವ್ಯಕ್ತಿಯನ್ನು ತಬ್ಬಿಕೊಂಡು ಸಮಸ್ಯೆ ಏನೆಂದು ಕೇಳಿದೆ. ಕ್ಷಣಾರ್ಧದಲ್ಲಿ ಚರ್ಚ್‌ನ ಹೊರಗೆ ಜನ ಜಮಾಯಿಸತೊಡಗಿದರು. ಅದನ್ನು ನೋಡಿದರೆ ಅದೊಂದು ಪೂರ್ವಯೋಜಿತ ದಾಳಿಯಂತಿತ್ತು. ನಮ್ಮ ವಿರುದ್ಧ ಕೂಗಾಡುತ್ತಿದ್ದ ಆ ಗುಂಪು ಚರ್ಚಿನಲ್ಲೆ ನಮ್ಮನ್ನು ಜೀವಂತ ದಹಿಸಿಬಿಡುವ ಬೆದರಿಕೆ ಹಾಕುತ್ತಿದ್ದರಿಂದ ಬಹಳ ಭಯಗೊಂಡಿದ್ದೆ. ಪೀಠೋಪಕರಣಗಳನ್ನು ಮುರಿದರು, ನನ್ನ ಮಡದಿ ಮತ್ತು ಮಗು ಸೇರಿಂದತೆ ಅನೇಕ ಅನುಯಾಯಿಗಳಿಗೆ ಬೆದರಿಸಿದರು.

ನಾನು ಪೊಲೀಸ್‌ಠಾಣೆಗೆ ದೂರುಕೊಡಲೆಂದು ಹೋದೆ. ಪೊಲೀಸರು ಕಂಪ್ಯೂಟರ್ ಕೆಲಸಮಾಡುತ್ತಿಲ್ಲವೆಂದರು. ಆದರೂ ನಾನು ಒತ್ತಾಯ ಮಾಡಿದ್ದಕ್ಕಾಗಿ ಮಾರನೆಯ ದಿನ ಬರಲು ಸೂಚಿಸಿದರು. ಮುಂದಿನ ದಿನ ನಾನು ವಕೀಲರೊಟ್ಟಿಗೆ ಬೆಳಿಗ್ಗೆ ಬೇಗನೇ ಪೊಲೀಸ್ ಠಾಣೆಗೆ ಹೋದೆ. ಆದರೆ ನಮ್ಮ ದೂರನ್ನು ಆಲಿಸುವ ಮೊದಲೇ, ನಮ್ಮೊಂದಿಗೆ ವಕೀಲರು ಇದ್ದಾಗ್ಯೂ ನಮ್ಮ ವಿರುದ್ಧ ಕೇಸು ದಾಖಲಿಸಲು ನಮ್ಮ ಮೇಲೆ ದಾಳಿ ನಡೆಸಿದವರಿಗೆ ಪೊಲೀಸರು ಅನುವು ಮಾಡಿಕೊಟ್ಟರು.

ಪೊಲೀಸರೇಕೆ ಪಕ್ಷಪಾತಿಗಳಾಗಿದ್ದರು? ನಮಗೆ ಎಫ್ ಐ ಆರ್ ದಾಖಲಿಸಲು ಏಕೆ ಅವಕಾಶ ಮಾಡಿಕೊಡಲಿಲ್ಲ.?

ಈ ಘಟನೆಯು ಅನೇಕ ಅನುಯಾಯಿಗಳನ್ನು ಭಯ ಮತ್ತು ಆತಂಕದಲ್ಲಿರಿಸಿದೆ. ನನ್ನ ಮಗು ಮತ್ತು ಮಡದಿಗೂ ಬೆದರಿಕೆ ಹಾಕಿದ್ದಾರೆ. ನಮ್ಮ ಎಂದಿನ ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನೆ ನಡೆಸಲು ಬಿಡುತ್ತಿಲ್ಲ. ಇದೀಗ ನಾವು ಬೇರೆ ಜಾಗ ಕಂಡುಕೊಳ್ಳಬೇಕು. ಪ್ರಾರ್ಥನಾ ಮಂದಿರಗಳಲ್ಲಿ ಅನೇಕ ಮಹಿಳೆಯರು ಮಕ್ಕಳಿದ್ದರು, ಅವರೆಲ್ಲಾ ಆತಂಕದಲ್ಲಿದ್ದಾರೆ.

**ಅಕ್ಟೋಬರ್ 17, 2021 ರಂದು ಕಾರವಾರದಲ್ಲಿ ನಡೆದ ದಾಳಿ**

**ಪಾದ್ರಿ ಮಹೇಶ್ ಹೇಳಿಕೆ**

ನನ್ನ ಹಳ್ಳಿಯಲ್ಲಿ ಮೂರ್ನಾಲ್ಕು ಕ್ರಿಶ್ಚಿಯನ್ ಮನೆಗಳಿವೆ. ಒಂದು ದಿನ ಪಂಚಾಯತಿಯಿಂದ ನಾಲ್ಕೂ ಕ್ರಿಶ್ಚಿಯನ್ ಕುಟುಂಬಗಳಿಗೆ ಬುಲಾವ್ ಬಂತು. ಈ ನಾಲ್ಕರಲ್ಲಿ ಎರಡು ಕ್ರಿಶ್ಚಿಯನ್ ಕುಟುಂಬಗಳು ಪಂಚಾಯಿತಿಗೆ ತೆರಳಿದರು.

[20] https://www.thenewsminute.com/article/row-between-bengaluru-church-followers-and-local-residents-cops-file-firs-145630

ಪಂಚಾಯಿತಿಯಲ್ಲಿ ಅವರ ವೈಯಕ್ತಿಕ ಪ್ರಶ್ನೆಗಳನ್ನು ಕೇಳಿದ್ದಾರೆ ಜೊತೆಗೆ ಕ್ರಿಶ್ಚಿಯಾನಿಟಿಗೆ ಮತಾಂತರಗೊಂಡದ್ದು ವೈಯಕ್ತಿಕ ಆಸಕ್ತಿಯಿಂದಲೇ ಎಂದೂ ಪ್ರಶ್ನಿಸಿದ್ದಾರೆ.

ಎರಡು ಕುಟುಂಬಗಳನ್ನು ಕ್ರೂರವಾಗಿ ಹಿಂಸಿಸಲಾಗಿದೆ, ಅವರು ದೈಹಿಕ ದಾಳಿಯಿಂದ ಗಾಯಗೊಂಡಿದ್ದಾರೆ. ಶೀಘ್ರವೇ ಪೊಲೀಸರು ಬಂದು ಪಂಚಾಯಿತಿ ಸದಸ್ಯರಿಗೆ ಕ್ರಿಶ್ಚಿಯನ್ನರನ್ನು ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿ ಎಂದೂ ಸೂಚಿಸಿದ್ದಾರೆ. ಇದು ಅವರು "ಸಂದಾನ" ಮಾಡುವ ಐಡಿಯಾ ಕೂಡಾ ಆಗಿತ್ತು. ಪೊಲೀಸರು ಗ್ರಾಮಸ್ಥರಿಂದ ಮತ್ತು ಕ್ರಿಶ್ಚಿಯನ್ನರಿಂದ ಹೇಳಿಕೆ ಪಡಕೊಂಡರು.

ಪಂಚಾಯತ್ ನಾಯಕರ ಮೇಲೆ ಹಾಗೂ ನಮ್ಮ ವಿರುದ್ಧ ದಾಳಿ ಮಾಡಿದವರ ಮೇಲೆ ಕೇಸು ದಾಖಲಿಸಿದ್ದೇವೆ. ಆದರೆ ಪೊಲೀಸರು ಮಾಜಿ ಶಾಸಕ ಹಾಗೂ ಹಾಲಿ ಭಾಜಪ ಸದಸ್ಯ ಸುನಿಲ್ ಹೆಗಡೆ ಅವರ ಪ್ರಭಾವದಲ್ಲಿದ್ದಾರೆ. ಪಾದ್ರಿಗಳಾದ ನಾವು ಕ್ರಿಶ್ಚಿಯನ್ನರು ಪ್ರಾರ್ಥನೆಗೆ ಹೋಗುವುದನ್ನು ತಡೆಯಬಾರದೆಂದು ತಾಕೀತು ಮಾಡಿದೆವು.

ಈ ನಾಲ್ಕೂ ಕುಟುಂಬಗಳ ಸದಸ್ಯರು ಸಾಮಾಜಿಕ ಭಹಿಷ್ಕಾರ ದ ಬೆದರಿಕೆಯಲ್ಲಿವೆ. ಇವರಿಗೆ ಗ್ರಾಮದಲ್ಲಿ ಯಾವುದೂ ಕೆಲಸ ಸಿಗದಹಾಗೆ ನೋಡಿಕೊಂಡಿರುವುದಲ್ಲದೆ ಅಂಗಡಿಗಳಿಂದ ಸರಕು ಸರಂಜಾಮುಗಳನ್ನೂ ನಿರಾಕರಿಸಲಾಗಿದೆ. ಎರಡು ಕುಟುಂಬಗಳು ತಮ್ಮ ಜೀವನೋಪಾಯವನ್ನೇ ಕಳಕೊಂಡಿವೆ.

ಈ ಗ್ರಾಮದಲ್ಲಿ ಭಾರತೀಯ ಜನತಾ ಪಕ್ಷ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಜಾಗರಣಾ ವೇದಿಕೆ ಬಹಳ ಕ್ರಿಯಾಶೀಲವಾಗಿವೆ.

ಈ ಕ್ರಿಶ್ಚಿಯನ್ನರು ಸ್ವಯಂಪ್ರೇರಿತರಾಗಿ ಕ್ರೈಸ್ಥ ಧರ್ಮವನ್ನು ಒಪ್ಪಿದವರಾಗಿದ್ದಾರೆ ಮತ್ತು ಭ್ರಾತೃತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ಆದರೆ ಈ ಗ್ರಾಮದಲ್ಲಿ ಅವರನ್ನು ಬದುಕಲು ಬಿಡುತ್ತಿಲ್ಲ.

ಈ 39 ಘಟನೆಗಳಲ್ಲಿ ಮತೀಯ ದ್ವೇಷದ ಹಿಂದಿರುವ ಅಪರಾಧಿಗಳು ಹಿಂದುತ್ವ ಸಂಘಟನೆಗಳಾದ ರಾಷ್ಟ್ರೀಯ ಸ್ವಯಂಸೇವಕ ಸಂಘ, ಬಜರಂಗದಳ, ಹಿಂದೂ ಜಾಗರಣಾವೇದಿಕೆಯವರೇ ಆಗಿದ್ದಾರೆ. ಅಕ್ಟೋಬರ್ 4 ರಂದು ಕಾರವಾರದಲ್ಲಿ ಮತ್ತು ಜನವರಿ 25 ರಂದು ಮಂಡ್ಯದಲ್ಲಿ ನಡೆದ ಎರಡು ಘಟನೆಗಳಲ್ಲಿ ಭಾರತೀಯ ಜನತಾ ಪಕ್ಷದ ಶಾಸಕ ಸುನಿಲ್ ಹೆಗಡೆ ಮತ್ತು ಮೂರು ಬಾರಿ ಶಾಸಕರಾಗಿರುವ ಮತ್ತು ಹಾಲಿ ಸಚಿವರೂ ಆಗಿರುವ ನಾರಾಯಣ ಗೌಡ ಅವರು ಕ್ರಿಶ್ಚಿಯನ್ನರನ್ನು ಗುರಿಯಾಗಿಸಿಕೊಂಡು ದಾಳಿ ಮಾಡಲು ನೆರವು ನೀಡಿದ್ದಾರೆ. ಬಂಜಾರ ನಿಗಮವೆಂದು ಹೊಸ ಸಂಸ್ಥೆಯೊಂದು ಹುಟ್ಟಿಕೊಂಡಿದೆ. ಇದು ನೋಡಲು ಚಿಕ್ಕದೆನಿಸಿದರೂ ದ್ವೇಷದ ದಾಳಿಗಳಲ್ಲಿ ಅತ್ಯಂತ ಕ್ರೂರವಾಗಿ ನಡೆದುಕೊಳ್ಳುತ್ತದೆ.

ಇವೆಲ್ಲದಕ್ಕಿಂತ ಹೆಚ್ಚು ಆತಂಕಕಾರಿ ವಿಷಯವೇನೆಂದರೆ ಹಿಂದುತ್ವ ಸಂಘಟನೆಗಳಲ್ಲಿರದ ನೆರೆಹೊರೆಯವರು, ಮನೆಯ ಮಾಲೀಕರು, ಕೆಲಸ ನೀಡಿದವರು, ಅಂಗಡಿಗಳ ಮಾಲೀಕರು ನಡೆದುಕೊಳ್ಳುತ್ತಿರುವ ರೀತಿ ಮತ್ತು ಅವರು ವಿಧಿಸುತ್ತಿರುವ ಸಾಮಾಜಿಕ ಬಹಿಷ್ಕಾರ. ಸಾಮಾಜಿಕ ಬಹಿಷ್ಕಾರ ಮಾಡಲು ಮತ್ತು ತಾರತಮ್ಯವೆಸಗಲು ಈ ಮಂದಿ ಬಳಸುತ್ತಿರುವ ಭಾಷೆಯನ್ನು ಗಮನಸಿದಲ್ಲಿ ಇವರಿಗೆ ಹಿಂದುತ್ವದಲ್ಲಿರುವ ನಂಬಿಕೆ ಎಷ್ಟಿದೆ ಎಂಬುದು ಅರಿವಿಗೆ ಬರುತ್ತದೆ. ಕ್ರಿಶ್ಚಿಯನ್ನರ ವಿರುದ್ಧ ಅನುಮಾನ ಎಲ್ಲೆಡೆ ವ್ಯಕ್ತವಾಗುತ್ತಿದೆ. ಇದನ್ನು ಗಮನಿಸುತ್ತಿದ್ದರೆ ಹಿಂದುತ್ವದಲ್ಲಿನ ತಾರತಮ್ಯ ನೀತಿಯು ಮತ್ತು ಕ್ರಿಶ್ಚಿಯನ್ನರು

ಎರಡನೆಯ ದರ್ಜೆಯ ನಾಗರೀಕರು ಎಂಬುದು ಸಾಮಾನ್ಯ ಜನರಲ್ಲೂ ಎಷ್ಟು ಆಳವಾಗಿ ಬೇರೂರಿದೆ ಎಂಬುದು ವೇದ್ಯವಾಗುತ್ತದೆ. ನೆರೆಹೊರೆಯವರು ಪರಿಚಿತರು ಈ ಹಿಂದುತ್ವದ ಗುಂಪುಗಳೊಡಗೂಡಿ ಗೊಂದಲದಲ್ಲಿದ್ದಾರಲ್ಲ ಅದು ನನ್ನನ್ನು ಹೆಚ್ಚು ಗೊಂದಲಕ್ಕೀಡುಮಾಡಿದೆ ಎಂದು ಒಬ್ಬ ಪಾದ್ರಿ ಹೇಳಿದರು.

***"ಈ ಜನರಿಗೆ ನಮ್ಮ ಬಗ್ಗೆ ಸಮಸ್ಯೆ ಇದ್ದಲ್ಲಿ, ಏತಕ್ಕೆ ನಮ್ಮ ಬಳಿ ಬಂದು ಮಾತನಾಡುತ್ತಾರೆ. ನಮಗೆ ಯಾರಾದರೊಮ್ಮೆ ಬಂದು ನಮ್ಮ ಮೈಕ್ ನಿಂದ ತೊಂದರೆ ಆಗುತ್ತಿದೆ ಎಂದು ಹೇಳಿದ್ದರೆ ನಾವು ಮೈಕ್ ಬಳಸುತ್ತಲೇ ಇರಲಿಲ್ಲ".***

ಈ ಗುಂಪುಗಳು ಸಾಮಾಜಿಕ ಜಾಲತಾಣಗಳಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವಿರುದ್ಧ ಸುಳ್ಳು ಸುದ್ದಿಗಳನ್ನು ಹರಿಬಿಟ್ಟು ಜನರಲ್ಲಿ ಕಿಚ್ಚು ಹಚ್ಚುತ್ತಿದ್ದಾರೆ. ಪಾದ್ರಿಗಳಿಗೆ ಬೇಕಾದಷ್ಟು ವಿದೇಶಿ ಹಣ ಬರುತ್ತಿದೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ. ಅಂತೆಯೇ ಜನರಿಗೆ ಹಣ, ಆಹಾರ, ವಾಹನ, ಆಸ್ತಿಪಾಸ್ತಿ ಕೊಡಿಸುವುದಾಗಿ ಭರವಸೆಕೊಟ್ಟು ಮತಾಂತರಗೊಳಿಸಲಾಗುತ್ತಿದೆಯೆಂದೂ ಹೇಳಲಾಗುತ್ತಿದೆ. ಚರ್ಚ್ ಗಳ ಮೇಲೆ ನಡೆಸುವ ದಾಳಿಗಳನ್ನು ಕ್ರೈಸ್ಥ ಧರ್ಮದ ವಿರುದ್ಧ ಹಿಂದೂ ಧರ್ಮ ಜಯಗಳಿಸಿದ ಸಂಕೇತದಂತೆ ಸಾಮಾಜಿಕ ಜಾಲತಾಣಗಳಲ್ಲಿ ಅತಿ ಹೆಚ್ಚು ಹಂಚಿಕೊಳ್ಳುತ್ತಾರೆ. ಅದೀಗ ಇಡೀ ರಾಜ್ಯದಲ್ಲಿ ಪ್ರತಿ ಮನೆಯ ಚರ್ಚಾ ವಸ್ತುವೂ ಆಗಿ ಕ್ರಿಶ್ಚಿಯನ್ನರ ವಿರುದ್ಧ ದ್ವೇಷಕಾರುವುದು ಸಹಜವೆಂಬಂತಾಗಿದೆ. ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ತಿರುಚಿ ಬರುವ ಸುದ್ದಿಗಳಿಂದಾಗಿ ಈ ರೀತಿಯ ಮಾತುಗಳು ಹೆಚ್ಚಾಗುತ್ತಿವೆ.

## ೧.೫ ಬದುಕಿನ ಘನತೆಗೆ ಧಕ್ಕೆ ತರುವ ಜಾತಿ ನಿಂದನೆ

**ಅಕ್ಟೋಬರ್ 10, 2021 ರಂದು ಸೋಲದೇವನಹಳ್ಳಿಯಲ್ಲಿ ನಡೆದ ದಾಳಿ**

**ಪಾದ್ರಿ ವಿಕ್ರಮ್ ಅವರ ಹೇಳಿಕೆ**

ಅದೊಂದು ಭಾನುವಾರ ಚರ್ಚ್ ನಲ್ಲಿ ಪ್ರಾರ್ಥನೆ ನೆರವೇರಿಸುತ್ತಿದ್ದೆ. ಏಕಾಏಕಿ ನಾಲ್ಕು ಮಂದಿ ನನ್ನ ಕೋಣೆಯೊಳಗೆ ಬಂದು ನನ್ನನ್ನು ಕಿಚಾಯಿಸತೊಡಗಿದರು. ತದನಂತರ ನಲವತ್ತು ಮಂದಿ ನುಗ್ಗಿ ನನ್ನೊಂದಿಗೆ ಜಗಳಕ್ಕೆ ನಿಂತರು. ಹೊರಗೆ ಬಾ ಎಂದು ಅಬ್ಬರಿಸಿದ್ದಲ್ಲದೆ ಹೀನಾಮಾನ ಬೈಯ್ಯತೊಡಗಿದರು. ನಾನು ಹಿಂದೂಗಳನ್ನು ಕ್ರೈಸ್ಥ ಮತಕ್ಕೆ ಬಲವಂತವಾಗಿ ಮತಾಂತರ ಮಾಡುತ್ತಿದ್ದೇನೆಂದು ಆರೋಪಿಸಿದರು.

ನಮ್ಮ ಚರ್ಚ್ ಗೂಗಲ್ ಮ್ಯಾಪಿನಲ್ಲಿ ಸುಲಭವಾಗಿ ಪತ್ತೆಮಾಡಬಹುದೆಂಬ ಅಂಶವೂ ಅವರ ಕೋಪೋದ್ರೇಕಗೊಳ್ಳಲು ಕಾರಣವಾಗಿತ್ತು. ಅದನ್ನು ಒಪ್ಪಲಾಗುವುದಿಲ್ಲ ನಮ್ಮ ಚರ್ಚ್ ಗೂಗಲ್ ಮ್ಯಾಪಿನಲ್ಲಿ ಕಾಣಬಾರದೆಂದು ಹೇಳಿದರು.

ಕೆಲವೇ ಕ್ಷಣಗಳಲ್ಲಿ ಪೊಲೀಸರು ಬಂದು ಎಲ್ಲರನ್ನೂ ಠಾಣೆಗೆ ಕರೆದೊಯ್ದರು. ಪೊಲೀಸ್ ಸಬ್ ಇನ್ಸ್ಪೆಕ್ಟರ್ ಪರಿಸ್ಥಿತಿಯನ್ನು ಇನ್ನಷ್ಟು ಹೆಚ್ಚುಮಾಡುವಲ್ಲಿ ಪ್ರಯತ್ನಿಸಿದರು. ಕ್ರೈಸ್ಥ ಅನುಯಾಯಿಗಳ ವೈಯಕ್ತಿಕ ಮಾಹಿತಿಯನ್ನು ಪಡೆಯಲು ಸರಣಿ

ಪ್ರಶ್ನೆಗಳನ್ನು ಕೇಳುತ್ತಿದ್ದದ್ದು ನಮಗೆ ಗಾಬರಿ ಹುಟ್ಟಿಸಿತು. ಯಾವ ಜಾತಿಯಲ್ಲಿ ಹುಟ್ಟಿದೆ? ನಿನ್ನ ಹುಟ್ಟೂರು ಯಾವುದು? ನೀನು ಚರ್ಚ್ ಗೆ ಯಾಕೆ ಹೋಗುತ್ತಿದ್ದೀಯ? ನೀನು ಚರ್ಚ್ ಗೆ ಹೋಗಲು ಯಾರು ಹಣ ಕೊಡುತ್ತಿದ್ದಾರೆ?

ನಾನು ಪಾದ್ರಿ ಎಂಬುದಕ್ಕೆ ಗುರುತಿನ ಚೀಟಿಯನ್ನೂ ಕೇಳಿದರು ಜೊತೆಗೆ ನೇಮಕಾತಿ ಆದೇಶ ಹಾಗೂ ಚರ್ಚ್ ಗೆ ಸಂಬಂಧಿಸಿದ ದಾಖಲೆಗಳನ್ನು ಕೇಳಿದರು. ಇದೀಗ ಪ್ರಾರ್ಥನೆ ಸಂಪೂರ್ಣ ಸ್ಥಗಿತಗೊಂಡಿದೆ.

**ತಿಪಟೂರಿನಲ್ಲಿ ಮಾರ್ಚ್ 14, 2021 ರಂದು ನಡೆದ ದಾಳಿ**

**ಪಾದ್ರಿ ಶ್ಯಾಮ್ ಹೇಳಿಕೆ**

ಅದೊಂದು ಭಾನುವಾರ ನಾನು ಪ್ರಾರ್ಥನೆ ಸಲ್ಲಿಸುತ್ತಿದ್ದೆ. ಕಳೆದ 14 ವರ್ಷಗಳಿಂದ ಆ ಜಾಗದಲ್ಲಿ ಬಾಡಿಗೆಗೆ ಇದ್ದೇವೆ ಮತ್ತು ಪ್ರತಿ ವಾರ ಅಲ್ಲಿಯೇ ಪ್ರಾರ್ಥನೆ ಮಾಡುತ್ತಿದ್ದೇವೆ. ಪ್ರಾರ್ಥನಾ ಸಮಯದಲ್ಲಿ ಪೊಲೀಸರು ನುಗ್ಗಿ ಬಂದು ಹಿಂದೂಗಳನ್ನು ಬಲವಂತವಾಗಿ ಮತಾಂತರ ಮಾಡುತ್ತಿದ್ದೀರಿ ಎಂದು ಆರೋಪಿಸಿದರು.

ನಮ್ಮೆಲ್ಲರ ಮೇಲೂ ಕೂಗಾಡಿದರು. ನಾವು ಪ್ರತಿಕ್ರಿಯಿಸಲು ಅವಕಾಶವೇ ನೀಡಲಿಲ್ಲ. ಕೂಡಲೇ ಮೂರು ವ್ಯಾನ್ ಗಳನ್ನು ಬರಹೇಳಿ ನಮ್ಮಲ್ಲಿ ಒಟ್ಟು 29 ಮಂದಿಯನ್ನು ಪೊಲೀಸ್ ಠಾಣೆಗೆ ಕರೆದೊಯ್ದರು. ಪೋಷಕರೊಂದಿಗೆ ಮಕ್ಕಳನ್ನೂ ಠಾಣೆಗೆ ಕರೆದೊಯ್ಯಲಾಯಿತು. ನಮ್ಮನ್ನು ಪೊಲೀಸ್ ಠಾಣೆಯಲ್ಲಿ ಕೂರುವಂತೆ ಮಾಡಿದ್ದಲ್ಲದೆ ಎಲ್ಲರ ಹೇಳಿಕೆಗಳನ್ನು ಪಡಕೊಂಡರು. ಕ್ರೈಸ್ತ ಅನುಯಾಯಿಗಳನ್ನು ಪದೇ ಪದೇ ತಾವು ಯಾವ ಜಾತಿಯಲ್ಲಿ ಹುಟ್ಟಿದ್ದೆಂದು ಕೇಳುತ್ತಿದ್ದುದಲ್ಲದೆ ಅದನ್ನು ಹೇಳಿಕೆಯಲ್ಲಿ ಬರೆದುಕೊಡಲು ಸೂಚಿಸಿದರು. ಚರ್ಚ್‌ಗೆ ಹೋಗಲು ಎಷ್ಟು ಹಣ ನೀಡಲಾಗುತ್ತಿದೆ ಎಂದೂ ಪ್ರಶ್ನಿಸುತ್ತಿದ್ದರು.

ನಮ್ಮಲ್ಲಿ ಹಣವಿದ್ದಿದ್ದರೆ ಪ್ರಾರ್ಥನೆಗಾಗಿ ನಾವೇ ಒಂದು ಕಟ್ಟಡ ಕಟ್ಟಿಕೊಳ್ಳುತ್ತಿದ್ದೆವು ಎಂದು ಹೇಳಲು ಪ್ರಯತ್ನಿಸಿದೆ. ಅಲ್ಲದೆ ನಾನು ಯಾರನ್ನೂ ಮತಾಂತರಗೊಳ್ಳಲು ಬಲವಂತ ಮಾಡುತ್ತಿಲ್ಲ ಮತ್ತು ಅವರ ಹೆಸರನ್ನೂ ಬದಲಾಯಿಸುತ್ತಿಲ್ಲ ಎಂದು ಹೇಳಿದೆ.

ತದನಂತರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸದಸ್ಯರು ಠಾಣೆಗೆ ಬಂದು ಮಹಿಳೆಯರು ಸೇರಿದಂತೆ ಎಲ್ಲರೊಂದಿಗೂ ಅಸಭ್ಯವಾಗಿ ಮಾತನಾಡಿದರು. ಕೂಡಲೇ ದೊಡ್ಡದೊಂದು ಗುಂಪು ಸೇರಿ ನಮ್ಮನ್ನು ಹೀನಾಮಾನ ಹೀಯಾಳಿಸಿ ಬೈದು ಜಾತಿ ನಿಂದನೆ ಮಾಡಿ ನೀವು ನಿಮ್ಮ ಜಾತಿಯಲ್ಲೇ ಏಕೆ ಉಳಿದಿಲ್ಲ ? ಎಂದು ಕೇಳುತ್ತಿದ್ದರು. ನಿಮಗೆ ಯಾರು ಹಣ ನೀಡುತ್ತಿದ್ದಾರೆಂದು ಕೇಳಿದರು. ನೀವು ಹುಟ್ಟು ಹಿಂದೂಗಳಲ್ಲವೇ, ಅವರೇನು ನಿಮಗೆ ಅನ್ನಾಹಾರ ಪೆಟ್ರೋಲ್ ಮತ್ತು ಕಾರು ಕೊಡಿಸುವುದಾಗಿ ಹೇಳಿದ್ದಾರೆಯೇ?

ಕ್ರಿಶ್ಚಿಯನ್ನರ ಹೇಳಿಕೆಗಳು ಮತ್ತು ವಿಡಿಯೋ ತುಣುಕುಗಳು ವಾಟ್ಸಪ್ ಮತ್ತು ಸ್ಥಳೀಯ ಮಾಧ್ಯಮಗಳಲ್ಲಿ ನಿರಂತರ ಬಿತ್ತರಗೊಳ್ಳುತ್ತಿವೆ. ಕ್ರಿಶ್ಚಿಯನ್ನರು ಭಯಗೊಂಡಿದ್ದಾರೆ. ಅನೇಕ ಮನೆ ಮಾಲೀಕರು ಮತ್ತು ಕೆಲಸ ನೀಡಿದವರು ಮನೆ ಖಾಲಿ ಮಾಡಿಸುತ್ತಿರುವುದಲ್ಲದೆ ಕೆಲಸಗಳಿಗೂ ಬರಬಾರದೆಂದು ಹೇಳಿದ್ದಾರೆ. ಸ್ಥಳೀಯ ಶಾಲೆಯಲ್ಲಿಯೂ ಕ್ರಿಶ್ಚಿಯನ್ನರ ವಿರುದ್ಧ ತಾರತಮ್ಯ ಮಾಡಲಾಗುತ್ತಿದೆಯೆಂದು ಸುದ್ದಿ ಹಬ್ಬಿಸಲಾಗಿದೆ.

ಅನೇಕ ಕ್ರಿಶ್ಚಿಯನ್ನರು ಚರ್ಚ್ ಗೆ ಬರಲು ಹೆದರಿದ್ದಾರೆ. ನಾನು ಕೆಲವರ ಮನೆಗೆ ಖಾಸಗಿಯಾಗಿ ಪ್ರಾರ್ಥನೆಗಾಗಿ ತೆರಳುತ್ತಿದ್ದೇನೆ. ತಿಪಟೂರಿನಲ್ಲಿ ಪರಿಸ್ಥಿತಿ ತುಂಬಾ ಬಿಗಡಾಯಿಸಿದೆ.

ಪ್ರಾರ್ಥನಾ ಸಭೆಗಳ ಮೇಲಾದ ಬಹುತೇಕ ಎಲ್ಲಾ ದಾಳಿಗಳಲ್ಲೂ ಸಾಮಾನ್ಯವಾಗಿ ಜಾತಿ ನಿಂದನೆಯ ಭಾಷೆಯನ್ನೇ ಬಳಸಲಾಗಿದೆ. ಈ ಜಾತಿ ನಿಂದನೆಯನ್ನು ಭಾರತದ ನೆಲೆಯಲ್ಲಿ ನೋಡುವುದಾದರೆ ಇಲ್ಲಿನ ಕ್ರಿಶ್ಚಿಯನ್ನರು ಬಹುತೇಕ ದಿನಗೂಲಿ ನೌಕರರು, ಕೃಷಿ ಕಾರ್ಮಿಕರು ಮತ್ತು ದಲಿತ ಸಮುದಾಯಕ್ಕೆ ಸೇರಿದವರು. ಭಾರತದ ಶೇಕಡಾ 70 ರಷ್ಟು ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಮೂಲತಃ ದಲಿತರು ಮತ್ತು ಅಸ್ಪೃಶ್ಯರು[21].

ಈ ಸತ್ಯಾಂಶವು ಐತಿಹಾಸಿಕವಾಗಿ ಮಹತ್ವವುಳ್ಳದ್ದು, ಜಾತಿ ವ್ಯವಸ್ಥೆಯ ತಾರತಮ್ಯಕ್ಕೆ ಬೇಸತ್ತು ಮತಾಂತರಗೊಂಡ ಇವರನ್ನು ಮತಾಂತರವಾದ ನಂತರವೂ ಬಾಧಿಸುತ್ತಿದೆ. ಕೆಲವು ಹಿಂದುತ್ವ ಗುಂಪುಗಳು *"ಘರ್ ವಾಪಸಿ"* ಹೆಸರಿನಲ್ಲಿ ಮರುಮತಾಂತರ ಮಾಡುತ್ತಿವೆ.

*ಘರ್ ವಾಪಸಿ* ಎಂಬುದು ಹಿಂದಿ ಶಬ್ಧ. ಮನೆಗೆ ಹಿಂದಿರುಗು, ಮೂಲ ಮತಕ್ಕೆ ಬಾ ಎಂಬ ಅರ್ಥ. ಭಾರತದ ಹಿಂದುತ್ವ ರಾಷ್ಟ್ರೀಯವಾದಿಗಳು ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಬೌದ್ಧ ಮತಕ್ಕೆ ಮತಾಂತರಗೊಂಡಿರುವವರನ್ನು ಮರು ಮತಾಂತರ ಮಾಡಲು ಬಳಸುತ್ತಿರುವ ಶಬ್ಧವಿದು.[22] ಇದು ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯಕ್ಕೆ ಮುಖಭಂಗವಾಗುವ ಪರಿಸ್ಥಿತಿ. ಮರು ಮತಾಂತರಗೊಂಡ ಇವರೆಲ್ಲಾ ಅವರ ಮೂಲ ಜಾತಿಗೇ ವಾಪಸ್ ಆಗುವ ಸನ್ನಿವೇಷ ಎದುರಾಗುತ್ತದೆ. ಇಲ್ಲಿ ಯಾವುದೇ ವ್ಯಕ್ತಿಗೆ ಜಾತಿ ವ್ಯವಸ್ಥೆಯಲ್ಲಿ ಮೇಲ್ಮುಖವಾಗಿ ಚಲಿಸಲು ಅವಕಾಶವಿಲ್ಲ, ಅಂತೆಯೇ ಬ್ರಾಹ್ಮಣ ಧರ್ಮವನ್ನು ಶಾಶ್ವತವಾಗಿ ಅನುಸರಿಸಿದಂತಾಗುತ್ತದೆ. ಈ *ಘರ್ ವಾಪಸಿ* ಕಾರ್ಯಕ್ರಮದಿಂದ ಮೊದಲಿದ್ದ ಜಾತಿಪದ್ಧತಿಯಲ್ಲಿಯೇ ಮುಂದುವರೆಯಬೇಕಿದೆ ಅಂತೆಯೇ ಇದು ಬ್ರಾಹ್ಮಣರ ಪ್ರಾಭಲ್ಯವನ್ನು ಪುನಃಸ್ಥಾಪಿಸಿದಂತಾಗುತ್ತದೆ.

ಚರ್ಚ್ ಗಳ ಮೇಲೆ ನಡೆಯುವ ಯಾವುದೇ ದಾಳಿಯಲ್ಲಿ ಮೊದಲಿಗೆ ದಾಳಿಕೋರರು ಪ್ರಾರ್ಥನೆಗೆ ಅಡ್ಡಿಪಡಿಸುತ್ತಾರೆ ಮತ್ತು ಕ್ರಿಶ್ಚಿಯನ್ ಅನುಯಾಯಿಗಳನ್ನು ತಾವು ಯಾವ ಜಾತಿಗೆ ಸೇರಿದವರೆಂದು ಪ್ರಶ್ನಿಸುತ್ತಾರೆ. ಅಲ್ಲಿಂದ ಪರಿಸ್ಥಿತಿ ವಿಕೋಪಕ್ಕೆ ತಲುಪುತ್ತದೆ, ಪಾದ್ರಿಗಳನ್ನು ಅಸಭ್ಯವಾಗಿ ನಡೆಸಿಕೊಳ್ಳುತ್ತಾರೆ. ಅನುಯಾಯಿಗಳನ್ನು ಮಾನಹಾನಿ ಮಾಡುವ ಶಬ್ಧಗಳಿಂದ ದೂಷಿಸುತ್ತಾರೆ. ಈ ರೀತಿಯಾಗಿ ನಡೆದುಕೊಳ್ಳುವುದು ಸಂವಿಧಾನ ಬಾಹಿರ ಮತ್ತು ಅಸ್ಪೃಶ್ಯತೆ ನಿಷೇಧ ಕಾನೂನಿನ ಉಲ್ಲಂಘನೆಯೂ ಆಗಿದೆ ಮತ್ತು ವ್ಯಕ್ತಿ ಗೌರವಕ್ಕೆ ಧಕ್ಕೆ ಉಂಟುಮಾಡುತ್ತದೆ.

ಇದು ಏಕೆ ಹೀಗಾಗುತ್ತದೆ? ಕ್ರಿಶ್ಚಿಯಾನಿಟಿಗೆ ಮತಾಂತರಗೊಳ್ಳುವಾಗ ಜಾತಿಯ ಪಾತ್ರವೇನು? ಅಂಬೇಡ್ಕರ್ ಏಕೆ ಮತಾಂತರಗೊಳ್ಳಬೇಕು[23] ಎಂಬ ಅಧ್ಯಾಯದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

---

[21] https://uscatholic.org/articles/201302/caste-off-the-plight-of-catholic-dalits-in-india/

[22] 2 Rajeshwar, Y., & Amore, R. C. (2019). Coming Home (Ghar WAPSI) and going away: Politics and the mass conversion controversy in India. Religions, 10(5), 313. **https://doi.org/10.3390/rel10050313**

[23] https://velivada.com/2017/06/01/why-go-for-conversion-speech-by-dr-b-r-ambedkar/

"ಮತಾಂತಗೊಳ್ಳುವುದರಿಂದ ಸ್ವಾತಂತ್ರ್ಯ ಲಭಿಸುವುದಾದರೆ, ಹಿಂದೂ ಧರ್ಮಕ್ಕೆ ಸುಧಾರಣೆ ತರುವ ಹೊರೆಯನ್ನು ನಮ್ಮ ಹೆಗಲಮೇಲೇಕೆ ಹಾಕಿಕೊಳ್ಳಬೇಕು? ನಮ್ಮ ಶಕ್ತಿ ಮತ್ತು ಆಸ್ತಿಪಾಸ್ತಿಗಳನ್ನು ಅದಕ್ಕೇಕೆ ವ್ಯಯಿಸಬೇಕು? ನಮ್ಮ ಹಿಂದೂ ಸಾಮಾಜಿಕ ಸುಧಾರಣೆಯ ಚಳುವಳಿಯನ್ನು ಯಾರೂ ಅಪಾರ್ಥಮಾಡಿಕೊಳ್ಳಬಾರದು. ನಮ್ಮ ಚಳುವಳಿಯ ಮುಖ್ಯ ಉದ್ದೇಶವೇನೆಂದರೆ ಅಸ್ಪೃಶ್ಯರಿಗೆ ಸಾಮಾಜಿಕ ಸ್ವಾತಂತ್ರ್ಯ ದೊರಕಿಸಿಕೊಡುವುದು. ಅದು ಮತಾಂತರಗೊಳ್ಳದೆ ಸಾಧಿಸಲು ಸಾಧ್ಯವಿಲ್ಲ ಎನ್ನುವುದು ಅಷ್ಟೇ ಸತ್ಯ"

ಅವರು ಮುಂದುವರೆದು ಮತಾಂತರ ಎನ್ನುವುದು ಸಮಾನತೆಯೆಡೆಗೆ ಕೊಂಡೊಯ್ಯುತ್ತದೆ ಎಂದು ವಾದಿಸುತ್ತಾರೆ

***"ಈ ಮತಾಂತರವು ಹಿಂದೂಗಳು ಮತ್ತು ಅಸ್ಪೃಶ್ಯರಿಬ್ಬರಿಗೂ ಸಂತೋಷ ತಂದುಕೊಡುತ್ತದೆ. ಎಲ್ಲಿಯವರೆಗೆ ನೀವು ಹಿಂದೂ ಆಗಿ ಇರುತ್ತೀರೋ ಅಲ್ಲಿಯವರೆಗೆ ಸಾಮಾಜಿಕ ಸಂಚಲನಕ್ಕೆ, ಆಹಾರ ಮತ್ತು ನೀರಿಗಾಗಿ ಹಾಗೂ ಅಂತರಜಾತೀಯ ಮದುವೆಗಳಿಗಾಗಿ ಹೋರಾಡಬೇಕು. ಈ ಸಂಘರ್ಷ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಹಿಂದೂಗಳು ಮತ್ತು ನಿಮ್ಮ ನಡುವೆ ದ್ವೇಷ ಇದ್ದೇ ಇರುತ್ತದೆ. ಮತಾಂತರಗೊಳ್ಳುವುದರಿಂದ ಎಲ್ಲಾ ಜಗಳಗಳ ಮೂಲ ಬೇರುಗಳು ಮಾಯವಾಗುತ್ತವೆ.. ಹಾಗಾಗಿ ಮತಾಂತರ ಬೇಕು. ಸಮಾನತೆಯನ್ನು ಸಾಧಿಸುವುದಾದಲ್ಲಿ ಹಿಂದೂಗಳು ಮತ್ತು ಅಸ್ಪೃಶ್ಯರ ನಡುವೆ ಬಾಂಧವ್ಯ ಬರುವುದಾದಲ್ಲಿ ಅಸ್ಪೃಶ್ಯರು ಸರಳವಾದ ಮತ್ತು ಸಂತೋಷದಾಯಕವಾದ ಮಾರ್ಗವನ್ನು ಏಕೆ ಅನುಸರಿಸಬಾರದು? ಸಮಸ್ಯೆಯನ್ನು ಈ ದೃಷ್ಟಿಕೋನದಿಂದ ನೋಡುವುದಾದಲ್ಲಿ ಮತಾಂತರವೊಂದೇ ಸ್ವಾತಂತ್ರ್ಯದ ಸರಿಯಾದ ಮಾರ್ಗ, ಅಂತಿಮವಾಗಿ ಸಮಾನತೆಯೆಡೆಗೆ ತೆಗೆದುಕೊಂಡು ಹೋಗುವ ಮಾರ್ಗ. ಇದು ಹೇಡಿತನದ ಕೃತ್ಯವೂ ಅಲ್ಲ ಪಲಾಯನವಾದವೂ ಅಲ್ಲ".***

ಹಿಂದುತ್ವದಲ್ಲಿ ಎಲ್ಲೆಡೆ ಇರುವ ಜಾತಿಗಳು ಮತ್ತು ಅಸ್ಪೃಶ್ಯತೆಯು ಮತಾಂತರವೆಂಬುದು ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸಮಾನತೆಯೆಡೆಗೆ ಚಲಿಸುವ ಮಾರ್ಗವಾಗಿದೆ. ಜಾತಿ ವ್ಯವಸ್ಥೆಯ ಪೆಡಸು ಹಾಗೂ ಎಸ್.ಸಿ.ಎಸ್.ಟಿ ಸಮುದಾಯಗಳ ವಿರುದ್ಧ ಹಿಂದುತ್ವ ಗುಂಪುಗಳ ದಾಳಿಯನ್ನು ನೋಡಿದಾಗ ಇವರು ಹಿಂದುತ್ವವನ್ನು ಬಿಡಬೇಕೆಂಬುದನ್ನು ಮತ್ತೆ ಮತ್ತೆ ಖಾತ್ರಿಪಡಿಸುತ್ತದೆ.

ಅನೇಕ ರಾಜ್ಯಗಳು "ಧರ್ಮ ಸ್ವಾತಂತ್ರ್ಯ" ದ ಕಾನೂನುಗಳನ್ನು ತಂದಿವೆ. ಬಲವಂತದಿಂದ, ಆಮಿಷವೊಡ್ಡಿ ಮಾಡುವ ಮತಾಂತರವನ್ನು ನಿಷೇಧಿಸಿವೆ. ಈ ಅಂಶವನ್ನು ಈ ಪುಸ್ತಕದ ನಾಲ್ಕನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಇದರಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಈ ಕಾನೂನಿನಲ್ಲಿ ಮಹಿಳೆಯರು, ಹದಿಹರೆಯದವರು, ಎಸ್.ಸಿ., ಎಸ್.ಟಿ, ಸಮುದಾಯದವರನ್ನು ಮತಾಂತರಗೊಳಿಸಿದಲ್ಲಿ ಹೆಚ್ಚಿನ ದಂಡ ಹಾಗೂ ಶಿಕ್ಷೆಯನ್ನು ವಿಧಿಸಲಾಗಿದೆ.

ಇದರಿಂದ ಅರ್ಥಮಾಡಿಕೊಳ್ಳಬೇಕಿರುವುದೇನೆಂದರೆ ಮಹಿಳೆಯರು ತಮ್ಮ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಅಸಮರ್ಥರೆಂದು ರಾಜ್ಯಗಳು ಪರಿಗಣಿಸಿವೆ. ಹಿಂದುತ್ವದ ಗುಂಪುಗಳು ಕೂಡಾ ಇಂಥದ್ದೇ ದೋರಣೆಯನ್ನು ಹೊಂದಿವೆ. ದಲಿತರು, ಮಹಿಳೆಯರು ಎಸ್ ಸಿ ಸಮುದಾಯಗಳಿಗೆ ಈ ಸ್ವಾತಂತ್ರ್ಯವಿರಬಾರದೆಂದು ತಿಳಿದಿವೆ. ಜಾತಿ ಹಿಡಿದು ನಿಂದಿಸುವುದು ವ್ಯಕ್ತಿ ಘನತೆಗೆ ಕುತ್ತು ತಂದಿದೆ. ದೌರ್ಜನ್ಯ ನಿಷೇಧ ಕಾನೂನಿನ ಅಡಿ (೧೯೮೯)[24] ಸೆಕ್ಷನ್ ೩ (ಆರ್), (ಎಸ್),

[24]https://socialjustice.nic.in/writereaddata/UploadFile/The%20Scheduled%20Castes%20and%20Scheduled%20Tribes.pdf

(ಯು), (ವಿ), (ಡಬ್ಲ್ಯು) ದಾಖಲಿಸಬೇಕು. ಈ ಜಾತಿನಿಂದನೆಗಳು ದ್ವೇಷ ಭಾಷಣದ ಮಾದರಿಗಳಾಗಿವೆ. ಭಾರತದ ಸರ್ವೋಚ್ಚ ನ್ಯಾಯಾಲಯವು ದ್ವೇಷ ಭಾಷಣವನ್ನು ಈ ರೀತಿಯಾಗಿ ಅರ್ಥೈಸಿದೆ:

> *"ದ್ವೇಷ ಭಾಷಣವು ಒಬ್ಬ ವ್ಯಕ್ತಿ ಯಾ ಗುಂಪಿನ ಹೊರತಾಗಿಯೂ ಯಾತನೆಯನ್ನು ತಂದೊಡ್ಡುತ್ತದೆ. ಅದು ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ದ್ವೇಷದ ಭಾಷಣವು ಅತಿ ದೊಡ್ಡ ಆಕ್ರಮಣಕಾರಿ ಬೆಳವಣಿಗೆಗೆ ತಳಹದಿ ಹಾಕುತ್ತದೆ. ತಾರತಮ್ಯ, ಪ್ರತ್ಯೇಕತೆ, ಗಡೀಪಾರು, ಹಿಂಸೆ ಮತ್ತು ಅತ್ಯಂತ ತೀವ್ರವಾದ ಸಂದರ್ಭಗಳಲ್ಲಿ ನರಮೇಧದವರೆಗೆ ಅರ್ಥೈಸಿಕೊಳ್ಳಬಹುದು. ದ್ವೇಷದ ಭಾಷಣವು ವಸ್ತುನಿಷ್ಠ ವಿಚಾರಗಳನ್ನು ಚರ್ಚಿಸಿ ಪ್ರತಿಕ್ರಿಯಿಸುವ ಜನರ ಸಾಮರ್ಥ್ಯದ ಮೇಲೆ ಪರಿಣಾಮ ಬೀರುತ್ತದೆ, ಇದರಿಂದಾಗಿ ನಮ್ಮ ಪ್ರಜಾಪ್ರಭುತ್ವದಲ್ಲಿ ಎಲ್ಲರ ಸಂಪೂರ್ಣ ಭಾಗವಹಿಸುವಿಕೆಗೆ ತೊಡಕುಂಟಾಗುತ್ತದೆ."*[25]

## ೧.೬ ಹಿಂದುಳಿದ ಸಮುದಾಯಗಳ ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿ

**ಜನವರಿ 31, 2021 ರಂದು ರಾಮನಗರದಲ್ಲಿ ನಡೆದ ದಾಳಿ**

**ಪಾದ್ರಿ ಸತೀಶ್ ಅವರ ಹೇಳಿಕೆ**

ಅದೊಂದು ಭಾನುವಾರ ಎಂದಿನಂತೆ ಪ್ರಾರ್ಥನೆ ನಡೆಸುತ್ತಿದ್ದ ನಮ್ಮ ಪ್ರಾರ್ಥನಾ ಮಂದಿರಲ್ಲಿ 60 ಕ್ರಿಶ್ಚಿಯನ್ನರಿಗೆ ಪ್ರಾರ್ಥನಾ ಸಭೆ ನಡೆಸುತ್ತಿದ್ದೆ. ಏಕಾಏಕಿ 6 ಮಂದಿ ಪ್ರಾರ್ಥನಾ ಸ್ಥಳಕ್ಕೆ ನುಗ್ಗಿ ಒಬ್ಬ ಪಾದ್ರಿಗೆ ಥಳಿಸಲಾರಂಭಿಸಿದರು. ಹೊರಗೆ ಎಳೆದೊಯ್ದರು, ಆಗ ತಡೆಯಲು ಯತ್ನಿಸಿದ ಕೆಲವು ಕ್ರಿಶ್ಚಿಯನ್ನರನ್ನು ಮತ್ತು ಪಾದ್ರಿಯನ್ನು ಎಗ್ಗಾ ಮುಗ್ಗಾ ಥಳಿಸುತ್ತಿದ್ದರು. ಹೊಡೆತ ತಿಂದವರಲ್ಲಿ ಪಾದ್ರಿಯ 14 ವರ್ಷದ ಹೆಣ್ಣು ಮಗಳೂ ಸೇರಿದ್ದಳು. ಆಕೆಗೆ ಹಲವು ಬಾರಿ ಹೊಟ್ಟೆಗೆ ಒದ್ದ ಪರಿಣಾಮ ಆಕೆಯ ಯೋನಿಯಲ್ಲಿ ರಕ್ತಸ್ರಾವವಾಗಿತ್ತು. ಒಟ್ಟು 27 ಮಂದಿಗೆ ಥಳಿಸಿದ್ದರು, ನನಗೂ ಹೊಡೆತದಿಂದ ಗಾಯಗಳಾದವು. ಕೆಲವು ಅನುಯಾಯಿಗಳು ಮತ್ತೊಬ್ಬ ಪಾದ್ರಿ ಮತ್ತು ಗಾಯಗಳಾಗಿದ್ದವರನ್ನು ಆಸ್ಪತ್ರೆಗೆ ಕೊಂಡೊಯ್ದರು. ನಾನು ಮತ್ತೆ ಕೆಲವರೊಂದಿಗೆ ಪೊಲೀಸ್ ಠಾಣೆಗೆ ಹೋದೆ.

ಕೆಲವು ಗೂಂಡಾಗಳ ವಿರುದ್ಧ ಎಫ್ ಐ ಆರ್ ದಾಖಲಿಸಿದೆವು. ಅಂತೆಯೇ ಆ ಗುಂಪಿನವರು ನನ್ನ ಮತ್ತು ಮತ್ತೊಬ್ಬ ಪಾದ್ರಿಯ ವಿರುದ್ಧ ಸೆಕ್ಷನ್ 295, 295 ಎ ಮತ್ತು ಸೆಕ್ಷನ್ 153 ಎ ದಾಖಲಿಸಿದರು.

ಅವರನ್ನೆಲ್ಲಾ ಬಂಧಿಸಿದ್ದಾರೋ ಇಲ್ಲವೋ ಇನ್ನೂ ನಮಗೆ ತಿಳಿದಿಲ್ಲ. ಮಹಿಳೆಯರು ಮತ್ತು ಮಕ್ಕಳು ತೀವ್ರ ಆಘಾತಕ್ಕೆ ಒಳಗಾಗಿದ್ದಾರೆ, ಅದು ಕೇವಲ ಹೊಡೆತದಿಂದಾದ ಗಾಯಗಳಿಂದಲ್ಲ ಬದಲಿಗೆ ಅವರು ಪೂಜೆ ಸಲ್ಲಿಸುವ ಜಾಗದಲ್ಲಿ ಅಂಥದೊಂದು ಘಟನೆ ನಡೆಯಿತಲ್ಲಾ ಅದು ಅವರ ದೊಡ್ಡ ಆಘಾತಕ್ಕೆ ಕಾರಣವಾಗಿದೆ.

[25] Pravasi Bhalai Sangathan v Union of India, AIR 2014 SC1591

**ಬೆಳಗಾವಿಯಲ್ಲಿ ಏಪ್ರಿಲ್ 5, 2021 ರಂದು ನಡೆದ ದಾಳಿ**

**ಪಾದ್ರಿ ಸೈಲೇಶ್ ಅವರ ಹೇಳಿಕೆ**

ಈಸ್ಟರ್ ನಂತರದ ರಾತ್ರಿ ನಾನು ನನ್ನ ಹೆಂಡತಿ ಮತ್ತು ಮೂವರು ಮಕ್ಕಳೊಂದಿಗೆ ಇದ್ದಾಗ ನನ್ನ ಹೆಂಡತಿಗೆ ಎದೆ ನೋವು ಕಾಣಿಸಿಕೊಂಡಿದೆ. ಅದಾಗ ನಮ್ಮ ಕುಟುಂಬ ವೈದ್ಯರಿಗೆ ಕರೆ ಮಾಡಿದೆ. ವೈದ್ಯರು ಸೋಮವಾರ ಮಧ್ಯಾಹ್ನ ಬರಹೇಳಿದರು. ನಾವು ಕೊಂಚ ಮುಂದಾಗಿ ತಲುಪಿದ್ದರಿಂದ ವೈದ್ಯರನ್ನು ನೋಡುವವರೆಗೂ ವಿಶ್ರಾಂತಿ ಪಡೆಯಲು ನಮ್ಮ ಅತ್ತಿಗೆ/ನಾದಿನಿಯ ಮನೆಗೆ ಹೋದೆವು. 11:30 ರ ಸುಮಾರಿಗೆ 60 ಜನರ ಗುಂಪು ಹೊರಗೆ ಕಾಯುತ್ತಿತ್ತು.

ಆ ಗುಂಪು ನನ್ನನ್ನು ಹೊರಗೆ ಎಳೆದೊಯ್ದು ಯಾರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಲು ಬಂದಿದ್ದೀಯಾ ಎಂದು ಕಿರುಚಾಡಿದರು. ನಾನು ಅವರಿಗೆ ತಿಳಿಸಿ ಹೇಳಲು ಪ್ರಯತ್ನಿಸಿದರೂ ಯಾರೂ ನನ್ನ ಮಾತನ್ನು ಕೇಳಲು ಸಿದ್ಧರಿರಲಿಲ್ಲ. ನಾನು ಯಾವುದೇ ಪ್ರಾರ್ಥನೆಗಾಗಿ ಕೂಡಾ ಹೋಗುತ್ತಿಲ್ಲ ಎಂದು ಹೇಳಲು ಪ್ರಯತ್ನಿಸಿದೆ. ಕ್ಷಣಾರ್ಧದಲ್ಲಿ ನನ್ನ ವಿರುದ್ಧ ಬೈಗುಳ ತಾರಕಕ್ಕೇರಿತು ಜೊತೆಗೆ ನನ್ನನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದರು. ಚರ್ಚ್‌ಗೆ ಬರುತ್ತಿದ್ದ ಎಲ್ಲಾ ಕ್ರಿಶ್ಚಿಯನ್ ಅನುಯಾಯಿಗಳನ್ನು ಚರ್ಚ್‌ಗೆ ಬರಬಾರದೆಂದು ನಾನೇ ಸೂಚಿಸಬೇಕೆಂದು ಹೇಳಿದರು.

ಅಲ್ಲಿಂದ ನನ್ನನ್ನು ಮುಖ್ಯ ರಸ್ತೆಗೆ ಎಳೆದೊಯ್ದರು ಮತ್ತು ಗುಂಪಿನಲ್ಲಿದ್ದ ಕನಿಷ್ಠ 30 ಜನರು ನನ್ನನ್ನು ಹಿಗ್ಗಾ ಮುಗ್ಗಾ ಥಳಿಸಿದರು. ಸಹಾಯ ಮಾಡಲು ಬಂದ ನನ್ನ ಹೆಂಡತಿಯನ್ನು ಪದೇ ಪದೇ ಪಕ್ಕಕ್ಕೆ ತಳ್ಳಿದರು. "ಈಗ ಇವನನ್ನು ಕೊಂದುಬಿಡುತ್ತೇವೆ !" ಎಂದು ಕಿರುಚುತಿದ್ದ ಗುಂಪಿನ ಆರ್ಭಟವನ್ನು ನನ್ನ ಮಕ್ಕಳು ಭಯಭೀತರಾಗಿ ನೋಡುತ್ತಿದ್ದರು.

ನನ್ನನ್ನು ರಸ್ತೆಯಲ್ಲಿ ಮೆರವಣಿಗೆ ಮಾಡಿ ತಲೆಗೆ ಕಲ್ಲಿನಿಂದ ಹೊಡೆದರು. ಬಲವಂತವಾಗಿ ನನ್ನ ಹಣೆಯ ಮೇಲೆ ಮತ್ತು ನನ್ನ ಹೆಂಡತಿಯ ಹಣೆಯ ಮೇಲೆ ಕುಂಕುಮವನ್ನು ಹಚ್ಚಿದರು. ನಾವು ಪೊಲೀಸ್ ಠಾಣೆಗೆ ಹೋದಾಗ ದೂರು ದಾಖಲಿಸುವ ಮೊದಲು ಆಸ್ಪತ್ರೆಯಿಂದ ಮೆಡಿಕೋ-ಲೀಗಲ್ ಕೇಸ್ ಪಡೆಯಬೇಕು ಎಂದು ಹೇಳಿದರು.

"ನಾನು ತೀವ್ರವಾಗಿ ಗಾಯಗೊಂಡೆನು, ನನ್ನ ಕಿವಿಗಳಿಂದ ರಕ್ತಸ್ರಾವವಾಯಿತು ಮತ್ತು ಒಂದು ತಿಂಗಳಿನಿಂದ ನನಗೆ ಸರಿಯಾಗಿ ಕೇಳಲು ಸಾಧ್ಯವಾಗಿಲ್ಲ" ನನ್ನ ಒಳಗಿನ ಕಿವಿಯಲ್ಲಿ ನೋವು ಅಸಹನೀಯವಾಗಿತ್ತು ಮತ್ತು ಇಂದಿಗೂ ಅದರ ನೋವಿದೆ.", ನನ್ನ ಹೆಂಡತಿ ನಾಲ್ಕು ದಿನಗಳ ಕಾಲ ನೋವಿನಿಂದ ಬಳಲಿದಳು. ನನ್ನ ಮಕ್ಕಳು ಇನ್ನೂ ಆಘಾತದಲ್ಲಿಯೇ ಇದ್ದಾರೆ.

ಕಾನೂನು ಕಟ್ಟಳೆಗಳಲ್ಲಿರಬೇಕಾದ ಸಮಾಜದಲ್ಲಿ ಕ್ರೈಸ್ತರ ವಿರುದ್ಧ ನಡೆದಿರುವ ಈ ದೌರ್ಜನ್ಯಗಳು ಹಿಂದುತ್ವದ ಗುಂಪುಗಳು ನಿರ್ಭಯವಾಗಿ ಕಾನೂನು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗುತ್ತದೆ. ಸಂವಿಧಾನಾತ್ಮಕವಾದ ಪ್ರಜಾಪ್ರಭುತ್ವದಲ್ಲಿ ಯಾರೂ

ಕಾನೂನನ್ನು ಕೈಗೆ ತೆಗೆದುಕೊಳ್ಳಲು ಹಕ್ಕಿಲ್ಲ ಅಂತೆಯೇ ಅವರ ನಂಬಿಕೆ ಹಾಗೂ ಅಭಿಪ್ರಾಯಗಳನ್ನು ಕ್ರೂರವಾಗಿ ಜಾರಿಗೆ ತರಲೂ ಸಾಧ್ಯವಿಲ್ಲ.

ಕ್ರೈಸ್ತರ ಪ್ರಾರ್ಥನಾ ಸ್ಥಳಗಳಿಗೆ ನುಗ್ಗಿ ದಾಂದಲೆ ಮಾಡುವ ಈ ಹಿಂದುತ್ವ ಗುಂಪುಗಳ ಸಾಮಾನ್ಯವಾಗಿ ಜಾತಿ ನಿಂದನೆ ಮಾಡುವುದಲ್ಲದೆ ಮಹಿಳೆಯರನ್ನೂ ಲೆಕ್ಕಿಸದೆ ದಾಳಿ ಮಾಡುತ್ತಾರೆ. ಜಾತಿ ಹಿಡಿದು ಮಾತನಾಡುತ್ತಾರೆ, ಅನೈತಿಕ ಲೈಂಗಿಕ ಭಾಷೆಗಳನ್ನು ಬಳಸಿ ನಿಂದಿಸುತ್ತಾರೆ. ಮಹಿಳೆಯರಾದರೂ ಮರು ಮಾತನಾಡಲೆತ್ನಿಸಿದರೆ ಲೈಂಗಿಕ ಕಿರುಕುಳ ಕೊಡುತ್ತಾರೆ.

ಪೊಲೀಸರು ಪಾದ್ರಿ ಮತ್ತು ಅನುಯಾಯಿಗಳನ್ನು ಠಾಣೆಗೆ ಕರೆದುಕೊಂಡು ಹೋಗಿ ಬಂಧಿಸಿದಾಗ ಅಲ್ಲಿ ಕಾನೂನು ರೀತ್ಯಾ ಮಹಿಳಾ ಸಿಬ್ಬಂಧಿ ಇರಲಿಲ್ಲ. ಲೈಂಗಿಕ ಕಿರುಕುಳ ನಡೆದಾಗ್ಯೂ ಪೊಲೀಸರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳುವುದಿರಲಿ ಆರೋಪಿಗಳಾರು ಮತ್ತು ಅವರ ಪೂರ್ವಾಪರವೇನು ಎಂಬುದು ತಿಳಿದಿದ್ದಾಗ್ಯೂ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ.

ಪ್ರಾರ್ಥನಾ ಸಭೆಗಳ ಮೇಲಾದ ಬಹುತೇಕ ಎಲ್ಲಾ ದಾಳಿಗಳ ಸಮಯದಲ್ಲೂ ಮಹಿಳೆಯರು ಮತ್ತು ಮಕ್ಕಳಿದ್ದರು. ಕೆಲವು ಕಡೆ ಕ್ರೈಸ್ತ ಪಾದ್ರಿಗಳನ್ನು ಬಂಧಿಸಿದಾಗ ಮಹಿಳೆಯರು ಮತ್ತು ಮಕ್ಕಳನ್ನು ಬಂಧಿಸಿದ್ದ ಉದಾಹರಣೆಗಳಿವೆ. ಒಂದು ಘಟನೆಯಲ್ಲಿ ಚಿಕ್ಕವಯಸ್ಸಿನ ಹುಡುಗನನ್ನು ಏಳು ದಿನಗಳ ಕಾಲ ಬಾಲಾಪರಾದಿಗಳ ಬಂಧಿಖಾನೆಯಲ್ಲಿರಿಸಲಾಗಿತ್ತು.

ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯವನ್ನು ತಡೆಯಲು ಪೊಲೀಸರು ಯಾವ ಪ್ರಯತ್ನವನ್ನು ಮಾಡುತ್ತಿಲ್ಲ. ಅಂತೆಯೇ ಬಂಧಿಸುವ ಅಥವಾ ವಶದಲ್ಲಿಟ್ಟುಕೊಳ್ಳುವ ಪ್ರಕ್ರಿಯೆಯಲ್ಲಿ ಕಾನೂನನ್ನೂ ಪಾಲಿಸುತ್ತಿಲ್ಲ. ಈ ಅಬ್ಬರವು ಸುರಕ್ಷತೆಯನ್ನು ನಿರಾಕರಿಸುವುದಲ್ಲದೆ ಸಂವಿಧಾನಿಕವಾಗಿ ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳ ತೀವ್ರ ಉಲ್ಲಂಘನೆಯಾಗಿದೆ.

## ೧.೭ ದ್ವೇಷ ಅಪರಾಧಗಳ ಸಂದರ್ಭದಲ್ಲಿ ಪೊಲೀಸರ ಶಾಮೀಲು

**ಜನವರಿ 24, 2021 ರಂದು ಮಂಡ್ಯದಲ್ಲಿ ನಡೆದ ದಾಳಿ**

**ಪಾದ್ರಿ ಹರೀಶ್ ಅವರ ಹೇಳಿಕೆ**

ಅದೊಂದು ದಿನ ಮಗುವಿನ ನಾಮಕರಣದ ಸಲುವಾಗಿ ಇಬ್ಬರು ಸಹೋದರರು ಚರ್ಚ್ ನಲ್ಲಿ ಪ್ರಾರ್ಥನಾ ಸಭೆ ನಡೆಸುತ್ತಿದ್ದರು. ಕೇಕು ಕತ್ತರಿಸಿ ಆ ಫೋಟೋಗಳನ್ನು ಫೇಸ್ ಬುಕ್ ನಲ್ಲಿ ಪ್ರಕಟಿಸಿದ್ದರು. ಈ ಘಟನೆಯು ಆ ಹಳ್ಳಿಯಲ್ಲಿ ಬಲಪಂಥೀಯ ತೀವ್ರವಾದಿಗಳ ಗಮನ ಸೆಳೆಯಿತು.

ಅದಾದ ನಂತರ ಮತ್ತೊಂದು ದಿನ (ಜನವರಿ 24 ರಂದು) ಕ್ರಿಶ್ಚಿಯನ್ನರ ಮೇಲೆ ಅವರ ಮನೆಗಳ ಬಳಿಯೇ ದಾಳಿ ಮಾಡಿದರು. ರಾಷ್ಟ್ರೀಯ ಸ್ವಯಂಸೇವಕ ಸಂಗದ ಸದಸ್ಯರು ಮಹಿಳೆಯರು ಮಕ್ಕಳನ್ನು ಸೇರಿದಂತೆ ಎಲ್ಲರ ವಿರುದ್ಧವೂ ಅವಾಚ್ಯ ಶಬ್ಧಗಳಿಂದ ನಿಂದಿಸಿದರು. ಈ ತೀವ್ರವಾದಿಗಳು ಪೊಲೀಸರನ್ನೂ ಕರೆಸಿದರು, ಅವರು ನಮ್ಮಲ್ಲಿ ಕೆಲವರನ್ನು ವಶಕ್ಕೆ ಪಡೆದುಕೊಂಡರು. ಇದೆಲ್ಲದರ ಬಗ್ಗೆ ನನಗೆ ತಿಳಿದಾಗ ಕೆಲವು ಅನುಯಾಯಿಗಳೊಂದಿಗೆ ಪೊಲೀಸ್ ಠಾಣೆಗೆ ಹೋದೆ. ಅಲ್ಲಿದ್ದ ಗುಂಪು ನಮ್ಮ ವಿರುದ್ಧ ವಾಗ್ದಾಳಿ ನಡೆಸುತ್ತಲೇ ಇತ್ತು. ಮಹಿಳೆಯರು ತಮ್ಮನ್ನು ತಾವು ರಕ್ಷಿಸಿಕೊಳ್ಳಲೆತ್ನಿಸುತ್ತಿದ್ದವರಿಗೆ ಬೆದರಿಕೆ ಹಾಕಲಾಯಿತು. ನಾವು ಅವರ ವಿರುದ್ಧ ದೂರು ದಾಖಲಿಸಲು ಪ್ರಯತ್ನಿಸಿದೆವು. ಆದರೆ ನಮಗೆ ಆ ಅವಕಾಶವನ್ನೇ

ನಿರಾಕರಿಸಲಾಯಿತು. ಮಹಿಳೆಯೊಬ್ಬರ ಲ್ಯಾಪ್ ಟಾಪ್ ಅನ್ನು ವಶಪಡಿಸಿಕೊಂಡರು. ಅಲ್ಲಿನ ಅಧಿಕಾರಿಯೊಬ್ಬರು ಈಗಾಗಲೇ ಸಚಿವ ನಾರಾಯಣ ಗೌಡರು ಕರೆ ಮಾಡಿ ಕ್ರಿಶ್ಚಿಯನ್ನರನ್ನು ಜೈಲಿಗೆ ಹಾಕಿ ಎಂದು ಹೇಳಿದ್ದಾರೆಂದು ತಿಳಿಸಿದರು. ಒಬ್ಬ ಅಧಿಕಾರಿ ನಾರಾಯಣಗೌಡರ ಕಚೇರಿಗೆ ಕರೆ ಮಾಡಿ ಕ್ರಿಶ್ಚಿಯನ್ನರು "ಶರಣಾಗಿದ್ದಾರೆ" ಎಂದೂ ತಿಳಿಸುತ್ತಿದ್ದದ್ದನ್ನು ನಾವು ಕಂಡೆವು. ಈ ಘಟನೆಯು ಹೀಗೆಯೇ ಪತ್ರಿಕೆಗಳಲ್ಲಿ ಸುದ್ದಿಯಾಯಿತು. ನಮ್ಮಲ್ಲಿ ಆರು ಮಂದಿಯನ್ನು ಬಂಧಿಸಲಾಯಿತು. ಇಬ್ಬರು ಮಹಿಳೆಯರು ಇಬ್ಬರು ಚಿಕ್ಕವಯಸ್ಸಿನವರು ಒಂದು ಚಿಕ್ಕ ಮಗು ಹಾಗೂ ಒಬ್ಬ ಹದಿಹರೆಯದವರು.

ಇನ್ಸ್‌ಪೆಕ್ಟರ್ ಪ್ರಭಾಕರ್ ನನ್ನ ವಿರುದ್ಧ ಬಹಳ ಹೊರಟಾಗಿ ಮಾತನಾಡಿದರು. "ನಮ್ಮ ಬಳಿ ಇರುವ ನಿಮ್ಮ ಲ್ಯಾಪ್ ಟಾಪ್ ನಲ್ಲಿ ಏನು ಹಾಕಬೇಕೆಂದು ನಮಗೆ ಗೊತ್ತಿದೆ, ಯಾವುದೇ ಸಾಕ್ಷಾಧಾರ ಇಲ್ಲದಿದ್ದರೂ ನಿಮ್ಮ ವಿರುದ್ಧದ ಕೇಸನ್ನು ಹೇಗೆ ಬಲಪಡಿಸಿ ನೀವು ಎಂದಿಗೂ ಜೈಲಿನಿಂದ ಬರಲಾಗದಂತೆ ನೋಡಿಕೊಳ್ಳುವುದು ಹೇಗೆಂದು ತಿಳಿದಿದೆ" ಎಂದು ಹೇಳಿದರು. ಪೊಲೀಸ್ ಠಾಣೆಯಿಂದ ನಮಗೆ ನಿಯೋಜಿಸಿದ್ದ ವಕೀಲರು ನಮಗೆ ನಗದು ಜಾಮೀನು ಕೊಡಬೇಡಿ ಎಂದರಲ್ಲದೆ ನಮ್ಮ ಪರ ವಾದ ಮಂಡಿಸುತ್ತಿದ್ದರೂ ಪೊಲೀಸರು ನಮ್ಮ ಬಳಿ 35,000 ನಗದು ಪಡೆದು ಅದಕ್ಕೆ ಯಾವುದೇ ರಶೀದಿ ನೀಡಲಿಲ್ಲ, ಬದಲಿಗೆ ನಮಗೆ ಸಹಾಯ ಮಾಡುವುದಾಗಿ ಹೇಳಿದರು. ಇಬ್ಬರು ಮಹಿಳೆಯರು ಮತ್ತು ಇಬ್ಬರ ಮಕ್ಕಳಿಗೆ ಜಾಮೀನು ನೀಡಲಾಯಿತು. ಇಬ್ಬರು ಕಿರಿಯರನ್ನು ಮಂಡ್ಯದ ಜೈಲಿಗೆ ಕಳುಹಿಸಲಾಯಿತು, ಆ ಜೈಲಿನಲ್ಲಿ ಜಾಗವಿಲ್ಲವೆಂದು ಹೇಳಿದಾಗ ಅಲ್ಲಿಂದ ಮೈಸೂರು ಬಾಲಾಪರಾಧಿಗಳ ಜೈಲಿನಲ್ಲಿ ಒಂದು ವಾರಗಳ ಕಾಲ ಅವರಿಗೆ ಜಾಮೀನು ದೊರೆಯುವವರೆಗೂ ಇರಿಸಲಾಗಿತ್ತು. ನಂತರ ಅವರೆಲ್ಲಾ ತಮ್ಮ ಮೂಲ ಸ್ಥಳ ಬಳ್ಳಾರಿಗೆ ತೆರಳಿದರು. ಅವರು ದಿನಗೂಲಿಯನ್ನು ಹುಡಿಕಿ ಬಂದವರಾಗಿದ್ದರು.

**ಸೆಪ್ಟೆಂಬರ್ 10, 2021 ರಂದು ಉಡುಪಿಯಲ್ಲಿ ನಡೆದ ದಾಳಿ**

**ಪಾದ್ರಿ ವಿನಯ್ ಹೇಳಿಕೆ**

ನನ್ನ ಹಳ್ಳಿಯ ಡಿಸೋಜಾ ಕಾಂಪ್ಲೆಕ್ಸ್ ನಲ್ಲಿ ನಾನು ಪ್ರಾರ್ಥನಾ ಸಭೆ ನಡೆಸುತ್ತಿದ್ದೆ. 2011 ಮಾರ್ಚ್ ತಿಂಗಳಿಂದ ಇದೇ ಸ್ಥಳದಲ್ಲಿ ನಮ್ಮ ಪ್ರಾರ್ಥನಾ ಸಭೆಗಳು ನಡೆಯುತ್ತಿದ್ದವು. ಸೆಪ್ಟೆಂಬರ್ ಮಾಸದಲ್ಲಿ ಕೋವಿಡ್ ಕಾರಣಕ್ಕೆ ವಾರಾಂತ್ಯದ ಕರ್ಫ್ಯೂ ಇತ್ತು, ಡಿಸೋಜಾ ಕಾಂಪ್ಲೆಕ್ಸ್ ಲಭ್ಯವಿಲ್ಲವಾದ್ದರಿಂದ ಬೇರೆಡೆ ಪ್ರಾರ್ಥನಾ ಸಭೆಯನ್ನು ಶುಕ್ರವಾರದಂದೇ ನಿಗದಿ ಮಾಡಿದ್ದೆ.

ಸಭೆ ಆರಂಭವಾಗಿ 15 ನಿಮಿಷಯಗಳಲ್ಲಿ 25-30 ಮಂದಿ ಸಭೆಯೊಳಗೆ ನುಗ್ಗಿ ಎಲ್ಲರನ್ನೂ ಥಳಿಸುತ್ತಾ ದಾಂದಲೆ ಎಬ್ಬಿಸಿದರು. ನಮ್ಮ ಅನೇಕ ಅನುಯಾಯಿಗಳಿಗೆ ಗಾಯಗಳಾದವು. ಈ ದಾಳಿಯಲ್ಲಿ ಒಬ್ಬ ಮಹಿಳೆಯ ರವಿಕೆಯೂ ಸೇರಿದಂತೆ ಇಬ್ಬರು ಬಟ್ಟೆ ಹರಿದು ಹೋಯಿತು. ತುಸುಕಾಲದ ನಂತರ ಪೊಲೀಸರು ಬಂದು ನೀವೇಕೆ ಗಣೇಶ ಚತುರ್ಥಿಯಂದು ಪ್ರಾರ್ಥನೆ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರು.

ಕಳೆದ 10 ವರ್ಷಗಳಿಂದ ನಾವು ಪ್ರಾರ್ಥನೆ ಸಲ್ಲಿಸುತ್ತಿದ್ದ ಸ್ಥಳ ವಾರಾಂತ್ಯದ ಕರ್ಫ್ಯೂ ಇರುವುದರಿಂದ ಲಭ್ಯವಿಲ್ಲ ಎಂದು ಹೇಳಲು ಪ್ರಯತ್ನಿಸಿದೆ. ದಾಂದಲೆ ಮಾಡಿದ ಕಿಡಿಗೇಡಿಗಳ ಮೇಲೆ ದೂರು ದಾಖಲಿಸಲು ನಾನು ಪೊಲೀಸ್ ಠಾಣೆಗೆ ತೆರಳಿದೆ, ಆಶ್ಚರ್ಯವೆಂಬಂತೆ ಎರಡು ವರ್ಷಗಳ ಹಿಂದೆ ಭೇಟಿಯಾಗಿದ್ದ ಸುನಿಲ್ ಎಂಬಾತನು ಅದಾಗಲೇ ನನ್ನ ಮೇಲೆ 295 ಎ ಅಡಿಯಲ್ಲಿ ದೂರು ದಾಖಲಿಸಿದ್ದ.

ಆ ಉದ್ರಿಕ್ತ ತೀವ್ರವಾದಿಗಳ ವಿರುದ್ಧ ನಾನು ದೂರು ದಾಖಲಿಸಲು ಒತ್ತಾಯಿಸುತ್ತಲೇ ಇದ್ದೆ ಅಂತೆಯೇ ಮಹಿಳೆಯೊಬ್ಬರ ಮೇಲೆ ನಡೆದ ದಾಳಿಯಲ್ಲಿ ಆಕೆಯ ರವಿಕೆ ಹರಿದು ಹೋದ ಬಗ್ಗೆಯೂ ಹೇಳಿದೆ. ಆಕೆಯೂ ಪ್ರತ್ಯೇಕ ದೂರು ಕೊಡುಲು ಇಚ್ಛಿಸಿದ್ದಳು. ಆದರೆ ಪೊಲೀಸರು ಎಲ್ಲಾ ವಿವರಗಳು ಒಂದೇ ದೂರಿನಲ್ಲಿರಲಿ ಎಂದು ತಿಳಿಸಿದರು.

ನನ್ನ ದೂರು ದಾಖಲಿಸಿಕೊಂಡಿರುವುದಾಗಿ ತಿಳಿಸಿದರಾದರೂ ಅದಕ್ಕೆ ಯಾವುದೇ ಸ್ವೀಕೃತಿ ಪತ್ರ ಕೊಡಲಿಲ್ಲ. ಮಹಿಳೆಗೆ ತನ್ನ ರವಿಕೆಯ ಹರಿದ ಭಾಗವನ್ನು ತೆಗೆದುಕೊಂಡು ಬರುವಂತೆ ಸೂಚಿಸಿದರು. ಆಕೆ ಅಂತೆಯೇ ತಂದಾಗ ಇದು ನೀನೇ ಕತ್ತರಿಯಲ್ಲಿ ಕತ್ತರಿಸಿ ತಂದಿಲ್ಲವೆಂಬುದು ನಮಗೆ ಹೇಗೆ ತಿಳಿಯಬೇಕು" ಎಂದರು.

ಎರಡುವಾರಗಳಿಂದ ಪ್ರಾರ್ಥನೆಗಳು ಸಂಪೂರ್ಣ ಸ್ಥಗಿತಗೊಂಡಿವೆ. " ಪೊಲೀಸರು ಕಾನೂನು ಸುವ್ಯವಸ್ಥೆ ಸಮಸ್ಯೆ ಇದೆ, ಹಾಗಾಗಿ ನೀವು ಪ್ರಾರ್ಥನೆಗಳನ್ನು ನಡೆಸದಿರುವುದೇ ಒಳ್ಳೆಯದು. ಮತ್ತೆ ದಾಳಿಗಳಾದರೆ ನಾವು ನಿಮ್ಮನ್ನು ರಕ್ಷಿಸಲು ಆಗುವುದಿಲ್ಲವೆಂದರು".

ನನ್ನ ಮನೆಗೆ ಆಗಾಗ ಪೊಲೀಸರು ಬರುತ್ತಿದ್ದುದರಿಂದ ನಾನಿದ್ದ ಮನೆಯ ಮಾಲೀಕರು ನನಗೆ ಒಂದು ತಿಂಗಳ ಗಡುವು ನೀಡಿ ಮನೆ ಖಾಲಿ ಮಾಡಲು ಸೂಚಿಸಿದರು. ಎರಡು ವಾರಗಳ ನಂತರ ನಾನು ಹೊಸ ಮನೆ ಹುಡುಕಿಕೊಂಡು ಮನೆ ಶಿಫ್ಟ್ ಮಾಡುತ್ತಿದ್ದೆ. ವಿಚಾರಣೆಗಾಗಿ ನಾನು ಪೊಲೀಸ್ ಠಾಣೆಗೆ ಹೋಗಿದ್ದಾಗ ಅವರು ಈಗೆಲ್ಲಿ ವಾಸವಾಗಿದ್ದೀಯ ಎಂದು ಕೇಳಿದರು.

"ನಾನು ಹೊಸ ಮನೆ ಹುಡುಕಿಕೊಂಡೆ ಸರ್"

"ನಿನ್ನ ಬಳಿ ಬಾಡಿಗೆ ಕರಾರುಪತ್ರ ಇದೆಯೇ?" ಹೌದು ಎಂದು ಅವರಿಗೊಂದು ಪ್ರತಿ ಕಳುಹಿಸಲು ಒಪ್ಪಿದೆ. ಆಗ ಪೊಲೀಸರು ನನ್ನ ಹೊಸಮನೆಯ ಮಾಲೀಕರನ್ನು ಸಂಪರ್ಕಿಸಿ ಆದಷ್ಟು ಬೇಗ ಮನೆ ಕಾಲಿ ಮಾಡಿಸಿ ಎಂದು ಸೂಚಿಸಿದರು.

ಅಲ್ಲಿಂದಲೂ ಕಾಲಿ ಮಾಡಿ ನಾನೀಗ 37 ಕಿಲೋಮೀಟರ್ ದೂರದಲ್ಲಿ ವಾಸವಾಗಿದ್ದೇನೆ. ಇಲ್ಲಿಗೆ ಬಂದು ನಾಲ್ಕು ದಿನಗಳಾಗಿವೆ.

**ಸೆಪ್ಟೆಂಬರ್ 2021 ರಲ್ಲಿ ಬೆಂಗಳೂರಿನ ಬ್ಯಾಡರಹಳ್ಳಿಯಲ್ಲಿ ನಡೆದ ದಾಳಿ**

**ಪಾದ್ರಿ ರಾಜೇಶ್ ಅವರ ಹೇಳಿಕೆ**

ಸೆಪ್ಟೆಂಬರ್ 2021 ರ ಒಂದು ಭಾನುವಾರ ಬ್ಯಾಡರಹಳ್ಳಿಯ ಪುಟ್ಟದೊಂದು ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನಾ ಸಭೆ ನಡೆಸುತ್ತಿದ್ದೆ. ಈಚೆಗೆ ನಾಲ್ಕೈದು ತಿಂಗಳು ಕರೋನ ಬಿಕ್ಕಟ್ಟಿನ ಕಾರಣಕ್ಕೆ ಪ್ರಾರ್ಥನೆ ಸ್ಥಗಿತಗೊಳಿಸಿದ್ದು ಬಿಟ್ಟರೆ ಕಳೆದ 12 ವರ್ಷಗಳಿಂದ ಅದೇ ಪ್ರಾರ್ಥನಾ ಸ್ಥಳದಲ್ಲಿ ನಾನು ಸಭೆಗಳನ್ನು ನಡೆಸುತ್ತಿದ್ದೆ.

ಭಾನುವಾರ 10 ಗಂಟೆಗೆ ಜನ ಬರಲು ಆರಂಭಿಸಿದರು. ಒಂದು ಗಂಟೆಯ ನಂತರ ಪುನೀತ್ ಕೆರೆಹಳ್ಳಿ ನೇತೃತ್ವದಲ್ಲಿ ಕೇಸರಿ ಸ್ಕಾರ್ಫ್ ಧರಿಸಿದ್ದ ಹತ್ತು ಮಂದಿ ಪ್ರಾರ್ಥನಾ ಸ್ಥಳಕ್ಕೆ ನುಗ್ಗಿದರು. ಹೀಗೆ ದಾಳಿ ಮಾಡಿದವರು ಅವರ ಫೋನ್ ಗಳಲ್ಲಿ ನಮ್ಮ ವಿಡಿಯೋ ಮಾಡಿಕೊಳ್ಳುತ್ತಿದ್ದರು. ಅಂತೆಯೇ ಅನುಯಾಯಿಗಳು ಹಾಗೂ ಪಾದ್ರಿಗಳ ವಿರುದ್ಧ ಹೀನಾಮಾನ ಬೈಯ್ಯುತ್ತಿದ್ದರು. ಅದರಲ್ಲಿ ಕೆಲವರು ಆರ್ ಎಸ್ ಎಸ್ ಸಕ್ರಿಯ ಕಾರ್ಯಕರ್ತರು.

ಆ ಗುಂಪು ನಮಗೆ "ಪ್ರಾರ್ಥನೆ ನಡೆಸಲು ಯಾರು ಅನುಮತಿ ನೀಡಿದ್ದಾರೆ ತೋರಿಸಿ ಹಾಗೆಯೇ ನಿಮಗೆ ಮೈಕ್ ಬಳಸಲು ಅನುಮತಿ ಕೊಟ್ಟವರು ಯಾರೆಂದು ಪ್ರಶ್ನಿಸಿದರು". ಅನುಯಾಯಿಗಳನ್ನು ಕುರಿತು ಅವರ ಹೆಸರು? ಯಾವ ಜಾತಿಯಲ್ಲಿ ಹುಟ್ಟಿದರು? ಅವರ ಮೂಲ ಊರು ಯಾವುದು? ಎಂದು ಕೇಳುವಾಗ ಹೆಚ್ಚಿನ ವಿಡಿಯೋಗಳನ್ನು ಮಾಡಿಕೊಳ್ಳುತ್ತಿದ್ದರು. ಅನುಯಾಯಿಗಳು ತಾವು ಕ್ರಿಸ್ತನಲ್ಲಿ ನಂಬಿಕೆ ಉಳ್ಳವರಾಗಿದ್ದೇವೆ ಎಂದು ಹೇಳಲೆತ್ನಿಸಿದರು, ಅವರ ಹೆಸರುಗಳು ಇನ್ನೂ ಹಿಂದೂ ಹೆಸರುಗಳಾಗಿದ್ದರಿಂದ ಆ ಗುಂಪು ತಮ್ಮ ವಿಡಿಯೋ ತುಣುಕುಗಳಲ್ಲಿ "ನೋಡಿ ಈ ಹಿಂದೂಗಳನ್ನು ಬಲವಂತವಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲಾಗುತ್ತಿದೆ" ಎಂದು ಹೇಳತೊಡಗಿದರು. ಪಾದ್ರಿಗಳಿಗೆ ಮತ್ತು ಚರ್ಚ್ ಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ದಂಡಿಯಾಗಿ ಹಣ ಹರಿದುಬರುತ್ತಿದೆ, ಇವರ ವಿರುದ್ಧ ಕ್ರಮಜರುಗಿಸಲು ನಾವಿಲ್ಲಿದ್ದೇವೆ ಎಂದು ಹೇಳತೊಡಗಿದರು.

ಅನುಯಾಯಿಗಳು ತಮ್ಮ ಅಜ್ಜ ತಾತಂದಿರೂ ಕ್ರೈಸ್ತರಾಗಿದ್ದರು ಎಂದು ಹೇಳುತ್ತಾ ಗುಂಪನ್ನು ನಿಯಂತ್ರಿಸುವ ವ್ಯರ್ಥ ಪ್ರಯತ್ನ ನಡೆಸಿದರು. ಕೆಲವೇ ಸಮಯದಲ್ಲಿ ನಾವು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ನಮ್ಮೊಂದಿಗೆ ಕೆಲವು ಅನುಯಾಯಿಗಳು ಸೇರಿಕೊಂಡರು. ಅಲ್ಲಿ 20-30 ಜನರ ಗುಂಪು ಅದಾಗಲೇ ಸೇರಿತ್ತು.

ಈ ಕ್ರಿಶ್ಚಿಯನ್ನರು ನಿತ್ಯ ಗಲಾಟೆ ಮಾಡುತ್ತಾರೆ ಅದರಿಂದ ನಮಗೆ ಈ ರಸ್ತೆಯಲ್ಲಿ ಕೆಲಸ ಮಾಡಲು, ಓದಲು, ನಿದ್ರೆ ಮಾಡಲು ಸಾಧ್ಯವಗುತ್ತಿಲ್ಲ ಎಂದು ಬಹಳ ಸಿಟ್ಟಿನಿಂದ ಹೇಳುತ್ತಿದ್ದವರಲ್ಲಿ ಚರ್ಚ್‌ನ ನೆರೆಹೊರೆಯವರೂ ಇದ್ದರು. ನಾವು ನಗರದಲ್ಲಿ ನಿತ್ಯ ಒಡನಾಡುತ್ತಿದ್ದ ಅನೇಕರು ನಮ್ಮ ವಿರುದ್ಧ ನಡೆಯುತ್ತಿದ್ದ ಈ ದಾಳಿಗೆ ತುಪ್ಪಸುರಿಯಲು ಸೇರಿಕೊಂಡಿದ್ದನ್ನು ನೋಡಿ ನಮಗೆ ಗಾಬರಿಯಾಯಿತು.

ನಾವು ಭಾನುವಾರ ಮಾತ್ರ ಪ್ರಾರ್ಥನೆ ಮಾಡುತ್ತೇವೆ. ಇದು ಕಳೆದ 12 ವರ್ಷಗಳಿಂದ ನಡೆದುಕೊಂಡು ಬಂದಿದೆ ಎಂದು ಹೇಳಿದೆ. "ಯಾರದರೂ ಒಮ್ಮೆ ನಮ್ಮ ಮೈಕ್ ನಿಂದ ಸಮಸ್ಯೆ ಆಗುತ್ತಿದೆ ಎಂದು ಹೇಳಿದ್ದರೆ ನಾವು ಮೈಕ್ ಬಳಸುತ್ತಲೇ ಇರಲಿಲ್ಲ. ನಮ್ಮಿಂದ ತೊಂದರೆ ಆಗಿದ್ದಕ್ಕೆ ಕ್ಷಮೆ ಯಾಚಿಸುತ್ತೇವೆ" ಎಂದು ಪೊಲೀಸರಿಗೆ ಮತ್ತು ನೆರೆದಿದ್ದ ಗುಂಪಿಗೆ ಹೇಳುವ ಪ್ರಯತ್ನ ಮಾಡಿದೆ.

ಗುಂಪಿನಲ್ಲಿದ್ದ ಇಬ್ಬರು ಮತ್ತು ಪುನೀತ್ ಏಕಾಏಕಿ ತಮ್ಮನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲು ಒತ್ತಾಯಿಸಲಾಗುತ್ತಿದೆ ಎಂದು ಹೇಳಿದರು. ಪೊಲೀಸರಿಗೆ ಸುವಾರ್ತೆಯ ಕರಪತ್ರಗಳನ್ನು ತೋರಿಸಿದ. ನಾನೆಂದೂ ಇವರನ್ನು ನಾನು ನೋಡೇ ಇಲ್ಲ ಎಂದು.

ಮತ್ತೊಬ್ಬ ತಾನು ಆಂಜನೇಯನ ಭಕ್ತನೆಂದು ಹೇಳಿಕೊಂಡು ನಾನು ಹಿಂದೂ ದೇವತೆಗಳನ್ನು ನಿಂಧಿಸುತ್ತೇನೆ ಎಂದು ಆರೋಪಿಸಿದ. ಕೂಡಲೇ ನಾನಾಗಲೀ ಅಥವಾ ಯಾವುದೇ ಪಾದ್ರಿ ಇಂಥದೊಂದು ಕೆಲಸ ಮಾಡುವುದಿಲ್ಲವೆಂದು ಹೇಳಿದೆ. ಇವರು ಕಟ್ಟುಕಥೆಗಳನ್ನು ಹರಿಬಿಡುತ್ತಿದ್ದಾರೆ ಎಂದು ಪೊಲೀಸರಿಗೆ ತಿಳಿಸಿದೆ.

ಕಡೆಗೆ ಗುಂಪನ್ನು ಚದುರಿಸಲು ಪೊಲೀಸರು ವ್ಯರ್ಥ ಪ್ರಯತ್ನ ನಡೆಸಿದರು. ಒಬ್ಬ ಅಧಿಕಾರಿಯು ನಾವು ಕೋವಿಡ್ ನೀತಿ ನಿಯಮಗಳನ್ನು ಉಲ್ಲಂಘಿಸಿ ಪ್ರಾರ್ಥನೆಗೆ ಸೇರಿದ್ದಕ್ಕಾಗಿ ದಂಡ ಕಟ್ಟಬೇಕೆಂದು ಹೇಳಿದರು. ದಂಡ ಕಟ್ಟಿ ಮನೆಗಳಿಗೆ ಹಿಂದುರಿಗಿದೆವು.

ಮುಂದಿನ ಎರಡು ದಿನಗಳಲ್ಲಿ ಈ ಗುಂಪು ಪೊಲೀಸ್ ಠಾಣೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಚೇರಿಯ ಎದುರು ಧರಣಿ ಕುಳಿತರು. ಪೊಲೀಸರು ಎಲ್ಲಾ ಕ್ರಿಶ್ಚಿಯನ್ನರ ಮನೆಗಳಿಗೆ ಭೇಟಿಕೊಟ್ಟು ಅವರೇನಾದರೂ ಬಲವಂತವಾಗಿ ಮತಾಂತರಗೊಂಡಿದ್ದಾರೆಯೇ ಎಂಬುದನ್ನು ತಿಳಿಯಲು ವಿವರವಾದ ವಿಚಾರಣೆ ನಡೆಸಿದರು.

ಕೆಲವೇ ದಿನಗಳಲ್ಲಿ ನಮ್ಮ ಚರ್ಚ್‌ನಲ್ಲಿ ಇನ್ನು ಮುಂದೆ ಪ್ರಾರ್ಥನೆ ನಡೆಸುವಂತಿಲ್ಲವೆಂದು ಬಿಬಿಎಂಪಿಯಿಂದ ನೋಟೀಸ್ ಜಾರಿ ಆಯಿತು. ಎರಡನೆಯ ಸುತ್ತಿನ ವಿಚಾರಣೆಯಲ್ಲಿ ನಾವೇನದರೂ ಅವರಿಗೆ ಮತಾಂತರಗೊಳ್ಳಲು ಹಣ ನೀಡಿದ್ದೇವೆಯೇ ಎಂಬುದನ್ನು ತಿಳಿಯಲು ಪ್ರಶ್ನಿಸಲಾಯಿತು.

ಕೆಲವು ದಿನಗಳ ನಂತರ ಹೊಸ ಪೊಲೀಸ್ ಇನ್ಸ್ ಪೆಕ್ಟರ್ ಬಂದು ನಮಗೆ ಪ್ರಾರ್ಥನೆ ಸಲ್ಲಿಸಲು ಅನುವುಮಾಡಿಕೊಟ್ಟು ನಿರ್ಭೀತಿಯಿಂದ ಮುಂದುವರೆಸಿ ಎಂದು ಹೇಳಿದರು. ಬಿಬಿಎಂಪಿಗೆ ಪತ್ರ ಬರೆದು ಪ್ರಾರ್ಥನೆಗೆ ಅನುವು ಮಾಡಿಕೊಡಿ ಎಂದು ಕೇಳಿಕೊಳ್ಳಿ ಎಂದೂ ಸಲಹೆಯಿತ್ತರು.

ಈ ವರದಿಯಲ್ಲಿ ದಾಖಲಾಗಿರುವ ಎಲ್ಲಾ ಘಟನೆಗಳನ್ನು ನೋಡಿದರೆ ಪೊಲೀಸರು ಹಿಂದುತ್ವ ಗುಂಪುಗಳ ಕುತಂತ್ರದಲ್ಲಿ ಭಾಗಿಯಾಗಿರುವುದು ಕಾಣಬಹುದು. ಸ್ಥಳೀಯ ಭಾರತೀಯ ಜನತ ಪಕ್ಷದ ನಾಯಕರು, ಆರ್ ಎಸ್ ಎಸ್, ಬಜರಂಗ ದಳ, ಹಿಂದೂ ಜಾಗರಣಾ ವೇದಿಕೆ ಮತ್ತು ಬಂಜಾರ ನಿಮಗದವರ ಸೂಚನೆಯಿಂದ ಕ್ರಿಶ್ಚಿಯನ್ನರ ಬದುಕನ್ನು ಅಪರಾಧೀಕರಿಸುವಲ್ಲಿ ಮತ್ತು ಪ್ರಾರ್ಥನಾ ಸಭೆಗಳನ್ನು ನಿಲ್ಲಿಸುವಂತೆ ಮಾಡಲಾಗಿದೆ. ಪೊಲೀಸರ ಈ ಜಟಿಲ ಮಾರ್ಗವು ಅಸಹನೆ ಮತ್ತು ಧರ್ಮಾಂಧತೆಯನ್ನು ಎತ್ತಿ ತೋರುತ್ತಿದೆ.

ಬಹುತೇಕ ಪ್ರಾರ್ಥನಾ ಸಭೆಗಳ ಮೇಲೆ ಹಿಂದುತ್ವ ಗುಂಪುಗಳು ದಾಳಿ ನಡೆದ ಸ್ವಲ್ಪವೇ ಸಮಯಕ್ಕೆ ಪೊಲೀಸರು ಅಲ್ಲಿಗೆ ಹೋಗಿದ್ದಾರೆ. ಹೀಗಿರುವಾಗ ಅನೇಕ ಕ್ರಿಶ್ಚಿಯನ್ನರು ಪೊಲೀಸರಿಗೆ ದಾಳಿಯ ವಿಷಯ ಮೊದಲೇ ಗೊತ್ತಿದ್ದೂ ಕ್ರೈಸ್ತ ಧರ್ಮದ ವಿರುದ್ಧದ ದಾಳಿಗೆ ಪೊಲೀಸರೂ ಸಹಕರಿಸುತ್ತಿದ್ದಾರೆ ಎಂದೆನಿಸಿದೆ.

ಪೊಲೀಸರು ಘಟನಾ ಸ್ಥಳಕ್ಕೆ ಬಂದಾಗ್ಯೂ ಹಿಂದುತ್ವ ಗುಂಪುಗಳೊಟ್ಟಿಗೆ ಸೇರಿಕೊಂಡು ಪಾದ್ರಿಗಳನ್ನುದ್ದೇಶಿಸಿ ನೀವು ಬಲವಂತದ ಮತಾಂತರದಲ್ಲಿ ತೊಡಗಿದ್ದೀರಿ ಎಂಬ ಆರೋಪ ಮಾಡುವುದೇ ಆಗಿದೆ. ಬಹಳಷ್ಟು ಘಟನೆಗಳಲ್ಲಿ ದಾಳಿಗೊಳಗಾದ ಸಂತ್ರಸ್ಥರಿಗೆ ರಕ್ಷಣೆ ಕೊಡದೆ ಪಾದ್ರಿಗಳು ಮತ್ತು ಅನುಯಾಯಿಗಳನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಗಂಟೆಗಟ್ಟಲೆ ವಿಚಾರಣೆ ನಡೆಸಿ, ಮಾನಸಿಕವಾಗಿ ದೈಹಿಕವಾಗಿ ಹಿಂಸಿಸಿ 295 ಎ ಮತ್ತು 298 ಸೆಕ್ಷನ್ ಗಳಲ್ಲಿ ಪಾದ್ರಿಗಳ ಮೇಲೆ ದೂರು ದಾಖಲಿಸಲಾಗಿದೆ.

ಕ್ರೈಸ್ತ ಮತದ ಪರವಾದ ವಕೀಲರು ದಾಳಿ ಮಾಡಿದ ಗುಂಪುಗಳು ಮಾಡಿರುವ ದೈಹಿಕ ದಾಳಿ, ಲೈಂಗಿಕ ಕಿರುಕುಳ ಆಸ್ತಿಪಾಸ್ತಿಗಳ ನಷ್ಟದ ವಿರುದ್ಧ ದೂರು ದಾಖಲಿಕೊಳ್ಳಲು ಸತತ ಪ್ರಯತ್ನ ನಡೆಸಿದರೂ ಆ ಕೆಲಸವಾಗಿಲ್ಲ. ಕೆಲವು ಘಟನೆಗಳಲ್ಲಿ ಕ್ರಿಶ್ಚಿಯನ್ನರು ದಂಡ ಕಟ್ಟಿದ್ದಲ್ಲದೆ, ಪ್ರಾರ್ಥನಾ ಸಭೆಗಳನ್ನು ನಿಲ್ಲಿಸಲು ಸಹಕರಿಸದಿದ್ದಲ್ಲಿ ಹೆಚ್ಚಿನ ಕೇಸುಗಳು ಹಾಕುವುದಾಗಿ ಪೊಲೀಸರು ಹೇಳಿದ್ದಾರೆ.

ಕಾನೂನು ಜಾರಿ ಸಂಸ್ಥೆಗಳಾಗಿ ತಮ್ಮ ಪಾತ್ರವನ್ನು ಬುಡಮೇಲು ಮಾಡುತ್ತಾ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯಿಂದ ನುಳುಚಿಕೊಂಡು ಸಾಮಾಜಿಕ ಪ್ರತ್ಯೇಕತಾವಾದಿಗಳಿಗೆ ಬಲ ತುಂಬುತ್ತಿದ್ದಾರೆ. ಕೆಲವು ಪ್ರಕರಣಗಳನ್ನು

ದಾಖಲಿಸುವ ಸಮಯದಲ್ಲಿ ಸಂತ್ರಸ್ಥರು ಪೊಲೀಸ್ ಅಧಿಕಾರಿಗಳನ್ನು ಹಿಂದುತ್ವದ ಗುಂಪುಗಳಿಗಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ ಎಂದು ಅನುಕಂಪ ವ್ಯಕ್ತಪಡಿಸಿದ್ದೂ ಉಂಟು.

ಅಂತಹ ಒಂದು ಪ್ರಕರಣದಲ್ಲಿ ಹಿಂದುತ್ವ ಗುಂಪಿನ ಮುಖಂಡರೊಬ್ಬರು ಪೊಲೀಸರಿಗೆ ಕರೆ ಮಾಡಿದಾಕ್ಷಣ ಹೇಗೆ ಅವರು ಪ್ರಾಥನಾ ಸ್ಥಳಕ್ಕೆ ಬಂದರೆಂದು ಬಣ್ಣಿಸಿದರು. ಮೂವರು ಪೊಲೀಸ್ ಅಧಿಕಾರಿಗಳು ಪ್ರಾರ್ಥನಾ ಮಂದಿರಕ್ಕೆ ಪ್ರವೇಶಿಸಿದ ಸಮಯದಲ್ಲಿ ಇಬ್ಬರು ನಾಯಕರನ್ನು ಹೊರಹೋಗುವಂತೆ ಹೇಳಲು ಪ್ರಯತ್ನಿಸುತ್ತಿದ್ದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದರು. ದಾಳಿಕೋರರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಪೊಲೀಸರು ಚರ್ಚ್ ದಾಖಲೆಗಳನ್ನು ಪಾದ್ರಿಗಳಿಂದ ಕೇಳಿದರು. ಪಾದ್ರಿಯೊಬ್ಬರು ಚರ್ಚ್ ದಾಖಲೆಗಳನ್ನು ಪೊಲೀಸ್ ಠಾಣೆಗೆ ತರುವುದಾಗಿ ಹೇಳಿದಾಗ *"ನಿಮ್ಮ ಚರ್ಚ್‌ನ ಹೊರಗೆ ಬಹಳ ದೊಡ್ಡ ಗುಂಪು ಕಾಯುತ್ತಿದೆ. ಅವರನ್ನು ಚದುರಿಸಲು ನಾವು ಮೊದಲು ನಿಮ್ಮ ದಾಖಲೆಗಳನ್ನು ನೋಡಬೇಕಾಗಿದೆ"* ಎಂದರು. ದಾಖಲೆಗಳನ್ನು ನೀಡಿದ ನಂತರ ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಅಲ್ಲಿ ಹೋಗುವಷ್ಟರಲ್ಲಿ ಅವರ ಮೇಲೆ ಕೇಸು ದಾಖಲಾಗಿತ್ತು.

ಕೆಲವು ಸಂದರ್ಭಗಳಲ್ಲಿ ಕ್ರಿಶ್ಚಿಯನ್ನರು ಮತ್ತು ಹಿಂದುತ್ವದ ಗುಂಪುಗಳ ನಡುವೆ ಪೊಲೀಸರು ರಾಜಿ ಸಂಧಾನ ಮಾಡುತ್ತಾರೆ. ದೂರುಗಳನ್ನು ಸಲ್ಲಿಸುವುದು ಅಥವಾ ಆರೋಪಗಳನ್ನು ಎತ್ತಿ ಆಡುವ ಮೂಲಕ ಸಂತ್ರಸ್ತರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತದೆಂದು ಹೇಳುವ ಮೂಲಕ ಅವರ ರಾಜಿ ಸಂಧಾನ ನಡೆದಿರುತ್ತದೆ. ಹೀಗೆ ಮಾಡುವಾಗ ಅವರು ಕ್ರಿಶ್ಚಿಯನ್ನರ ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗಿರುವುದನ್ನು ಗುರುತಿಸುವುದಿಲ್ಲ ಅಲ್ಲದೆ ದ್ವೇಷವನ್ನು ಪ್ರಚೋದಿಸುವ, ಹಿಂಸಾಚಾರವನ್ನು ಸಂಘಟಿಸುವ, ನಿಂದನೀಯ ಮತ್ತು ಜಾತಿವಾದಿ ಭಾಷೆಯನ್ನು ಬಳಸುವ ಕಿಡಿಗೇಡಿಗಳನ್ನು ಹೊಣೆಗಾರರನ್ನಾಗಿ ಮಾಡುವುದಿಲ್ಲ.

ಅಪರೂಪಕ್ಕೆ ಒಬ್ಬ ಪೊಲೀಸ್ ಅಧಿಕಾರಿಯು ಹಿಂದುತ್ವ ಗುಂಪುಗಳ ದಾಳಿಯ ನಂತರ ಪಾದ್ರಿ ಅವರಿಗೆ ಕ್ಷಮಾಪಣೆ ಕೇಳಿದ್ದಾರೆ. ಇದನ್ನು ಕ್ಷಮಿಸಿಬಿಡಬಹುದಾಗಿ ಪಾದ್ರಿ ಅಂದುಕೊಂಡರೂ ಸಂವಿಧಾನದ ಪ್ರಕಾರ ಇತರರ ಮೂಲಭೂತ ಹಕ್ಕುಗಳನ್ನು ಕಸಿಯುವುದು ದಂಡನೀಯ ಅಪರಾದವಾಗುತ್ತದೆ ಎಂದು ಹೇಳಿದ್ದಾರೆ.

ಈ ಹಂತದಲ್ಲಿ ಗಮನಿಸಬೇಕಾದ್ದೇನೆಂದರೆ ಕಾನೂನುಗಳಲ್ಲಿ ಪೊಲೀಸರ ಪಾತ್ರ ಸ್ಪಷ್ಟವಾಗಿದೆ. ಸಿಆರ್‌ಪಿಸಿಯ ಸೆಕ್ಷನ್ 154 ರ ಪ್ರಕಾರ[26] ದಾಳಿ ನಡೆಯುವ ಸಾಧ್ಯತೆಯ ಬಗ್ಗೆ ಪೊಲೀಸರು ಮಾಹಿತಿ ಪಡೆದ ತಕ್ಷಣ ಕ್ರಮ ಕೈಗೊಳ್ಳಬೇಕಾಗುತ್ತದೆ. ವಿಶೇಷವಾಗಿ ದೈಹಿಕ ಹಲ್ಲೆ, ನಿಂದನೆ, ಲೈಂಗಿಕ ದೌರ್ಜನ್ಯಗಳನ್ನು ಪೊಲೀಸರ ಸಮ್ಮುಖದಲ್ಲಿ ನಡೆಸುತ್ತಿರುವಾಗ ಕೂಡಲೇ ಎಫ್‌ಐಆರ್ ದಾಖಲಿಸದೇ ಹೋದಲ್ಲಿ ಅವರಿಗೆ ಯಾವುದೇ ಕ್ಷಮೆಯಿಲ್ಲ. ಸಾಂವಿಧಾನಿಕವಾಗಿ, ತೆಹ್ಸೀನ್ ಪೂನಾವಲ್ಲಹಾಸ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ

> *"17. ರಾಜ್ಯಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ವಹಿಸಿರುವ ಅಧಿಕಾರಿಗಳು ಯಾವುದೇ ರೀತಿಯ ನೈತಿಕ ಪೊಲೀಸ್‌ಗಿರಿಯನ್ನು ಅದು ಗೋವಿನ ಬಗೆಗಿರಲಿ ಇನ್ನಾವುದೇ ಸಮಸ್ಯೆ ಇರಲಿ ಅದನ್ನು ತಡೆಯುವುದು ಪೊಲೀಸರ ಜವಾಬ್ಧಾರಿಯಾಗಿರುತ್ತದೆ. ಯಾವುದೇ ಪ್ರಮುಖ ಗುಂಪು ಕಾನೂನನ್ನು ತಮ್ಮ*

[26] https://indiankanoon.org/doc/1980578/

*ಕೈಗೆ ತೆಗೆದುಕೊಂಡಾಗ, ಅದು ಅರಾಜಕತೆ, ಅವ್ಯವಸ್ಥೆ, ಅಸ್ವಸ್ಥತೆ ಮತ್ತು ಅಂತಿಮವಾಗಿ ಹಿಂಸಾತ್ಮಕ ಸಮಾಜದ ಸೃಷ್ಟಿಗೆ ಕಾರಣವಾಗುತ್ತದೆ. ನೈತಿಕ ಪೋಲೀಸ್ ಗಿರಿಯ ಮೂಲಕ ಯಾವುದೇ ಕೃತ್ಯ ಎಸಗಲು ಅವಕಾಶವನ್ನು ನೀಡಲಾಗುವುದಿಲ್ಲ, ಏಕೆಂದರೆ ಇದು ಸಂಪೂರ್ಣವಾಗಿ ವಿಕೃತ ಕಲ್ಪನೆಯಾಗಿದೆ."*[27]

ಇಂಥಹ ನೈತಿಕ ಪೊಲೀಸ್ ಗಿರಿಯನ್ನು ತಡೆಯುವ ಬಾಧ್ಯತೆ ನಿಸ್ಸಂದೇಹವಾಗಿ ರಾಜ್ಯ ಸರ್ಕಾರಕ್ಕಿದೆ. ಆದರೆ ವಾಸ್ತವದಲ್ಲಿ ಪೊಲೀಸರು ಗುಪ್ತವಾಗಿ ಮತ್ತು ಬಹಿರಂಗವಾಗಿ ಅವರನ್ನು ಬೆಂಬಲಿಸುವ ಮೂಲಕ ಗುಂಪುಗಳಿಗೆ ಧೈರ್ಯ ತುಂಬುತ್ತಾರೆ.

ಮೂರು ಅಂಶಗಳಲ್ಲಿ ರಾಜ್ಯದ ಜವಾಬ್ದಾರಿಯನ್ನು ಗುರುತಿಸಬಹುದಾಗಿದೆ ಮೊದಲನೆಯದಾಗಿ, ಕೋಮು ದ್ವೇಷದ ಅಪರಾಧಗಳ ಸಂಭವವನ್ನು ತಡೆಯುವುದು. ಎರಡನೆಯದಾಗಿ ಅಪರಾಧಿಗಳ ವಿರುದ್ಧ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದು, ಮೂರನೆಯದಾಗಿ ಅಂತಹ ಅಪರಾಧಗಳ ಸಂತ್ರಸ್ಥರಿಗೆ ಪರಿಹಾರ ಕಂಡುಕೊಡುವುದು. ಆದರೆ ಕ್ರಿಶ್ಚಿಯನ್ನರ ವಿರುದ್ಧದ ದ್ವೇಷದ ಅಪರಾಧಗಳ ಪ್ರಕರಣಗಳಲ್ಲಿ ಕರ್ನಾಟಕ ಪೊಲೀಸರು ಈ ಕರ್ತವ್ಯಗಳನ್ನು ನಿರ್ವಹಿಸಲಿಲ್ಲ.

## ೧.೮ ಸಮುದಾಯಗಳನ್ನು ಕಡೆಗಣಿಸುವುದರಿಂದಾಗುವ ದೂರಗಾಮಿ ಪರಿಣಾಮ

ಅನೇಕ ಕ್ರೈಸ್ತರನ್ನು ತಪ್ಪಾಗಿ ವಶಪಡಿಸಿಕೊಂಡು ನಂತರ ಬಂಧಿಸಲಾಗಿದೆ. ಇನ್ನೂ ಅನೇಕರ ಮೇಲೆ ಅಮಾನುಷವಾಗಿ ದೈಹಿಕ ಹಲ್ಲೆ ನಡೆಸಿದ್ದಾರೆ. ಲೈಂಗಿಕ ದೌರ್ಜನ್ಯಗಳನ್ನು ಎದುರಿಸುತ್ತಿರುವ ಮಹಿಳೆಯರಿಗೆ ಅಗತ್ಯವಿರುವ ವೈದ್ಯಕೀಯ ನೆರವಿಗಾಗಿ ಮತ್ತು ನ್ಯಾಯಕ್ಕಾಗಿ ಹೋರಾಡಲು ಅವರ ಬಳಿ ಸಂಪನ್ಮೂಲಗಳಿಲ್ಲ. ಕ್ರೂರವಾದ ಗುಂಪು ಹಿಂಸಾಚಾರಕ್ಕೆ ಮಕ್ಕಳು ಸಾಕ್ಷಿಯಾಗಿದ್ದಾರೆ.

ಕ್ರಿಶ್ಚಿಯನ್ ಸಮುದಾಯದ ಮೇಲೆ ಹಿಂದುತ್ವದ ಉಗ್ರಗಾಮಿಗಳು ನಡೆಸುತ್ತಿರುವ ದಾಳಿಯು ಅವರ ಪೂಜಾ ಮನೆಯಲ್ಲಿ ಅಥವಾ ಪೊಲೀಸ್ ಠಾಣೆಯಲಾಗುವ ಹಿಂಸಾಚಾರದಿಂದಷ್ಟೇ ಕೊನೆಗೊಳ್ಳುವುದಿಲ್ಲ. ಇದು ಜೀವ ಬೆದರಿಕೆಗಳು, ತೀವ್ರ ದಾಳಿಗಳು, ಮಾನಸಿಕ ಹಿಂಸೆ, ದ್ವೇಷದ ಮಾತು, ನಕಲಿ ಸುದ್ದಿ ಹರಿಬಿಡುವುದು, ತಾರತಮ್ಯ, ಸಾಮಾಜಿಕ ಬಹಿಷ್ಕಾರ, ಕಾನೂನು ನೆರವು ಮತ್ತು ಆಸ್ಪತ್ರೆಯ ಬಿಲ್‌ಗಳಿಗಾಗಿ ಹೆಚ್ಚಿನ ಹಣ ವ್ಯಯ ಮಾಡುವುದು ಮತ್ತು ಜೀವನೋಪಾಯ ಮತ್ತು ಸಾಮಾಜಿಕ ಭದ್ರತೆಯನ್ನು ಕಳೆದುಕೊಳ್ಳುವ ಬೆದರಿಕೆಗಳ ರೂಪದಲ್ಲಿ ದೈನಂದಿನ ಬದುಕಿನ ವಾಸ್ತವವಾಗಿದೆ.

ನೆರೆಹೊರೆಯವರು ಪೋಲೀಸ್ ಅಧಿಕಾರಿಗಳು ಮತ್ತು ಸ್ಥಳೀಯ ಮುಖಂಡರು ನಡೆಸುವ ಇಂತಹ ದ್ವೇಷದ ಅಪರಾಧಗಳಿಂದಾಗುವ ಮಾನಸಿಕ ಆಘಾತವು ಅವರ ಜೀವನೋಪಾಯ, ಆಹಾರ ಭದ್ರತೆ ಮತ್ತು ಸಹಜ ಜೀವನದ ಮೇಲೆ ದುಷ್ಪರಿಣಾಮ ಬೀರಿದೆ.

[27] AIR 2018 SC 3354

ಚಿಕ್ಕಬಳ್ಳಾಪುರದಲ್ಲಿ ನಡೆದ ಪ್ರಕರಣವೊಂದು ಹೀಗಿದೆ. ಪ್ರಾರ್ಥನಾ ಸಭೆಯಲ್ಲಿ ನಡೆದ ದಾಳಿಯ ನಂತರ ಅನೇಕ ಮಹಿಳೆಯರಲ್ಲಿ ಒಬ್ಬ ಮಹಿಳೆಯನ್ನು ರಾತ್ರಿ 12 ಗಂಟೆವರೆಗೆ ಪೊಲೀಸ್ ಠಾಣೆಯಲ್ಲಿ ವಶದಲ್ಲಿರಿಸಿಕೊಳ್ಳಲಾಗಿತ್ತು. ದೈಹಿಕ ಮತ್ತು ಮಾನಸಿಕ ಆಯಾಸದಿಂದಾಗಿ ಮರುದಿನ ಆಕೆ ತನ್ನ ಕೆಲಸಕ್ಕೆ ಹೋಗಲು ಸಾಧ್ಯವಾಗಲಿಲ್ಲ ತತ್ಪರಿಣಾಮ ಆಕೆ ಕೆಲಸ ಕಳೆದುಕೊಂಡಳು.

ಯಾದಗಿರಿಯ ಮತ್ತೊಂದು ಪ್ರಕರಣ ಹೀಗಿದೆ. 200 ಜನರ ಗುಂಪು ಚರ್ಚ್‌ನ ಹೊರಗೆ ಜಮಾಯಿಸಿತ್ತು, ಅಂದು ಭಾನುವಾರ ಬೆಳಿಗ್ಗೆ ಕೇವಲ 15 ಜನರು ಮಾತ್ರ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ದಾಗ ಪಾದ್ರಿ ಮತ್ತು ಕೆಲವು ಭಕ್ತರ ವಿರುದ್ಧ 295 ಎ ಅಡಿಯಲ್ಲಿ ಕೇಸು ದಾಖಲಿಸಲಾಯಿತು. ಜೊತೆಗೆ ದಾಳಿ ಮಾಡಿದ ಹಿಂದುತ್ವದ ನಾಯಕರ ವಿರುದ್ಧ ದೂರು ದಾಖಲಿಸಲು ಪೊಲೀಸರು ನಿರಾಕರಿಸಿದರು. ನಾಲ್ಕು ಕ್ರಿಶ್ಚಿಯನ್ನರು ಜೈಲಿನಲ್ಲಿ 4 ದಿನಗಳನ್ನು ಕಳೆದರು ಮತ್ತು ಶಾಲೆಗಳು, ಅವರ ಕೆಲಸದ ಸ್ಥಳಗಳು, ಪಡಿತರ ವಿತರಣಾ ಅಂಗಡಿಗಳು ಮತ್ತು ಸಣ್ಣ ವ್ಯಾಪಾರಗಳಿಂದ ತಾರತಮ್ಯವನ್ನು ಎದುರಿಸುತ್ತಿದ್ದಾರೆ. ಪಂಚಾಯತ್ ಸದಸ್ಯರೂ ಸಹ ಚರ್ಚ್‌ಗೆ ಹೋಗುವುದನ್ನು ನಿಲ್ಲಿಸುವಂತೆ ಕ್ರೈಸ್ತರ ಮೇಲೆ ಒತ್ತಡ ಹೇರುತ್ತಲೇ ಇದ್ದಾರೆ.

# ಅಧ್ಯಾಯ ೨: ಧರ್ಮವನ್ನು ಆಚರಿಸುವ, ಶ್ರದ್ಧೆ ಹೊಂದುವ ಮತ್ತು ಪ್ರಚಾರ ಮಾಡುವ ಸಂವಿಧಾನದತ್ತ ಸ್ವಾತಂತ್ರ್ಯ

ಈ ಎಲ್ಲಾ ದ್ವೇಷದ ಅಪರಾಧಗಳು ನಮಗೆ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಮೂಲವನ್ನು ನೆನಪಿಸಿಕೊಳ್ಳುವುದು ಅಗತ್ಯವಿರುತ್ತದೆ. ನಮ್ಮ ಸಂವಿಧಾನವು ಧರ್ಮವನ್ನು ಆಚರಿಸುವ, ಪ್ರತಿಪಾದಿಸುವ ಮತ್ತು ಪ್ರಚಾರಮಾಡುವ ನಮ್ಮ ಹಕ್ಕಿನ ಬಗ್ಗೆ ಏನು ಹೇಳುತ್ತದೆ? ಇದು ಈ ಅಧ್ಯಾಯದ ಹಾದಿಯಲ್ಲಿ ಉತ್ತರಿಸುವ ಕೇಂದ್ರ ಪ್ರಶ್ನೆಯಾಗಿದೆ.

ಭಾರತೀಯ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ಅಧ್ಯಾಯವು ಸಮಾನತೆ, ಸ್ವಾತಂತ್ರ್ಯ, ಶೋಷಣೆಯ ವಿರುದ್ಧದ ಹಕ್ಕುಗಳು, ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳನ್ನು ಒಳಗೊಂಡಿದೆ.

ಸಂವಿಧಾನದ ರಚನಾಕಾರರಿಗೆ ಸ್ಪಷ್ಟವಾಗಿ, ಧರ್ಮದ ಸ್ವಾತಂತ್ರ್ಯದ ಹಕ್ಕು ಕೇವಲ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಉಪ-ಖಂಡ ಆಗಿರಲಿಲ್ಲ ಆದರೆ ಅನುಚ್ಛೇದ 25-28 ರಲ್ಲಿ ಪ್ರತಿಪಾದಿಸಲಾದ ಹಕ್ಕುಗಳ ಸರಣಿಯಲ್ಲಿ ಸಾಕಾರಗೊಳಿಸಲು ಸಾಕಷ್ಟು ಮುಖ್ಯವಾಗಿದೆ. ಈ ಹಕ್ಕುಗಳಲ್ಲಿ, ಮೂಲಭೂತಹಕ್ಕು ಅನುಚ್ಛೇದ 25 ಆಗಿ ಉಳಿದಿದೆ. ಅನುಚ್ಛೇದ 25 ರ ಸಂಬಂಧಿತ ಭಾಗವು ಹೀಗಿದೆ:

> *25. (1) ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ ಮತ್ತು ಈ ಭಾಗದ ಇತರ ನಿಬಂಧನೆಗಳಿಗೆ ಒಳಪಟ್ಟು, ಎಲ್ಲಾ ವ್ಯಕ್ತಿಗಳು ಆತ್ಮಸಾಕ್ಷಿಯ ಸ್ವಾತಂತ್ರ್ಯಕ್ಕೆ ಸಮಾನವಾಗಿ ಅರ್ಹರಾಗಿದ್ದಾರೆ ಮತ್ತು ಮುಕ್ತವಾಗಿ ಧರ್ಮವನ್ನು ಆಚರಿಸುವ, ಶ್ರದ್ಧೆ ಹೊಂದುವ ಮತ್ತು ಪ್ರಚಾರಮಾಡುವ ಹಕ್ಕನ್ನು ಹೊಂದಿರುತ್ತಾರೆ.*

ಸಂವಿಧಾನ ಸಭೆಯ ಪ್ರಮುಖ ಭಾಗವು ಧರ್ಮವನ್ನು ಪ್ರಚಾರಮಾಡುವ ಸ್ವಾತಂತ್ರ್ಯದ ಸುತ್ತ ಕೇಂದ್ರೀಕೃತವಾಗಿತ್ತು.[28] ಪ್ರಚಾರದ ಸ್ವಾತಂತ್ರ್ಯದ ಬಗ್ಗೆ ತೀವ್ರ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ ಧ್ವನಿಗಳು ಇದ್ದವು. ಶ್ರೀ ಲೋಕನಾಥ್ ಮಿಶ್ರಾ ಇದನ್ನು 'ಹಿಂದೂ ಗುಲಾಮಗಿರಿಗಾಗಿ ಚಾರ್ಟರ್' ಮತ್ತು 'ಕರಡು ಸಂವಿಧಾನದ' 'ಕಪ್ಪುಭಾಗ' ಎಂದು ಕರೆದರು ಮತ್ತು ಅವರು ಎಲ್ಲಾ ಸಾಂವಿಧಾನಿಕ ಪೂರ್ವನಿದರ್ಶನಗಳನ್ನು ಅಧ್ಯಯನ ಮಾಡಿದ್ದಾರೆ ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಮೂಲಭೂತ ಹಕ್ಕು ಎಂಬ ಪದದ 'ಪ್ರಚಾರ'ವನ್ನು ಎಲ್ಲಿಯೂ ಉಲ್ಲೇಖಿಸಿಲ್ಲ ಎಂದು ಹೇಳಿದರು.

ಆದಾಗ್ಯೂ, ಈ ಅಭಿಪ್ರಾಯವನ್ನು ಸಂವಿಧಾನ ಸಭೆಯಲ್ಲಿ ಹಲವಾರು ಧ್ವನಿಗಳು ಬಲವಾಗಿ ವಿರೋಧಿಸಿದವು, ಇದು 'ಧರ್ಮವನ್ನು ಪ್ರತಿಪಾದಿಸುವ, ಅಭ್ಯಾಸ ಮಾಡುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯ'ದ ಸಾಂವಿಧಾನಿಕ ರಕ್ಷಣೆಗಾಗಿ ಬಲವಾದ ಪ್ರಭಾವವನ್ನು ಉಂಟುಮಾಡಿತು.

ಪ್ರೊ. ಕೆ.ಟಿ. ಷಾ ಅವರು 'ಪ್ರಚಾರದ ಸ್ವಾತಂತ್ರ್ಯದ ಹಕ್ಕಿಗಾಗಿ' ವಾದಿಸಿದರು, 'ಯಾವುದೇ ನಿರ್ದಿಷ್ಟ ನಂಬಿಕೆಯ ಪ್ರಕಾರವನ್ನು ಪ್ರತಿಪಾದಿಸುವ ಯಾರಾದರೂ ಈ ಲಿಬರಲ್ ರಾಜ್ಯದಲ್ಲಿ, ಪ್ರಯೋಜನಗಳನ್ನು ಅಥವಾ ಸೌಂದರ್ಯಗಳನ್ನು ಇರಿಸಲು

[28] Constituent Assembly Debates, Vol VII, 3rd. December, 1948 and 6th December, 1948, pp-817-842

ಸ್ವಾತಂತ್ರ್ಯವನ್ನು ಹೊಂದಿರಬೇಕು ಎಂಬ ಹಕ್ಕಿನೊಂದಿಗೆ ಯಾವುದೇ ಜಗಳವಿಲ್ಲ ಎಂದು ಹೇಳಿದರು. ಇತರರ ಮುಂದೆ ಅವನ ನಿರ್ದಿಷ್ಟ ರೀತಿಯ ಆರಾಧನೆ.' ಅವರು ನಮೂದಿಸಿದ ಏಕೈಕ ಎಚ್ಚರಿಕೆಯೆಂದರೆ, 'ಶಿಕ್ಷಕ ಅಥವಾ ಬೋಧಕ, ವೈದ್ಯ, ಪಾಲಕ ಅಥವಾ ದಾದಿಯಾಗಿ ಅಧಿಕಾರದಲ್ಲಿರುವವರು, ಅವರ ಮೇಲೆ ಪ್ರಭಾವ ಬೀರಲು ತಮ್ಮ ವಿಶಿಷ್ಟ ಸ್ಥಾನದ ಲಾಭವನ್ನು ಪಡೆದುಕೊಳ್ಳುವ ಮೂಲಕ' ಅನಗತ್ಯ ಪ್ರಭಾವವನ್ನು ಪ್ರಯೋಗಿಸಬಾರದು.

ಪಂಡಿತ್ ಲಕ್ಷ್ಮೀಕಾಂತ ಮೈತ್ರಾ ಅವರು 'ಭಾರತೀಯ ಕ್ರಿಶ್ಚಿಯನ್ ಸಮುದಾಯವು ನನಗೆ ತಿಳಿದಿರುವಂತೆ, ಎಲ್ಲಾ ವರ್ಗಗಳು ಮತ್ತು ಸಮುದಾಯಗಳ ಸೇವೆಗಾಗಿ ಶೈಕ್ಷಣಿಕ ಉನ್ನತಿ, ವೈದ್ಯಕೀಯ ಚಿಕಿತ್ಸೆ ಮತ್ತು ನೈರ್ಮಲ್ಯ, ಸಾರ್ವಜನಿಕ ಆರೋಗ್ಯಕ್ಕಾಗಿ ಪ್ರತಿವರ್ಷ ಸುಮಾರು 2 ಕೋಟಿ ರೂಗಳನ್ನು ಖರ್ಚು ಮಾಡುತ್ತದೆ. ಅವರು ಈ ಮೊತ್ತದ ಹಣವನ್ನು 'ಮತಾಂತರವನ್ನು ಮಾಡುವ ಉದ್ದೇಶಗಳಿಗಾಗಿ' ಬಳಸಿಲ್ಲ. "ಭಾರತದ ಕ್ರಿಶ್ಚಿಯನ್ ಸಮುದಾಯವು ಆ ಮತಾಂತರದ ಕೆಲಸವನ್ನು ನಮ್ಮ ಕೆಲವು ಸ್ನೇಹಿತರು ಮಾಡುವ ಉತ್ಸಾಹ ಮತ್ತು ಉನ್ಮಾದದಿಂದ ಮಾಡಿಲ್ಲ" ಎಂದು ಅವರು ಹೇಳಿದರು ಮತ್ತು "ಭಾರತದ ಪ್ರತಿಯೊಂದು ಸಮುದಾಯಕ್ಕೂ ತನ್ನದೇ ಆದ ಧರ್ಮವನ್ನು ಪ್ರಚಾರ ಮಾಡಲು ಈ ಹಕ್ಕನ್ನು ನೀಡಬೇಕು.' ಅವರಿಗೆ 'ಪ್ರಚಾರ ಎಂದರೆ ಶಸ್ತ್ರಾಸ್ತ್ರಗಳ ಬಲದಿಂದ, ಕತ್ತಿಯಿಂದ ಅಥವಾ ಬಲಾತ್ಕಾರದಿಂದ ಮತಾಂತರವನ್ನು ಅಗತ್ಯಪಡಿಸುವುದು ಎಂದರ್ಥವಲ್ಲ' ಮತ್ತು ಯಾವುದೇ 'ಅಡೆತಡೆಗಳು ಏಕೆ ಇರಬೇಕೆಂದು ಅರ್ಥಮಾಡಿಕೊಳ್ಳಲು ಅವನು ವಿಫಲನಾಗಿದ್ದನು ... ನಿಮ್ಮ ಸ್ವಂತ ಧಾರ್ಮಿಕ ನಂಬಿಕೆಯನ್ನು ಇತರರಿಗೆ ತಿಳಿಸುವುದೇ?' ಅವರು ಪ್ರಚಾರವನ್ನು ಒಳಗೊಂಡಂತೆ ಯಾವುದೇ ಹಾನಿಯನ್ನು ಕಾಣುವುದಿಲ್ಲ ಮತ್ತು ವಾಸ್ತವವಾಗಿ ಇದು ನಮ್ಮ ಮೂಲಭೂತ ಹಕ್ಕಿನ ಮೂಲತತ್ವವಾಗಿದೆ, ಯಾವುದೇ ನಿರ್ದಿಷ್ಟ ಧರ್ಮವನ್ನು ಪ್ರತಿಪಾದಿಸುವ ಮತ್ತು ಆಚರಿಸುವ ಹಕ್ಕು ಎಂದು ಅವರು ಸಮಾಪ್ತಿಗೊಳಿಸುತ್ತಾರೆ.

ಪ್ರಚಾರದ ಹಕ್ಕನ್ನು ಶ್ರೀ ಎಲ್.ಕೃಷ್ಣಸ್ವಾಮಿ ಭಾರತಿ ಅವರು ಸಹ ಬೆಂಬಲಿಸಿದರು, ಅವರು 'ಕೆಲವು ಧರ್ಮದವರು ಪ್ರಚಾರ ಮಾಡಬಾರದು ಅಥವಾ ಅವರ ಅಭಿಪ್ರಾಯಗಳನ್ನು ಪ್ರಚಾರ ಮಾಡಬಾರದು ಎಂದು ಹೇಳುವುದು ನಮ್ಮ ಕಡೆಯಿಂದ ಅಸಹಿಷ್ಣುತೆಯನ್ನು ತೋರಿಸಿದಂತಾಗುತ್ತದೆ ಎಂದಿದ್ದಾರೆ. ಆದುದರಿಂದ, ಬಹುಸಂಖ್ಯಾತ ಸಮುದಾಯದವರು ಈ ಸವಲತ್ತು ಅಲ್ಪಸಂಖ್ಯಾತ ಸಮುದಾಯಗಳಿಗೂ ಅವಕಾಶ ಕಲ್ಪಿಸಿ ತಮಗೂ ಸಿಗಬೇಕು' ಎಂದು ಮನವಿ ಮಾಡಿದರು.

ಶ್ರೀ ಕೆ. ಸಂತಾನಂ ಅವರು 'ಅನಿರ್ಬಂಧಿತ ಆಚರಣೆ ಮತ್ತು ಪ್ರಚಾರದ ಹಕ್ಕಿನ' ಏಕೈಕ ಮಿತಿಯೆಂದರೆ, 'ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ' ಆಧಾರದ ಮೇಲೆ ಹಕ್ಕನ್ನು ಸುತ್ತುವರಿಯಬಹುದು ಎಂಬುದನ್ನು ಸಂವಿಧಾನದಲ್ಲಿ ಸೂಚಿಸಲಾದ ಮಿತಿಗಳು ಎಂದಿದ್ದಾರೆ. ಅವರು 'ಈ ಲೇಖನವನ್ನು ಬಹಳ ಎಚ್ಚರಿಕೆಯಿಂದ ರಚಿಸಲಾಗಿದೆ ಮತ್ತು ವಿನಾಯಿತಿಗಳು ಮತ್ತು ಅರ್ಹತೆಗಳು ಅದು ನೀಡುವ ಹಕ್ಕಿನಷ್ಟೇ ಮುಖ್ಯ' ಮತ್ತು 'ಲೇಖನವು ಇರುವಂತೆಯೇ ಅದಕ್ಕೆ ನಮ್ಮ ಪೂರ್ಣ ಹೃದಯದ ಬೆಂಬಲ ನೀಡುವುದು ಅರ್ಹವಾಗಿದೆ' ಎಂದು ಅವರು ತೀರ್ಮಾನಿಸಿದರು.

ಟಿ.ಟಿ ಕೃಷ್ಣಮಾಚಾರಿ ಅವರು ಅನುಚ್ಛೇದ 25ಕ್ಕೆ ಪ್ರಬಲವಾದ ಪ್ರತಿರಕ್ಷಣೆಯನ್ನು ನೀಡಿದರು. ಅವರು ಆತ್ಮಚರಿತ್ರೆಯ ಟಿಪ್ಪಣಿಯಲ್ಲಿ ಅವರು 'ಕ್ರಿಶ್ಚಿಯನ್ ಸಂಸ್ಥೆಗಳಲ್ಲಿ ಸುಮಾರು ಹದಿನಾಲ್ಕು ವರ್ಷಗಳ ಕಾಲ ಅಧ್ಯಯನ ಮಾಡಿದ್ದಾರೆ' ಮತ್ತು ಅಲ್ಲಿ ಅವರನ್ನು 'ಮತಾಂತರಗೊಳಿಸುವ ಯಾವುದೇ ಪ್ರಯತ್ನವಾಗಿಲ್ಲ' ಎಂದು ಹೇಳಿದರು. ಅವರು ಕ್ರಿಶ್ಚಿಯನ್ ಧರ್ಮದ ಪ್ರಭಾವವನ್ನು 'ನಮ್ಮ ಸ್ವಂತ ಆದರ್ಶಗಳು ಮತ್ತು ನಮ್ಮ ಸ್ವಂತ ದೃಷ್ಟಿಕೋನ'ದ ಮೇಲೆ ಧನಾತ್ಮಕವಾಗಿ ನೋಡಿದರು ಮತ್ತು 'ಧರ್ಮದ ಪ್ರಚಾರವನ್ನು' ಬೆಂಬಲಿಸಿದರು.

ಮತಾಂತರವು ಏಕೆ ನಡೆಯುತ್ತಿದೆ ಎಂಬುದರ ಕುರಿತು ಅವರು ಪರ್ಯಾಲೋಚಿಸಿದ್ದಾರೆ, ಇದು 'ಕೆಲವು ಧರ್ಮದವರು ಮತ್ತು ಕೆಲವು ಸಮುದಾಯಗಳು ತಮ್ಮ ಕಡಿಮೆ ಅದೃಷ್ಟಶಾಲಿ ಸಹೋದರರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿದೆ' ಮತ್ತು 'ಈ ದೇಶದಲ್ಲಿ ಅನೇಕ ಜನರು ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿದ್ದಾರೆ ಬಹುಶಃ ಇದು, ಅವರಿಗೆ ಸೂಕ್ತ ಸ್ಥಾನಮಾನ ನೀಡಿದುದು ಆಗಿರಬೇಕು. ಒಬ್ಬ ಅಸ್ಪೃಶ್ಯನು ಕ್ರಿಶ್ಚಿಯನ್ನಾಗಿ ಉನ್ನತ ಜಾತಿಯ ಹಿಂದೂಗಳೊಂದಿಗೆ ಪ್ರತಿಯೊಂದು ವಿಷಯದಲ್ಲೂ ಸಮಾನನಾದನು, ಮತ್ತು ಆ ನಿರ್ದಿಷ್ಟ ಪ್ರಯೋಜನವನ್ನು ಪಡೆಯುವ ಅಗತ್ಯವನ್ನು ನಾವು ತೆಗೆದುಹಾಕಿದರೆ ಅದು ಪ್ರಾಯಶಃ ಅವನು ಪಡೆಯಬಹುದಾದ ನಿಸ್ಸಂದೇಹವಾಗಿ ಬಹಳ ಮುಖ್ಯವಾದ ಪ್ರಯೋಜನವಾಗಿದೆ, ಅದರ ಹೊರತಾಗಿ ಅವರು ಧರ್ಮದಲ್ಲಿಯೇ ನಂಬಿಕೆ ಹೊಂದಿದ್ದಾರೆ. ಹೊರತಾಗಿ, ಯಾರಾದರೂ ಕ್ರಿಶ್ಚಿಯನ್ನಾಗಲು ಪ್ರೋತ್ಸಾಹ ನೀಡುವುದು ಬಹುಶಃ ಅಸ್ತಿತ್ವದಲ್ಲಿಲ್ಲ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅನುಚ್ಛೇದ 25 ಅನ್ನು ಚರ್ಚೆಗಳ ಮೂಲಕ ಪ್ರಾಯೋಗಿಕವಾಗಿ ಜಾರಿಮಾಡಿದರು ಮತ್ತು ಸ್ಪಷ್ಟವಾಗಿ ಅನುಚ್ಛೇದ 25 ರ ಪಠ್ಯದ ಹಿಂದಿನ ಪ್ರಮುಖ ಶಕ್ತಿಗಳಲ್ಲಿ ಒಬ್ಬರು. ಧರ್ಮವನ್ನು ಅಭ್ಯಾಸ ಮಾಡುವ, ಪ್ರತಿಪಾದಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವು ಅವರ ತತ್ವಶಾಸ್ತ್ರದ ತಿರುಳಾಗಿತ್ತು ಮತ್ತು ಅವರ ಜೀವನ ಪಥವು ಕಲ್ಪನೆಗೆ ಬದ್ಧತೆಯನ್ನು ಒಳಗೊಂಡಿರುತ್ತದೆ. ಒಬ್ಬನು ತನ್ನ ಮೂಲಭೂತ ಹಕ್ಕುಗಳ ಅತ್ಯಗತ್ಯ ಭಾಗವಾಗಿ ಮತಾಂತರವಾಗುವ ಸ್ವಾತಂತ್ರ್ಯವನ್ನು ಹೊಂದಿರಬೇಕು. ಬಾಬಾಸಾಹೇಬ್ ಅಂಬೇಡ್ಕರರು 'ನಾನು ಹಿಂದೂವಾಗಿ ಹುಟ್ಟಿದ್ದೇನೆ ಏಕೆಂದರೆ ಇದರ ಮೇಲೆ ನನಗೆ ನಿಯಂತ್ರಣವಿಲ್ಲ ಆದರೆ ನಾನು ಹಿಂದೂವಾಗಿ ಸಾಯುವುದಿಲ್ಲ' ಎಂಬುದನ್ನು ಅದು ನೆನಪಿಸುತ್ತದೆ. ಅವರ ಜೀವನದ ಅಂತ್ಯದ ವೇಳೆಗೆ, ಅವರು ತಮ್ಮ ಅರ್ಧ ಮಿಲಿಯನ್ ಅನುಯಾಯಿಗಳೊಂದಿಗೆ ಅಕ್ಟೋಬರ್ 14, 1956 ರಂದು ಬೌದ್ಧಧರ್ಮಕ್ಕೆ ಮತಾಂತರಗೊಂಡರು. ಇಂದಿನವರೆಗೂ ಅಕ್ಟೋಬರ್ 14 ಅಥವಾ ಧರ್ಮದೀಕ್ಷೆಯ ದಿನವನ್ನು ಅವರ ಲಕ್ಷಾಂತರ ಅನುಯಾಯಿಗಳು ಆಚರಿಸುತ್ತಾರೆ.

ಆದಾಗ್ಯೂ, ಅನುಚ್ಛೇದ 25 ಆಧಾರವಾಗಿರುವ ವಿಶಾಲವಾದ ವಿಮೋಚನೆಯ ದೃಷ್ಟಿಯನ್ನು ನ್ಯಾಯಾಂಗವು ತನ್ನ 1977 ರ ರೆವ್ಹಾನಿಸ್ಲಾ ವಿರುದ್ಧ ಮಧ್ಯಪ್ರದೇಶದ ರಾಜ್ಯ[29] ರಲ್ಲಿ (ತುರ್ತುಪರಿಸ್ಥಿತಿಯ ಹಿನ್ನೆಲೆಯಲ್ಲಿ ನೀಡಲಾಗಿದೆ) ನಿರ್ಣಯದಲ್ಲಿ ಅರ್ಥಮಾಡಿಕೊಳ್ಳಲಿಲ್ಲ, ಇದು ಪ್ರಚಾರಮಾಡಲು ವಿಶಾಲವಾಗಿ ಹೇಳಲಾದ ಸಾಂವಿಧಾನಿಕ ಸ್ವಾತಂತ್ರ್ಯವನ್ನು ಸಂಕುಚಿತಗೊಳಿಸಿತು. ಅನುಚ್ಛೇದ 25 (1)ರಲ್ಲಿನ 'ಪ್ರಚಾರ' ಎಂಬ ಪದವು 'ಇನ್ನೊಬ್ಬ ವ್ಯಕ್ತಿಯನ್ನು ತನ್ನ ಧರ್ಮಕ್ಕೆ ಮತಾಂತರವಾಗುವ ಹಕ್ಕನ್ನು ನೀಡುವುದಿಲ್ಲ, ಆದರೆ ತನ್ನ ಧರ್ಮವನ್ನು ಅದರ ತತ್ವಗಳ ನಿರೂಪಣೆಯಿಂದ ಪ್ರಸಾರಮಾಡುವ ಅಥವಾ ಹರಡುವ ಹಕ್ಕನ್ನು ನೀಡುತ್ತದೆ' ಎಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ ಯಾವುದೇ ವ್ಯಕ್ತಿಯನ್ನು ಸ್ವಂತ ಧರ್ಮಕ್ಕೆ ಪರಿವರ್ತಿಸುವ ಮೂಲಭೂತ ಹಕ್ಕು ಇರುವಂತಿಲ್ಲ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ತಿಳುವಳಿಕೆಯನ್ನು ಬಳಸಿಕೊಂಡು ಸುಪ್ರೀಂಕೋರ್ಟ್ ಮಧ್ಯಪ್ರದೇಶದ ಶಾಸನವನ್ನು ಅಸಂವಿಧಾನಿಕವೆಂದು ಪರಿಗಣಿಸಿತು, ಅದು 'ಬಲ, ವಂಚನೆ ಅಥವಾ ಆಮಿಷ'ದಿಂದ ಮತಾಂತರವನ್ನು ಅಪರಾಧವೆಂದು ಪರಿಗಣಿಸಿತು ಮತ್ತು 'ಬಲ, ವಂಚನೆ ಮತ್ತು ಪ್ರಚೋದನೆ' ಮೂಲಕ ಮತಾಂತರವನ್ನು ಅಪರಾಧವೆಂದು ಪರಿಗಣಿಸಿದ ಒರಿಸ್ಸಾ ಅಧಿನಿಯಮ. 'ಆಮಿಷ' ಮತ್ತು 'ಪ್ರಚೋದನೆ' 'ಬಲ' ಮತ್ತು 'ವಂಚನೆ' ಒಂದೇ ಅಲ್ಲದ ಕಾರಣ ಇದು ಸಮಸ್ಯಾತ್ಮಕ ನಿರ್ಧಾರವಾಗಿ ಉಳಿದಿದೆ. 'ಆಮಿಷ'

[29] (1977) 1 SCC 677, https://main.sci.gov.in/jonew/judis/5403.pdf

ಮತ್ತು 'ಪ್ರಚೋದನೆ'ಯ ಅಪರಾಧೀಕರಣವು ಒಬ್ಬರ ಧರ್ಮವನ್ನು ಅಭ್ಯಾಸ ಮಾಡಲು, ಪ್ರತಿಪಾದಿಸಲು ಮತ್ತು ಪ್ರಚಾರಮಾಡಲು ಅನುಚ್ಛೇದ 25 ರ ಅಡಿಯಲ್ಲಿ ವ್ಯಕ್ತಿಯ ಸಾಂವಿಧಾನಿಕ ಹಕ್ಕಿನ ಮೇಲೆ ಪ್ರಭಾವ ಬೀರುತ್ತದೆ ಎಂದು ಗುರುತಿಸಲು ಸುಪ್ರೀಂಕೋರ್ಟ್ ವಿಫಲವಾಗಿದೆ.

ಕುತೂಹಲಕಾರಿಯಾಗಿ, ಸುಪ್ರೀಂಕೋರ್ಟ್ ರದ್ದುಗೊಳಿಸಿದ ಒರಿಸ್ಸಾ ಹೈಕೋರ್ಟಿನ ತೀರ್ಪು[30], ಪ್ರಚೋದನೆ ಎಂಬ ಪದದ ಸಮಸ್ಯೆಯನ್ನು ಗುರುತಿಸಿದೆ. ನ್ಯಾಯಾಲಯವು ಗಮನಿಸಿದಂತೆ, 'ಪ್ರಚೋದನೆ' ಪದದ ವ್ಯಾಖ್ಯಾನವು ಅಸ್ಪಷ್ಟವಾಗಿದೆ ಮತ್ತು ಅನೇಕ ಮತಾಂತರ ಚಟುವಟಿಕೆಗಳನ್ನು ವ್ಯಾಖ್ಯಾನದಿಂದ ಒಳಗೊಳ್ಳಬಹುದು ಮತ್ತು ಅನುಚ್ಛೇದ 25 (1) ನಲ್ಲಿನ ನಿರ್ಬಂಧವು ವ್ಯಾಪಕ ವ್ಯಾಖ್ಯಾನವನ್ನು ಒಳಗೊಂಡಿದೆ ಎಂದು ಹೇಳಲಾಗುವುದಿಲ್ಲ. ಒರಿಸ್ಸಾ ಹೈಕೋರ್ಟ್ ವಾಸ್ತವವಾಗಿ ಕಾನೂನಿನ ಅಗತ್ಯವನ್ನು ನೋಡಲಿಲ್ಲ, 'ಬಲದಿಂದ' ಅಥವಾ 'ವಂಚನೆ'ಯಿಂದ ಅಧಿನಿಯಮದಿಂದ ವ್ಯಾಖ್ಯಾನಿಸಲಾದ ಮತಾಂತರದ ನಿಷೇಧವು ಪರಿಚ್ಛೇದದ ಅಡಿಯಲ್ಲಿ ಹಕ್ಕನ್ನು ಖಾತರಿಪಡಿಸುವ ಮಿತಿಗೆ ಒಳಪಟ್ಟಿರುತ್ತದೆ. 25 (1)' ದುರಾದೃಷ್ಟವಶಾತ್, ಒರಿಸ್ಸಾ ಹೈಕೋರ್ಟಿನ ತರ್ಕಬದ್ಧವಾದ ತೀರ್ಪನ್ನು ಸ್ಟಾನಿಸ್ಲಾಸ್‌ನಲ್ಲಿ ರದ್ದುಗೊಳಿಸಲಾಯಿತು.

ಈ ನಿರ್ಧಾರದ ಸಮಸ್ಯೆಯು ತಳಮಟ್ಟದ ಸಾಕ್ಷ್ಯಗಳಲ್ಲಿಯೂ ಹೊರಹೊಮ್ಮುತ್ತದೆ. ಸಾಮಾನ್ಯವಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಬಯಸುವ ಜಾಗರೂಕ ಅಂಶಗಳು, ತಮ್ಮ ಅಸಂವಿಧಾನಿಕ ಕ್ರಮಗಳನ್ನು ಸುಪ್ರೀಂಕೋರ್ಟ್ ತೀರ್ಪಿನಿಂದ ಕಾನೂನುಬದ್ಧಗೊಳಿಸಲಾಗಿದೆ ಎಂದು ಭಾವಿಸುತ್ತಾರೆ. ಸ್ಟಾನಿಸ್ಲಾ ಅನ್ನು ಸಂಕುಚಿತವಾಗಿ ಓದಬೇಕಾಗಿದ್ದರೂ, ತಳ ಮಟ್ಟದಲ್ಲಿ, ಒಬ್ಬರ ಆಯ್ಕೆಯ ಧರ್ಮವನ್ನು ಪ್ರತಿಪಾದಿಸಲು ಮತ್ತು ಅಭ್ಯಾಸ ಮಾಡುವ ಸ್ವಾತಂತ್ರ್ಯದ ಮೇಲಿನ ದಾಳಿಗಳನ್ನು ಕಾನೂನುಬದ್ಧಗೊಳಿಸಲು ಇದನ್ನು ಬಳಸಲಾಗುತ್ತದೆ. ಮತ್ತೊಮ್ಮೆ, ಮತಾಂತರವು ಅಪರಾಧವಲ್ಲ ಮತ್ತು ಸಂವಿಧಾನದ ಪರ್ಯಕ್ಕೆ ನಿಷ್ಠೆಯುಳ್ಳದ್ದಾಗಿದೆ ಬಲವಂತವಾಗಿ ಅಥವಾ ಮೋಸದಿಂದ ಮತಾಂತರಕ್ಕೆ ಪ್ರಯತ್ನಿಸಿದ್ದಲ್ಲಿ ಮಾತ್ರ ಅಪರಾಧವಾಗುತ್ತದೆ ಎಂಬುವುದನ್ನು ಗಮನಿಸಬೇಕು. ಆದಾಗ್ಯೂ, ಇಂದು ಜನಪ್ರಿಯ ಭಾಷಣದಲ್ಲಿ ಮತಾಂತರವನ್ನು ಅಪರಾಧವೆಂದು ಪರಿಗಣಿಸಲಾಗಿದೆ. ಮತಾಂತರವನ್ನು ಅಪರಾಧವಾಗಿ ನೋಡುವ ಈ ಭಾಷೆಯು ಸ್ಟಾನಿಸ್ಲಾಸ್‌ನಲ್ಲಿ ಸುಪ್ರೀಂಕೋರ್ಟ್ ತೀರ್ಪಿನ ದೀರ್ಘಾವಧಿಯ ಹಾನಿಕಾರಕ ಎಂದು ವ್ಯಕ್ತಪಡಿಸಿದೆ.

ಈ ವರದಿಯು ವಾಸ್ತವವಾಗಿ ಅನುಚ್ಛೇದ 25ರ ಮೂಲಭೂತ ಸ್ವಾತಂತ್ರ್ಯವು ಇಂದು ಹೇಗೆ ಅಪಾಯದಲ್ಲಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಇದು, ಪ್ರಶ್ನಿಸಲ್ಪಡುವ ಮತಾಂತರಗೊಳ್ಳುವ ಮತ್ತು ಮತಾಂತರಗೊಳ್ಳುವ ಸ್ವಾತಂತ್ರ್ಯ ಮಾತ್ರವಲ್ಲ, ಆದರೆ ಸಮಾನವಾಗಿ ಒಬ್ಬರ ನಂಬಿಕೆಯನ್ನು ಪ್ರತಿಪಾದಿಸುವ ಮತ್ತು ಅಭ್ಯಾಸ ಮಾಡುವ ಸ್ವಾತಂತ್ರ್ಯ. ಕ್ರಿಶ್ಚಿಯನ್ ಪ್ರಾರ್ಥನಾಸಭೆಗಳು ಮತ್ತು ಚರ್ಚ್‌ಗಳ ಮೇಲಿನ ದ್ವೇಷದ ಅಪರಾಧಗಳ ಸರಣಿಯು ಮತಾಂತರಗೊಳ್ಳುವ ಸ್ವಾತಂತ್ರ್ಯದ ಬಗ್ಗೆ ಅಲ್ಲ ಆದರೆ ನಿಜವಾಗಿಯೂ ಸಮುದಾಯದಲ್ಲಿ ಪ್ರಾರ್ಥನೆ ಮತ್ತು ಪ್ರಾರ್ಥನೆ ಮಾಡುವ ಸ್ವಾತಂತ್ರ್ಯದ ಬಗ್ಗೆ. ಸ್ಟಾನಿಸ್ಲಾಸ್ ಕಾರಣವಾದ ತಳಮಟ್ಟದ ಪರಿಣಾಮಗಳು, ಈ ನಿರ್ಧಾರವನ್ನು ಮರುಪರಿಶೀಲಿಸುವಂತೆ ಮಾಡುವುದು ಬಹಳ ಮುಖ್ಯ.

ಸ್ಟಾನಿಸ್ಲಾಸ್ ನಿರ್ಣಯವು, ಸ್ಪಷ್ಟವಾಗಿ 25ನೇ ಅನುಚ್ಛೇದವನ್ನು ಅಂಗೀಕರಿಸುವಲ್ಲಿ ಸಂವಿಧಾನ ಸಭೆಯ ಸದಸ್ಯರ ಉದ್ದೇಶವು ಭಿನ್ನವಾಗಿದೆ. ಪ್ರಸಾರದ ಹಕ್ಕು ಮತಾಂತರದ ಹಕ್ಕನ್ನು ಒಳಗೊಂಡಿದೆ ಎಂದು ಕರಡುದಾರರು ಸ್ಪಷ್ಟಪಡಿಸಿದ್ದು, ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯ ಮಾನವನ ಮೂಲಭೂತ ಹಕ್ಕಾಗಿತ್ತು.

---

[30] Mrs. Yulitha Hyde and Ors. V State of Orissa and Ors., AIR 1973 Ori 116

2012ರಲ್ಲಿ, ಭಾರತದ ಇವಾಂಜೆಲಿಕಲ್ ಫೆಲೋಶಿಪ್ ವಿರುದ್ಧ ಹಿಮಾಚಲಪ್ರದೇಶ ರಾಜ್ಯದ ಉಚ್ಚ ನ್ಯಾಯಾಲಯದ ಒಂದು ನಿರ್ಣಯದಲ್ಲಿ[31] ಮತಾಂತರ ವಿರೋದಿ ,ಕಾನೂನುಗಳ ವ್ಯಾಪ್ತಿಯನ್ನು ನಿಯಂತ್ರಿಸಲು ಪ್ರಯತ್ನಿಸಲಾಯಿತು. ಉಚ್ಚ ನ್ಯಾಯಾಲಯವು ಹಿಮಾಚಲ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮ, 2006ರ 4ನೇ ಪ್ರಕರಣ ಹಾಗೂ ಹಿಮಾಚಲ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ನಿಯಮಗಳು, 2007 ರ 3ನೇ ನಿಯಮವು 14 ನೇ ಅನುಚ್ಛೇದದ ಉಲ್ಲಂಘನೆ ಮತ್ತು ಭಾರತ ಸಂವಿಧಾನದ ಉಪಬಂಧಗಳನ್ನು ಅತಿಕ್ರಮಿಸುತ್ತವೆ ಎಂದು ಘೋಷಿಸಿತು. ಇದು, ಮಾನವನ ಘನತೆ ಮತ್ತು ಖಾಸಗಿತನದ ಹಕ್ಕನ್ನು ಉಲ್ಲಂಘಿಸುತ್ತದೆ ಎಂಬ ಕಾರಣಕ್ಕಾಗಿ ಪ್ರಾಧಿಕಾರಗಳಿಗೆ ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ಉಪಬಂಧವನ್ನು ಸಹ ಅಸಂವಿಧಾನಿಕವಾದದ್ದು ಎಂದು ಘೋಷಿಸಲಾಯಿತು. ಹಿಮಾಚಲ ಪ್ರದೇಶ ರಾಜ್ಯವು 2006ರ ಅಧಿನಿಯಮವನ್ನು ನಿರಸನಗೊಳಿಸಿದ್ದಾಗ್ಯೂ, ಅದನ್ನು ಹಿಮಾಚಲ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮ, 2019 ಎಂದು ಬದಲಾಯಿಸಿತು, ಇದು ಮೂಲ ಕಾನೂನಿಗಿಂತ ಹೆಚ್ಚು ಜಟಿಲವಾಗಿದೆ.

ಖಾಸಗಿತನದ ಹಕ್ಕನ್ನು ಮೂಲಭೂತ ಹಕ್ಕಾಗಿ ಅಂಗೀಕರಿಸಿರುವಂಥ ಪುಟ್ಟಸ್ವಾಮಿ ವಿರುದ್ಧ ಭಾರತದ ಒಕ್ಕೂಟದಲ್ಲಿನ[32] 2015ರ ನಿರ್ಣಯದ ಹಿನ್ನೆಲೆಯಲ್ಲಿ ಸ್ಟಾನಿಸ್ಲಾಸ್‌ನಲ್ಲಿನ ನಿರ್ಣಯವನ್ನು ಮರುಪರಿಶೀಲಿಸಬೇಕು. ಸರ್ವೋಚ್ಚ ನ್ಯಾಯಾಲಯವು, 'ಖಾಸಗಿತನವು ವ್ಯಕ್ತಿಯ ಪವಿತ್ರತೆಯ ಅಂತಿಮ ಅಭಿವ್ಯಕ್ತಿಯಾಗಿದೆ. ಇದು ಸಾಂವಿಧಾನಿಕ ಮೌಲ್ಯವನ್ನು ಹೊಂದಿದ್ದು, ಮೂಲಭೂತ ಹಕ್ಕುಗಳ ಸ್ಪೆಕ್ಟ್ರಮ್‌ನಾದ್ಯಂತ ವ್ಯಾಪಿಸಿದೆ ಹಾಗೂ ವ್ಯಕ್ತಿಗೆ ಆಯ್ಕೆ ಮಾಡಿಕೊಳ್ಳುವ ಮತ್ತು ಸ್ವಯಂ-ನಿರ್ಣಯ ತೆಗೆದುಕೊಳ್ಳುವ ವಲಯವನ್ನು ಕಾಪಾಡುತ್ತದೆ ಎಂದು ಅಭಿಪ್ರಾಯಪಟ್ಟಿತು.

ನ್ಯಾಯಾಲಯವು,

> *"21ನೇ ಅನುಚ್ಛೇದದೊಂದಿಗೆ ಓದಿಕೊಂಡು, ಸ್ವಾತಂತ್ರ್ಯವು ಏನು ಮತ್ತು ಹೇಗೆ ತಿನ್ನಬೇಕು, ಬಟ್ಟೆ ಧರಿಸುವ ರೀತಿ, ನಂಬಿಕೆ ಸೇರಿದಂತೆ ಜೀವನದ ವಿವಿಧ ಅಂಶಗಳ ಮೇಲೆ ಆದ್ಯತೆಗಳ ಆಯ್ಕೆಯನ್ನು ಹೊಂದಲು ವ್ಯಕ್ತಿಯನ್ನು ಶಕ್ತಗೊಳಿಸುತ್ತದೆ. ಹಾಗೂ ಸ್ವಾಯತ್ತತೆ ಮತ್ತು ಸ್ವಯಂ-ನಿರ್ಣಯಕ್ಕೆ ಮನಸ್ಸಿನ ಗೌಪ್ಯತೆಯೊಳಗೆ ಆಯ್ಕೆಯನ್ನು ಮಾಡಬೇಕಾದ ಅಸಂಖ್ಯಾತ ಇತರ ವಿಷಯವಾಗಿದೆ."* ಎಂದು ಅಭಿಪ್ರಾಯಪಟ್ಟಿದೆ.

2018 ರಲ್ಲಿ, ಶಫಿಯಾ ಜಹಾನ್ ವಿರುದ್ಧ ಅಶೋಕ್ ಎನ್.ಕೆ.ಎಂ, ಸರ್ವೋಚ್ಚ[33] ನ್ಯಾಯಾಲಯವು ನಂಬಿಕೆಯ ವಿಷಯಗಳನ್ನು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿಗೆ ನೈಜವಾಗಿಯೂ ಸಹ ಅಂಗಿಕರಿಸಿದೆ ಹಾಗೂ

> *"ಸಂವಿಧಾನವು ವ್ಯಕ್ತಿಗಳು ತಮ್ಮ ಸಂತೋಷದ ಅನುಸರಣೆಗೆ ಕೇಂದ್ರೀಯ ವಿಷಯಗಳ ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳುವುದನ್ನು ಖಾತರಿಪಡಿಸುತ್ತದೆ. ನಂಬಿಕೆ ಮತ್ತು ನಂಬಿಕೆಯ ವಿಷಯಗಳು, ನಂಬಬಹುದೇ ಅಥವಾ ಬೇಡವೇ ಎಂಬುದನ್ನು ಒಳಗೊಂಡಂತೆ, ಸಾಂವಿಧಾನಿಕ ಸ್ವಾತಂತ್ರ್ಯದ ತಿರುಳಿನಲ್ಲಿ ಒಳಗೊಂಡಿರುತ್ತದೆ"* ಎಂದು ಅಭಿಪ್ರಾಯಪಟ್ಟಿದೆ.

---

31 2013 (4) RCR 283 (Civil)

32 (2017) 10 SCC 1

33 (2018) 16 SCC 368

ಖಾಸಗಿತನವು ಸಾಂವಿಧಾನಿಕ ಹಕ್ಕಾಗಿ ಹೊರಹೊಮ್ಮುವ ಮತ್ತು ನಂಬಿಕೆಯ ಆಯ್ಕೆಯು ಸ್ವಾಯತ್ತತೆಯ ಹಕ್ಕಿನ ಅವಿಭಾಜ್ಯ ಆಯಾಮವಾಗಿದೆ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ, ಸ್ಟಾನಿಸ್ಲಾಸ್ ತೀರ್ಪಿನ ಅಡಿಯಲ್ಲಿ ಕಾರಣವನ್ನು ಪಲ್ಲಟಗೊಳಿಸಲಾಗಿದೆ. ಮತಾಂತರದ ವಿಷಯವು ವೈಯಕ್ತಿಕ ನಂಬಿಕೆ, ದೃಢವಿಶ್ವಾಸ ಮತ್ತು ಆತ್ಮಸಾಕ್ಷಿಯ ವಿಷಯವಾಗಿದೆ ಹಾಗೂ ಕಟ್ಟುನಿಟ್ಟಿನ ಷರತ್ತುಗಳು ಮತ್ತು ಮತಾಂತರಕ್ಕೆ ಒಳಗಾಗುವ ಅವಶ್ಯಕತೆಗಳನ್ನು ಹೇರುವುದು ಕೇವಲ 25ನೇ ಅನುಚ್ಛೇದದ ರಕ್ಷಣೆಯನ್ನು ನಗ್ನಗೊಳಿಸುತ್ತದೆ.

ಸಂವಿಧಾನದ ಕರಡು ರಚನೆಯಾದಾಗಿನಿಂದ 25 ನೇ ಅನುಚ್ಛೇದದ ಅಡಿಯಲ್ಲಿನ ವಿವಾದದ ಅಂಶವು ಪ್ರಚಾರದ ಹಕ್ಕಾಗಿತ್ತು. ಸಂವಿಧಾನ ಸಭೆಯಲ್ಲಿ ಅಂತಹ ಬಲವಾದ ಬೆಂಬಲವನ್ನು ಹೊಂದಿದ್ದ ಪ್ರಚಾರದ ಹಕ್ಕನ್ನು ಸ್ಟಾನಿಸ್ಲಾಸ್‌ನಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಹೊರಹಾಕಲಾಯಿತು. ಆದಾಗ್ಯೂ, ಪುಟ್ಟಸ್ವಾಮಿ ಮತ್ತು ಶಫಿಯಾ ಜಹಾನ್ ತೀರ್ಪುಗಳನ್ನು ಅನುಸರಿಸಿ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ನ್ಯಾಯಶಾಸ್ತ್ರದೊಂದಿಗೆ, ಸ್ಟಾನಿಸ್ಲಾಸ್ ನಲ್ಲಿನ ತಾರ್ಕಿಕತೆಯನ್ನು ಮರುಪರಿಶೀಲಿಸಬೇಕು, ಒಬ್ಬರ ಧರ್ಮವನ್ನು ಆಯ್ಕೆ ಮಾಡುವ ಹಕ್ಕು, ಸ್ವಾಯತ್ತತೆ ಮತ್ತು ಘನತೆಯ ಹಕ್ಕಿನ ಮೂಲಭೂತ ಭಾಗವಾಗಿದ್ದು, ಅದನ್ನು ಸಂವಿಧಾನಾತ್ಮಕವಾಗಿ ಗುರುತಿಸತಕ್ಕದ್ದು.

ಉತ್ತರ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮ, 2021 ರ ಸಾಂವಿಧಾನಿಕತೆಯ ಸವಾಲು ಸರ್ವೋಚ್ಚ ನ್ಯಾಯಾಲಯದಲ್ಲಿ ಜನವರಿ 2021 ರಿಂದಲೂ ಇತ್ಯರ್ಥದಲ್ಲಿದೆ ಎಂಬುದನ್ನು ಗಮನಿಸಬೇಕಾದ ಅಂಶವಾಗಿದೆ[34]. ಗುಜರಾತ್ ಉಚ್ಚ ನ್ಯಾಯಾಲಯದಲ್ಲಿ 2003 ಮತ್ತು 2021 ರ ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮದ ಸವಾಲು ಹೆಚ್ಚಿನ ಭರವಸೆಯನ್ನು ಮೂಡಿಸಿತು.[35] ಗುಜರಾತ್ ಉಚ್ಚ ನ್ಯಾಯಾಲಯವು ನಂತರದ ಪ್ರಕರಣಗಳಾದ 3, 4, 4ಎ ನಿಂದ 4ಸಿ, 5, 6 ಮತ್ತು 6ಎ ಗೆ ತಡೆಯಾಜ್ಞೆ ನೀಡಿದೆ. ಈ ತಡೆಗೆ ಆದೇಶ ನೀಡುವಲ್ಲಿ, ಕಾನೂನು "ಒಬ್ಬ ವ್ಯಕ್ತಿಯ ಆಯ್ಕೆಯ ಹಕ್ಕನ್ನು ಒಳಗೊಂಡಂತೆ ವಿವಾಹದ ಜಟಿಲತೆಗಳೊಂದಿಗೆ ಮಧ್ಯಪ್ರವೇಶಿಸುತ್ತದೆ, ಆ ಮೂಲಕ ಭಾರತದ ಸಂವಿಧಾನದ 21 ನೇ ಅನುಚ್ಛೇದವನ್ನು ಉಲ್ಲಂಘಿಸುತ್ತದೆ" ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ".

ಆದಾಗ್ಯೂ, ಪ್ರಸ್ತುತ 25ನೇ ಅನುಚ್ಛೇದದ ಇತರ ಭಾಗಗಳು ಆಕ್ರಮಣಕ್ಕೆ ಒಳಗಾಗುತ್ತಿವೆ, ಎಂದರೆ, ಒಬ್ಬರ ಧರ್ಮವನ್ನು ಅಂಗೀಕರಿಸುವ ಹಕ್ಕು ಮತ್ತು ಆಚರಿಸುವ ಹಕ್ಕು. ಇದು 25ನೇ ಅನುಚ್ಛೇದದ ಅಡಿಯಲ್ಲಿ ಸಂರಕ್ಷಣೆಯ ಅವಿಭಾಜ್ಯ ಅಂಗವಾಗಿದೆ.

ಸಾಂವಿಧಾನಿಕ ಸಭೆಯಲ್ಲಿ, ಘನಶ್ಯಾಂ ಸಿಂಗ್ ಗುಪ್ತಾರವರು ನಂಬಿಕೆಯ ಸ್ಪಷ್ಟೋಕ್ತಿಯ ಅರ್ಥವನ್ನು  ವಿವರಿಸಿದರು. ಒಬ್ಬ ಮನುಷ್ಯನು ಧರ್ಮವನ್ನು ಹೊಂದಿದ್ದಲ್ಲಿ, ಅವನು ಇಸ್ಲಾಂ ಧರ್ಮ ಅಥವಾ ಹಿಂದೂ ಧರ್ಮ ಅಥವಾ ಬೌದ್ಧ ಧರ್ಮ ಅಥವಾ ಸಿಖ್ ಧರ್ಮ ಅಥವಾ ಇತರೆ ಧರ್ಮ ಇಷ್ಟಪಡುವ ಯಾವುದೇ ಧರ್ಮವನ್ನು ಪ್ರತಿಪಾದಿಸಲು ಸ್ವತಂತ್ರನಾಗಿರುತ್ತಾನೆ. ತದನಂತರ, ಅವನು ಆ ಧರ್ಮವನ್ನು ಪ್ರತಿಪಾದಿಸುತ್ತಾ, ಆ ಧರ್ಮದ ಆಜ್ಞೆಗಳನ್ನು ಆಚರಿಸಲು ಅವನು ಸ್ವತಂತ್ರನಾಗಿರುತ್ತಾನೆ. ಉದಾಹರಣೆಗೆ, ಇಸ್ಲಾಂ ಧರ್ಮ ನಮಾಝ್ ಮಾಡಬೇಕೆಂದು ಇಚ್ಛಿಸಿದ್ದಲ್ಲಿ, ಇಸ್ಲಾಂ ಧರ್ಮದವರು ಅದನ್ನು ಅಭ್ಯಾಸ ಮಾಡಲು ಮತ್ತು ಪ್ರಚಾರ ಮಾಡಲು ಸ್ವತಂತ್ರರಾಗಿರುತ್ತಾರೆ.

---

[34] WP(C) 428/2020

[35] Order dated 19.08.2021 in R/Special Civil Application No. 10304/2021.

ಸರ್ವೋಚ್ಚ ನ್ಯಾಯಾಲಯವು ರತೀಲಾಲ್ ಪಣಚಂದ್ ಗಾಂಧಿ ವಿರುದ್ಧ ಬಾಂಬೆ ರಾಜ್ಯ[36] ತೀರ್ಪಿನಲ್ಲಿ,-

> *"ಹೀಗಾಗಿ, ಈ ಅನುಚ್ಛೇದವನ್ನು ವಿಧಿಸುವ ನಿರ್ಬಂಧಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯಕ್ತಿಗೂ ನಮ್ಮ ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕುಗಳಿವೆ. ಕೇವಲ ಅವರ ತೀರ್ಪು ಅಥವಾ ಆತ್ಮಸಾಕ್ಷಿಯ ಮೂಲಕ ಅನುಮೋದಿಸಬಹುದಾದ ಧಾರ್ಮಿಕ ನಂಬಿಕೆಗಳು ಮನರಂಜನೆಗೆ ಮಾತ್ರವಾಗಿರುವುದಿಲ್ಲ. ಆದರೆ, ತನ್ನ ನಂಬಿಕೆ ಮತ್ತು ಆಲೋಚನೆಗಳನ್ನು, ತನ್ನ ಧರ್ಮವು ವಿಧಿಸಿರುವ ಅಥವಾ ಅನುಮೋದಿಸಿರುವಂಥ ಬಹಿರಂಗ ಕಾರ್ಯಗಳಲ್ಲಿ ಪ್ರದರ್ಶಿಸಲು ಮತ್ತು ಇತರರ ಸುಧಾರಣೆಗಾಗಿ ತನ್ನ ಧಾರ್ಮಿಕ ದೃಷ್ಟಿಕೋನಗಳನ್ನು ಪ್ರಚಾರ ಮಾಡಲು ಮಾತ್ರ"* ಎಂದು ಅಭಿಪ್ರಾಯಪಟ್ಟಿತು.

ಕ್ರೈಸ್ತ ಧರ್ಮದವರು ಚರ್ಚುಗಳಲ್ಲಿ ಅಥವಾ ತಮ್ಮ ಮನೆಗಳಲ್ಲಿ ಪ್ರಾರ್ಥಿಸುವಾಗ ಅವರು ತಮ್ಮ ನಂಬಿಕೆಯನ್ನು ಪ್ರತಿಪಾದಿಸುವ ಮತ್ತು ಹಕ್ಕನ್ನು ಚಲಾಯಿಸುವುದಕ್ಕಿಂತ ಹೆಚ್ಚಿಗೆ ಏನೂ ಮಾಡುತ್ತಿಲ್ಲ. ಬಲಪಂಥೀಯ ಅಂಶಗಳ ಈ ದಾಳಿಯು ನಂಬಿಕೆಯನ್ನು ಪ್ರತಿಪಾದಿಸುವ ಮತ್ತು ನಂಬಿಕೆಯನ್ನು ಆಚರಿಸುವ, ನಂಬಿಕೆಯನ್ನು ಪ್ರಚಾರ ಮಾಡುವ ಹಕ್ಕಿನ ಮೇಲಿನ ದಾಳಿಯೇ ಹೊರತು ಬೇರೇನೂ ಅಲ್ಲ. ಇಂಥ ದ್ವೇಷದ ಅಪರಾಧಗಳು ಮುಂದುವರಿಯಲು ಅವಕಾಶ ಕಲ್ಪಿಸಿದ್ದಲ್ಲಿ, 25ನೇ ಅನುಚ್ಛೇದವು ಹೆಸರಿಗೆ ಮಾತ್ರ ಎಂಬಂತಾಗುತ್ತದೆ.

[36] 1954 AIR 388

## ಅಧ್ಯಾಯ ೩: 'ಧರ್ಮದ ಸ್ವಾತಂತ್ರ್ಯ' ಕಾನೂನುಗಳ ವ್ಯಂಗ್ಯ

ಸಾಂವಿಧಾನಿಕ ಭದ್ರತೆಗಳ ಹೊರತಾಗಿಯೂ, ಇತರ ಒಂಬತ್ತು ರಾಜ್ಯಗಳಲ್ಲಿ 'ಧರ್ಮದ ಸ್ವಾತಂತ್ರ್ಯ ಕಾನೂನು'ಗಳನ್ನು ನಂಬಿಕೆಯ ಆಚರಣೆಯನ್ನು ಅಪರಾಧೀಕರಿಸಲು ಬಳಸಲಾಗುತ್ತದೆ. ಈ ಕಾರಣಕ್ಕಾಗಿಯೇ ಕರ್ನಾಟಕದ ಜನರು ಇದನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ಅಂತಹ ಅಪರಾಧೀಕರಣವು ಸಂಭವಿಸುವುದಕ್ಕೆ ಈ ರಾಜ್ಯದ ಕಾನೂನುಗಳು ಹೇಗೆ ಅವಕಾಶ ನೀಡುತ್ತವೆ? ಈ ಕಾನೂನುಗಳ ಶಾಸನಬದ್ಧ ಇತಿಹಾಸದ ಮೂಲಕ, ನಾವು ವ್ಯಂಗ್ಯವನ್ನು ಬಿಚ್ಚಿಡುತ್ತೇವೆ.

"ಧರ್ಮದ ಸ್ವಾತಂತ್ರ್ಯ" ಅಧಿನಿಯಮಗಳು ಎಂದು ವ್ಯಂಗ್ಯವಾಗಿ ಹೆಸರಿಸುವಾಗ ಕಾನೂನು ಧಾರ್ಮಿಕ ಸ್ವಾತಂತ್ರ್ಯವು ದಬ್ಬಾಳಿಕೆಯ ಸಾಧನವಾಗಿರುವುದು ಹೊಸತೇನಲ್ಲ. ಈ ವಿದ್ಯಮಾನವು 1960 ರ ದಶಕದ ಉತ್ತರಾರ್ಧದಲ್ಲಿ ಒಡಿಶಾ ರಾಜ್ಯವು ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಿತ್ತುಹಾಕುವ ಪ್ರಯತ್ನವನ್ನು ಮುನ್ನಡೆಸುವುದರೊಂದಿಗೆ ಪ್ರಾರಂಭವಾಯಿತು. ಐದು ದಶಕಗಳ ನಂತರ, ಸಂವಿಧಾನದ 25 ನೇ ಅನುಚ್ಛೇದದ ಅಡಿಯಲ್ಲಿ, ಆತ್ಮಸಾಕ್ಷಿಯ ಸ್ವಾತಂತ್ರ್ಯ - ಧರ್ಮವನ್ನು ಆಚರಿಸುವುದು, ಶ್ರದ್ಧೆ ಹೊಂದುವುದು ಮತ್ತು ಪ್ರಚಾರ ಮಾಡುವುದು ಎಲ್ಲಾ ನಾಗರಿಕರ ಮೂಲಭೂತ ಹಕ್ಕು ಎಂದು ಪುನರುಚ್ಚರಿಸುತ್ತದೆ.

ಪ್ರಸಕ್ತವಾಗಿ, ಉತ್ತರಾಖಂಡ, ಹಿಮಾಚಲ ಪ್ರದೇಶ, ಅರುಣಾಚಲ ಪ್ರದೇಶ, ಉತ್ತರಪ್ರದೇಶ, ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್, ಮಧ್ಯಪ್ರದೇಶ ಮತ್ತು ಗುಜರಾತ್ 9 ರಾಜ್ಯಗಳಲ್ಲಿ "ಧಾರ್ಮಿಕ ಸ್ವಾತಂತ್ರ್ಯದ ಅಧಿನಿಯಮಗಳು/ಅಧ್ಯಾದೇಶಗಳು" ಕೆಲವು ಆಕಾರ ಮತ್ತು ರೂಪದಲ್ಲಿ ಅಸ್ತಿತ್ವದಲ್ಲಿವೆ.

1967 ರಲ್ಲಿ, ಒಡಿಶಾ, ರಾಜ್ಯವು ಧಾರ್ಮಿಕ ಸ್ವಾತಂತ್ರ್ಯದ ಅಧಿನಿಯಮ, ಧಾರ್ಮಿಕ ಸ್ವಾತಂತ್ರ್ಯದ ಅಧಿನಿಯಮ[37] ಎಂಬ ಶೀರ್ಷಿಕೆಯ ಮೊದಲ ಅಧಿನಿಯಮವನ್ನು ಅಂಗೀಕರಿಸಿದಾಗ, ಬಲ/ಪ್ರಚೋದನೆ ಮತ್ತು ಮೋಸದ ವಿಧಾನಗಳ ಮೂಲಕ ಮತಾಂತರ/ಮತಾಂತರಕ್ಕೆ ಪ್ರಚೋದಿಸುವುದು/ಮತಾಂತರಕ್ಕೆ ಪ್ರಚೋದನೆ ನೀಡುವುದನ್ನು ಅದು ನಿಷೇಧಿಸಿತು. ಇದಕ್ಕೆ 5,000 ವರೆಗೆ ದಂಡ ಮತ್ತು ಒಂದು ವರ್ಷದವರೆಗೆ ಕಾರಾಗೃಹ ವಾಸ ವಿಧಿಸಲಾಗುತ್ತದೆ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಮಹಿಳೆಯರು, ಅಪ್ರಾಪ್ತ ವಯಸ್ಕರು ವಿಶೇಷವಾಗಿ ಪ್ರರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮುದಾಯದವರ ಮತಾಂತರ, ಮತಾಂತರಕ್ಕೆ ಪ್ರಚೋದನೆ ನೀಡುವ ಯಾವುದೇ ಪ್ರಯತ್ನಕ್ಕೆ 2 ವರ್ಷಗಳವರೆಗೆ ಕಾರಾಗೃಹ ವಾಸ ಮತ್ತು ರೂ 10,000/ ವರೆಗೆ ದಂಡ ವಿಧಿಸಲಾಗುತ್ತದೆ.

ಒಂದು ವರ್ಷದ ನಂತರ, 1968 ರಲ್ಲಿ ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢ ಎರಡರಲ್ಲೂ ಇದೇ ರೀತಿಯ ಅಧಿನಿಯಮಗಳನ್ನು ಅಂಗೀಕರಿಸಲಾಯಿತು. ಮಧ್ಯಪ್ರದೇಶ ಧರ್ಮ ಸ್ವಾತಂತ್ರ್ಯ ಅಧಿನಿಯಮ, 1968[38] ಮತ್ತು ಛತ್ತೀಸ್‌ಗಢ ಧಾರ್ಮಿಕ ಸ್ವಾತಂತ್ರ್ಯ

---

[37] https://cjp.org.in/wp-content/uploads/2017/12/ORISSA-FREEDOM-OF-RELIGION-ACT-1967.pdf

[38] https://cjp.org.in/wp-content/uploads/2017/12/MADHYA-PRADESH-DHARMA-SWATANTRYA-ADHINIYAM-1968.pdf

ಅಧಿನಿಯಮ, 1968ವು[39] "ಮತಾಂತರಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸೂಚನೆ ನೀಡಬೇಕು"[40]. ಎಂಬುದನ್ನು ಅಗತ್ಯಪಡಿಸುವಂಥ ಒಂದು ಉಪಬಂಧವನ್ನು ಹೊರತುಪಡಿಸಿ, ಒರಿಸ್ಸಾ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮವನ್ನು ಹೋಲುತ್ತವೆ.

ಒಂದು ದಶಕದ ನಂತರ, ಅರುಣಾಚಲ ಪ್ರದೇಶವು ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮವನ್ನು ಅಂಗೀಕರಿಸಿತು.[41] ಈ ಅಧಿನಿಯಮದ ಪ್ರಕಾರ, ಧಾರ್ಮಿಕ ನಂಬಿಕೆಯ ಪರಿಭಾಷೆಯು ಯಾವುದೇ ಸ್ಥಳೀಯ ನಂಬಿಕೆಯನ್ನು ಒಳಗೊಂಡಿರುತ್ತದೆ. ಸ್ಥಳೀಯ ನಂಬಿಕೆಯ ಪರಿಭಾಷೆಯು ಇತರ ಅಧಿನಿಯಮಗಳಿಗೆ ವ್ಯತಿರಿಕ್ತವಾಗಿ ಒಂದು ಅನನ್ಯ ಉಪಬಂಧವಾಗಿದೆ. ಸ್ಥಳೀಯ ನಂಬಿಕೆಯು, ಸ್ಥಳೀಯ ಸಮುದಾಯಗಳಿಗೆ ಸೇರಿದ ಜನರ ಸಂಸ್ಕಾರಗಳ ಆಚರಣೆ, ಪದ್ಧತಿಗಳು, ನಂಬಿಕೆಗಳನ್ನು ಒಳಗೊಂಡಿದೆ. ಬಲ/ಪ್ರಚೋದನೆ/ಯಾವುದೇ ಮೋಸದ ವಿಧಾನದ ಮೂಲಕ ನೇರವಾಗಿ ಅಥವಾ ಬೇರೆ ರೀತಿಯಲ್ಲಿ ಪರಿವರ್ತನೆ ಮತ್ತು ಮತಾಂತರಕ್ಕೆ ಪರಿವರ್ತಿಸುವ ಪ್ರಯತ್ನ ಮಾಡುವುದು/ ಪ್ರೇರೆಪಿಸುವುದನ್ನು  ನಿಷೇಧಿಸುತ್ತದೆ. ಇದು ಎರಡು ವರ್ಷಗಳವರೆಗೆ ಕಾರಾಗೃಹ ವಾಸ ಮತ್ತು ಹತ್ತು ಸಾವಿರದವರೆಗೆ ದಂಡವನ್ನು ವಿಧಿಸಲಾಗುತ್ತದೆ. ಈ ಅಧಿನಿಯಮವು ಜಿಲ್ಲಾಧಿಕಾರಿಗೆ ಮತಾಂತರದ ಸೂಚನೆಯನ್ನು ನೀಡಬೇಕಾಗಿದ್ದು, ನಂತರ ಇನ್‌ಸ್ಪೆಕ್ಟರ್ ಮತ್ತು ಅದಕ್ಕಿಂತ ಹೆಚ್ಚಿನ ದರ್ಜೆಯ ಪೊಲೀಸ್ ಅಧಿಕಾರಿಯಿಂದ ವಿಚಾರಣೆ ನಡೆಸಬಹುದೆಂದು ಅಗತ್ಯಪಡಿಸುತ್ತದೆ. ಸಾಕಷ್ಟು ಕಾರಣವಿಲ್ಲದೆ ಜಿಲ್ಲಾಧಿಕಾರಿಗೆ ತಿಳಿಸುವ ಈ ಪ್ರಕ್ರಿಯೆಯನ್ನು ಅನುಸರಿಸಲು ವಿಫಲವಾದರೆ, ಒಂದು ವರ್ಷದವರೆಗೆ ವಿಸ್ತರಿಸುವ ಕಾರಾಗೃಹ ವಾಸ ಮತ್ತು ಒಂದು ಸಾವಿರದವರೆಗೆ ದಂಡಕ್ಕೆ ಗುರಿಪಡಿಸುತ್ತದೆ.[42]

2003 ರಲ್ಲಿ, ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮವನ್ನು ಅಂಗೀಕರಿಸಲಾಯಿತು.[43] ಪ್ರಕರಣ 3 ರ ಅಡಿಯಲ್ಲಿ ಮತಾಂತರದ ಮೇಲಿನ ನಿಷೇಧವು ಛತ್ತೀಸ್‌ಗಢ, ಮಧ್ಯಪ್ರದೇಶ ಮತ್ತು ಒರಿಸ್ಸಾದಂತೆಯೇ ಇದ್ದಾಗ, ಮತಾಂತರಕ್ಕೆ ಪ್ರಯತ್ನಿಸುವುದು/ಮತಾಂತರಕ್ಕೆ ಪ್ರೇರೆಪಿಸುವುದು ಮತ್ತು ಧರ್ಮಪರಿವರ್ತನೆಗೆ ಪ್ರಚೋದನೆ ನೀಡುವುದಕ್ಕೆ ಶಿಕ್ಷೆಯು ಹೆಚ್ಚು. ಮೂರು ವರ್ಷಗಳವರೆಗೆ ಕಾರಾಗೃಹ ವಾಸವನ್ನು ವಿಸ್ತರಿಸಬಹುದು ಮತ್ತು ರೂ 50,000/- ದಂಡ ವಿಧಿಸಬಹುದು. ವಿಶೇಷವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಮಹಿಳೆ ಅಥವಾ ಅಪ್ರಾಪ್ತ ವಯಸ್ಕರ ಸಂದರ್ಭದಲ್ಲಿ, 4 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಲಕ್ಷದವರೆಗೆ ದಂಡ ವಿಧಿಸಬಹುದು. ಈ ಅಧಿನಿಯಮವು ಈಗ ನಿಗದಿತ ನಮೂನೆಯಲ್ಲಿ ಪರಿವರ್ತಿಸಲು ಜಿಲ್ಲಾ ಮ್ಯಾಜಿಸ್ಟ್ರೇಟ್‌ನಿಂದ ಪೂರ್ವಾನುಮತಿಯನ್ನು ವ್ಯಕ್ತವಾಗಿ ತೆಗೆದುಕೊಳ್ಳಲು ಮತಾಂತರಕ್ಕೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯ ಪ್ರಾಧಿಕಾರವನ್ನು ತಿಳಿಸುವ ಅಗತ್ಯವನ್ನು ಬದಲಾಯಿಸುತ್ತದೆ.[44]

---

[39] https://www.yumpu.com/en/document/view/37652925/chhattisgarh-freedom-of-religion-amendment-indian-christians

[40] Section 5 of the Madhya Pradesh Dharma Swatantrya Adhiniyam, 1968, Section 5 of the Chhattisgarh Freedom of Religion Act, 1968.

[41] https://cjp.org.in/wp-content/uploads/2017/12/Arunachal-Pradesh-Freedom-of-Religion-Act-1978-.pdf

[42] Section 5 of the Arunachal Pradesh Freedom of Religion Act, 1978.

[43] https://www.indiacode.nic.in/bitstream/123456789/4660/1/freedomofreligion.pdf

[44] Section 5 of the Gujarat Freedom of Religion Act, 2003.

೨೦೦೬ರ ಹಿಮಾಚಲ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮವು[45] ಮೋಸದ/ಬಲವಂತದ ಮತ್ತು ಪ್ರಚೋದನೆಯ ಮೂಲಕ ಮತಾಂತರ ಮಾಡುವುದರ ಮೇಲೆ ಅದೇ ನಿಷೇಧವನ್ನು ಹೊಂದಿದೆ ಮತ್ತು ಅಂತಹ ಮತಾಂತರಕ್ಕೆ ೨ ವರ್ಷಗಳವರೆಗೆ ಕಾರಾಗೃಹ ವಾಸ ಮತ್ತು ರೂ ೨೫,೦೦೦/- ವರೆಗೆ ದಂಡವನ್ನು ನಿಗದಿಪಡಿಸುತ್ತದೆ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಈ ಅಧಿನಿಯಮದ ಪ್ರಕರಣ ೩ ರ ಉಲ್ಲಂಘನೆಯಲ್ಲಿ ನಡೆಯುವ ಯಾವುದೇ ಪರಿವರ್ತನೆಯನ್ನು ಪರಿವರ್ತಿಸಲಾಗಿಲ್ಲ ಎಂದು ಭಾವಿಸತಕ್ಕದ್ದು ಎಂದು ಅದು ಹೇಳುತ್ತದೆ. ಇದು ೩೦ ದಿನಗಳ ಮುಂಚಿತವಾಗಿ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸಲ್ಲಿಸಬೇಕಾದ ಉದ್ದೇಶದ ಸೂಚನೆಯನ್ನು ಅಗತ್ಯಪಡಿಸುತ್ತದೆ, ಅದನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ವಿಚಾರಣೆ ಮಾಡಬಹುದು.

ಈ ಅಧಿನಿಯಮದ ನಂತರ ಒಂದು ದಶಕದವರೆಗೆ, ಇತರ ಯಾವುದೇ ರಾಜ್ಯಗಳು ಇದೇ ರೀತಿಯ ಕಾನೂನುಗಳನ್ನು ಕೈಗೊಳ್ಳದ ಕಾರಣ ಮೌನವಾಗಿತ್ತು ಮತ್ತು ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮಗಳೆಂದು ಕರೆಯಲ್ಪಡುವ ಇವುಗಳಿಗೆ ಯಾವುದೇ ತಿದ್ದುಪಡಿಗಳನ್ನು ಕೈಗೊಳ್ಳಲಾಗಿಲ್ಲ.

2014 ರಲ್ಲಿ ಭಾರತೀಯ ಜನತಾ ಪಕ್ಷವು ಅಧಿಕಾರಕ್ಕೆ ಬರುವುದರೊಂದಿಗೆ, ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮಗಳು, ತಿದ್ದುಪಡಿಗಳು, ಅಧ್ಯಾದೇಶಗಳು ಮತ್ತು ಹೊಸ ರಾಜ್ಯ ಶಾಸನಗಳ ಮೂಲಕ ಬದಲಾವಣೆಗಳನ್ನು ಕಾಣಲಾರಂಭಿಸಿದವು.

2017 ರಲ್ಲಿ, ಜಾರ್ಖಂಡ್ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮ ಅಂಗೀಕರಿಸಲಾಯಿತು,[46] ಇದು ಬಲವಂತದ ಮತಾಂತರವನ್ನು ನಿಷೇಧಿಸಿತು. ಇಲ್ಲಿಯವರೆಗೆ, ಬಲವಂತದ ಮತಾಂತರದ ಅಪರಾಧವನ್ನು ಸಂಜ್ಞೇಯ ಅಪರಾಧವೆಂದು ಗುರುತಿಸಲಾಗಿದೆ. ಆದಾಗ್ಯೂ, ಈ ಅಧಿನಿಯಮವನ್ನು ಹೆಚ್ಚುವರಿಯಾಗಿ ಬಲವಂತದ ಮತಾಂತರದ ಅಪರಾಧವಾಗಿ ಹಾಗೂ ಜಾಮೀನುರಹಿತವಾಗಿ ಗುರುತಿಸಲಾಗಿದೆ. ಇದು, ಮತಾಂತರಕ್ಕೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ನಿಂದ ಪೂರ್ವಾನುಮತಿಯನ್ನು ಅಗತ್ಯಪಡಿಸುತ್ತದೆ. ಸಾಕಷ್ಟು ಕಾರಣವಿಲ್ಲದೆ ಪೂರ್ವಾನುಮತಿಯ ಕಾರ್ಯವಿಧಾನವನ್ನು ಅನುಸರಿಸಲು ವಿಫಲವಾದರೆ, ಒಂದು ವರ್ಷದವರೆಗೆ ಜೈಲು ಶಿಕ್ಷೆ ಮತ್ತು ಒಂದು ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ.

ಒಂದು ವರ್ಷದ ನಂತರ, 2018 ರಲ್ಲಿ, ಉತ್ತರಾಖಂಡ್ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮವನ್ನು ಅಂಗೀಕರಿಸಲಾಯಿತು.[47] ಬಲವಂತ, ಮೋಸ, ಅನಗತ್ಯ ಪ್ರಭಾವ, ಬಲಾತ್ಕಾರ, ಆಮಿಷಗಳ ಮೂಲಕ ಮತಾಂತರದ ಮೇಲೆ ವಾಡಿಕೆಯಂತೆ ಕಂಡುಬರುವ ನಿಷೇಧದ ಹೊರತಾಗಿ ತಪ್ಪು ನಿರೂಪಣೆ ಮತ್ತು ವಿವಾಹದ ಮೂಲಕ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡುವುದನ್ನು ನಿಷೇಧಿಸಲು ಈ ಅಧಿನಿಯಮವು ಮೊದಲನೆಯದಾಗಿದೆ. ಈ ಅಧಿನಿಯಮವು "**ಸಂಸ್ಕಾರದ ಶುದ್ಧೀಕರಣ**" ಕುರಿತು ಪೂರ್ವ ವರದಿಗೆ ಸಂಬಂಧಿಸಿದಂತೆ ಮತಾಂತರದ ಮೊದಲು ಘೋಷಣೆಯ ಪರಿಕಲ್ಪನೆಯನ್ನು

---

[45] https://www.indiacode.nic.in/bitstream/123456789/5395/1/the_himachal_pradesh_freedom_of_religion_act%2C_2006.pdf

[46] https://www.indiacode.nic.in/bitstream/123456789/4743/1/657_2_2017.pdf

[47] https://prsindia.org/files/bills_acts/acts_states/uttarakhand/2018/Act%2028%20of%202018%20UKD.pdf

ಪರಿಚಯಿಸಿತು. "ಸಂಸ್ಕಾರದ ಶುದ್ಧೀಕರಣ" ಎನ್ನುವುದು ಯಾವುದೇ ಧರ್ಮದ ಪುರೋಹಿತರಿಂದ ವ್ಯಕ್ತಿಯನ್ನು ಪರಿವರ್ತಿಸಲು ನಡೆಸುವ ಧಾರ್ಮಿಕ ಆಚರಣೆಯಾಗಿದೆ.

ಇದಕ್ಕಾಗಿ ಒಬ್ಬ ವ್ಯಕ್ತಿ ಮತಾಂತರದ ಬಗ್ಗೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಒಂದು ತಿಂಗಳ ಮುಂಚಿತವಾಗಿ ನೋಟಿಸ್ ನೀಡಬೇಕಾಗುತ್ತದೆ. ಈ ಮಾಹಿತಿಯನ್ನು ಸ್ವೀಕರಿಸಿದ ನಂತರ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರು **"ಮತಾಂತರದ ನಿಜವಾದ ಆಶಯ, ಉದ್ದೇಶ ಮತ್ತು ಕಾರಣ"**ದ ಕುರಿತು ಪೊಲೀಸರ ಮೂಲಕ ವಿಚಾರಣೆ ನಡೆಸತಕ್ಕದ್ದು. ಮುಂಚಿತವಾಗಿ ನೀಡುವ ಸೂಚನೆ ಮತ್ತು ಘೋಷಣೆಗಾಗಿ ಈ ಪ್ರಕ್ರಿಯಾ ಅಗತ್ಯತೆಯನ್ನು ಅನುಸರಿಸಲು ವಿಫಲವಾದರೆ, ಪರಿವರ್ತನೆಯನ್ನು ಕಾನೂನುಬಾಹಿರ ಮತ್ತು ಅಕೃತಗೊಳಿಸಲಾಗುತ್ತದೆ.[48] ಒಂದು ಸಂಸ್ಥೆ/ಸಂಘವು ಬಲವಂತದ ಮತಾಂತರದ ಹಿಂದೆ ಇದ್ದಲ್ಲಿ, ಅವರ ನೋಂದಣಿಯನ್ನು ರದ್ದುಗೊಳಿಸಬಹುದು.[49] ಈ ಅಧಿನಿಯಮವನ್ನು ಉಲ್ಲಂಘಿಸುವ ಅಂತಹ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನು ದೇಶ ಅಥವಾ ವಿದೇಶದಲ್ಲಿ ಯಾವುದೇ ದೇಣಿಗೆ/ಕೊಡುಗೆಗಳನ್ನು ಸ್ವೀಕರಿಸುವುದರಿಂದ ನಿರ್ಬಂಧಿಸಲಾಗುತ್ತದೆ.[50] ಮತಾಂತರಗೊಂಡ/ಪರಿವರ್ತನೆಗೆ ಅನುಕೂಲ ಮಾಡಿದ ವ್ಯಕ್ತಿಯ ಮೇಲೆ ಸಾಕ್ಷ್ಯದ ಕೊರತೆಯನ್ನು ನೀಗಿಸುವುದರ ಮೂಲಕ ಕ್ರಿಮಿನಲ್ ನ್ಯಾಯವ್ಯವಸ್ಥೆಯ ಸಂದಿಗ್ಧ ತತ್ವವನ್ನು ಈ ಅಧಿನಿಯಮವು ವಿಪರ್ಯಾಯಗೊಳಿಸುತ್ತದೆ. ಇದರರ್ಥ ಮತಾಂತರಗೊಂಡ ವ್ಯಕ್ತಿಯು ತಪ್ಪು ನಿರೂಪಣೆ, ಬಲವಂತ, ಆಮಿಷ, ಮೋಸದ ವಿಧಾನಗಳು ಅಥವಾ ಮದುವೆಯ ಮೂಲಕ ಮತಾಂತರದ ಪರಿಣಾಮಕ್ಕೆ ಒಳಗಾಗಿರುವುದಿಲ್ಲ ಎಂದು ಸಾಬೀತುಪಡಿಸುವ ಹೊಣೆಗಾರಿಕೆಯನ್ನು ಹೊಂದಿದ್ದಾನೆ.[51] ಇದು, ಮತಾಂತರದ ಏಕೈಕ ಉದ್ದೇಶ ಮತ್ತು ವಿಪರ್ಯಾಯವಾಗಿ ನಿರ್ವಹಿಸುವ ಎಲ್ಲಾ ವಿವಾಹಗಳನ್ನು ಅಕೃತ ಮತ್ತು ಶೂನ್ಯ ಎಂದು ಘೋಷಿಸಬೇಕಾಗಿದೆ ಎಂದು ಹೇಳುತ್ತದೆ.[52]

ತಪ್ಪು ನಿರೂಪಣೆ ಮತ್ತು ವಿವಾಹದ ಮೂಲಕ ಮತಾಂತರದ ನಿಷೇಧವನ್ನು ವಿಸ್ತರಿಸಲು ಉತ್ತರಾಖಂಡ್ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮದ ಉಪಬಂಧಗಳನ್ನು ಪ್ರತಿರೂಪಿಸುವ ಮೂಲಕ 2006 ರ ಹಿಮಾಚಲ ಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಕಾಯಿದೆಯನ್ನು 2019 ರಲ್ಲಿ ತಿದ್ದುಪಡಿ ಮಾಡಲಾಯಿತು.[53] ಇದು ಪರಿವರ್ತನೆಯ ಮೊದಲು ಘೋಷಣೆಯ ಅಗತ್ಯತೆ ಮತ್ತು ಸಂಸ್ಕಾರದ ಶುದ್ಧೀಕರಣದ ಬಗ್ಗೆ ಪೂರ್ವವರದಿಯನ್ನು ಒಳಗೊಳ್ಳುತ್ತದೆ. ಉತ್ತರಾಖಂಡ ಅಧಿನಿಯಮದಂತೆಯೇ, ಹಿಮಾಚಲ ಪ್ರದೇಶ ಅಧಿನಿಯಮವು ಮತಾಂತರಗೊಂಡ ವ್ಯಕ್ತಿ ಅಥವಾ ಮತಾಂತರಕ್ಕೆ ಅನುಕೂಲ ಮಾಡಿದ ವ್ಯಕ್ತಿಯ ಮೇಲೆ ಸಾಕ್ಷ್ಯದ ಕೊರತೆಯನ್ನು ಆತನೆ ಸಾದರ ಪಡಿಸುವಂತೆ ಆದೇಶಿಸುತ್ತದೆ.

---

48 Section 8 of the Uttarakhand Freedom of Religion Act, 2018

49 Section 10 of the Uttarakhand Freedom of Religion Act, 2018

50 Section 11 of the Uttarakhand Freedom of Religion Act, 2018

51 Section 13 of the Uttarakhand Freedom of Religion Act, 2018

52 Section 6 of the Uttarakhand Freedom of Religion Act, 2018

53 https://himachal.nic.in/WriteReadData/l892s/10_l892s/THE%20HIMACHAL%20PRADESH%20FREEDOM%20OF%20RELIGION%20ACT%20%2013%20of%202019-95744581.pdf

2020 ರಲ್ಲಿ ಕೋವಿಡ್ - 19 ಪ್ರಕರಣಗಳು ಉತ್ತುಂಗದಲ್ಲಿದ್ದಾಗ, ಉತ್ತರ ಪ್ರದೇಶವು ಧರ್ಮದ ಕಾನೂನು ಬಾಹಿರ ಪರಿವರ್ತನೆಯ ಸುಗ್ರೀವಾಜ್ಞೆ (ಪ್ರತಿಷೇಧ ಅಧ್ಯಾದೇಶ) ಎಂಬ ಶೀರ್ಷಿಕೆಯುಳ್ಳ ಅಧ್ಯಾದೇಶವನ್ನು[54] ನವೆಂಬರ್ 2020ರಲ್ಲಿ ಪ್ರಕಟಿಸಿತು ಹಾಗೂ 2021ನೇ ಮಾರ್ಚ್ ನಲ್ಲಿ ಅಧಿನಿಯಮವಾಗಿ ವಿಧಾನಸಭೆಯಲಿ[55] ಜಾರಿಗೊಳಿಸಲಾಯಿತು. ಅಧಿನಿಯಮ ಮತ್ತು ಸುಗ್ರೀವಾಜ್ಞೆ (ಅಧ್ಯಾದೇಶಗಳು) ಅವುಗಳ ಉಪಬಂಧಗಳಲ್ಲಿ ಒಂದೇ ಆಗಿದ್ದವು. ಈ ಅಧಿನಿಯಮವು ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ತಪ್ಪು ನಿರೂಪಣೆ ಬಲವಂತ, ವಂಚನೆ, ಅನಗತ್ಯ ಪ್ರಭಾವ, ಬಲಾತ್ಕಾರ, ಆಮಿಷ ಅಥವಾ ಮದುವೆಯ ಮೂಲಕ ಮತಾಂತರಗೊಳ್ಳುವುದನ್ನು ಪ್ರತಿಷೇಧಿಸುತ್ತದೆ. ಮೇಲಿನ ಯಾವುದೇ ಪ್ರತಿಷೇಧಿತ ವಿಧಾನಗಳಲ್ಲಿ ಮತಾಂತರದ ಅಪರಾಧ ಮತ್ತು ಮತಾಂತರಕ್ಕೆ ಪ್ರಚೋದಿಸುವುದನ್ನು ಈ ಎರಡೂ ಸಂಜ್ಞೇಯ ಮತ್ತು ಜಾಮೀನು ರಹಿತ ಅಪರಾಧವಾಗಿದೆ ಎಂದು ಗುರುತಿಸಿದೆ. ಈ ಅಧಿನಿಯಮವು ಮತಾಂತರದ ಕಾನೂನು ಬಾಹಿರವಾದ ಏಕೈಕ ಉದ್ದೇಶಕ್ಕಾಗಿ ಮಾಡಿದ ಮದುವೆಗಳನ್ನು ಅನೂರ್ಜಿತ ಎಂದು ಘೋಷಿಸುತ್ತದೆ. ಮದುವೆ ಅಥವಾ ವಿಪರ್ಯಾಯದ ಏಕೈಕ ಉದ್ದೇಶಕ್ಕಾಗಿ ಮತಾಂತರ ನಡೆದಾಗ ಮದುವೆಗೂ ಮುನ್ನ ಹಾಗೂ ಆನಂತರದ ಮತಾಂತರವನ್ನು ಈ ಅಧಿನಿಯಮವು ಅಪರಾಧವೆಂದು ಸೂಚಿಸಿದೆ. ಮತಾಂತರ ಸಮಾರಂಭವನ್ನು ನಡೆಸುವವರು "ಧಾರ್ಮಿಕ ಮತಾಂತರ"ವನ್ನು ನಡೆಸುವುದಕ್ಕೂ ಮೂವತ್ತು ದಿನಗಳಿಗೂ ಮುನ್ನ ನೋಟಿಸಿನೊಂದಿಗೆ ಮತಾಂತರಕ್ಕೆ 60 ದಿನಗಳಿಗೂ ಮುನ್ನ ಜಿಲ್ಲಾ ಮ್ಯಾಜಿಸ್ಟ್ರೇಟರ್ ಮುಂದೆ ಬಂದು ಘೋಷಣೆಯನ್ನು ಸಲ್ಲಿಸುವ ಅಗತ್ಯವಿದೆ. ಜಿಲ್ಲಾ ಮ್ಯಾಜಿಸ್ಟ್ರೇಟರು ಮಾಹಿತಿಯನ್ನು ಸ್ವೀಕರಿಸಿದ ತರುವಾಯ, ಕಡ್ಡಾಯವಾಗಿ ನೋಟೀಸಿನ ಆ "ವಾಸ್ತವಿಕ ಆಶಯ, ಉದ್ದೇಶ ಮತ್ತು ಉದ್ದೇಶಿತ ಮತಾಂತರದ ಪರಿಣಾಮ"ದ ಕುರಿತು ಪೊಲೀಸರ ಮೂಲಕ ಮಾಹಿತಿ ಪಡೆಯತಕ್ಕದ್ದು.

ವಿಶಿಷ್ಟವಾಗಿ, ಈ ಅಧಿನಿಯಮವು ಮತಾಂತರಕ್ಕೂ ಮೊದಲು ಮತಾಂತರಗೊಂಡ 60 ದಿನಗಳ ಒಳಗಾಗಿ ಘೋಷಣೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಕಳುಹಿಸುವ ಅಗತ್ಯವಿದೆ. ಈ ಘೋಷಣೆಗೆ ಮತಾಂತರದ ಮೊದಲು ಮತ್ತು ಮತಾಂತರದ ನಂತರ ಪೋಷಕರ ವಿವರಗಳು, ವ್ಯಕ್ತಿಯ ವಿಳಾಸ, ಜಾತಿ ಮತ್ತು ಮತಾಂತರ ಸಮಾರಂಭವನ್ನು ನಿರ್ವಹಿಸಿದ ಪಾದ್ರಿಯ ವಿವರಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಅಗತ್ಯವಿದೆ. ಈ ಘೋಷಣೆಯನ್ನು ಸೂಚನಾ ಫಲಕದಲ್ಲಿ ಮತಾಂತರದ ಪ್ರಕ್ರಿಯೆಯಲ್ಲಿರುವ ವ್ಯಕ್ತಿಯ ವಿಳಾಸದೊಂದಿಗೆ ವಾಸ್ತವದಲ್ಲಿ, ಈ ಘೋಷಣೆಯನ್ನು ಹಿಂದುತ್ವ ಗುಂಪುಗಳು ತಮ್ಮ ಧರ್ಮವನ್ನು ಪರಿವರ್ತಿಸುವವರನ್ನು ವ್ಯವಸ್ಥಿತವಾಗಿ ಆಕ್ರಮಣ ಮಾಡಲು ಮಾಹಿತಿಯ ಸಾಧನವಾಗಿ ಬಳಸುತ್ತಿರುವುದನ್ನು ನಾವು ನೋಡುತ್ತೇವೆ. ಘೋಷಣೆಯನ್ನು ಸಲ್ಲಿಸಿದ 21 ದಿನಗಳ ನಂತರ, ಮತಾಂತರಗೊಂಡ ವ್ಯಕ್ತಿಯು ತನ್ನ ಗುರುತನ್ನು ಸ್ಥಾಪಿಸಲು ಮತ್ತು ಘೋಷಣೆಯ ವಿಷಯಗಳನ್ನು ದೃಢೀಕರಿಸಲು ಜಿಲ್ಲಾ ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗಬೇಕಾಗುತ್ತದೆ. ಉತ್ತರಾಖಂಡ್ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮದಂತೆಯೇ, ಅಧ್ಯಾದದೇಶವನ್ನು ಉಲ್ಲಂಘಿಸುವ ಸಂಸ್ಥೆಗಳು ಮತ್ತು ಸಂಘಗಳ ನೋಂದಣಿಯನ್ನು ರದ್ದುಗೊಳಿಸುತ್ತದೆ. ಅಂತಹ ಸಂಸ್ಥೆಗಳು ಮತ್ತು ಸಂಘಗಳಿಗೆ ನಿರ್ದಿಷ್ಟವಾಗಿ ಯಾವುದೇ ಹಣಕಾಸಿನ ಅನುದಾನ/ಸಹಾಯವನ್ನು ಒದಗಿಸುವುದರಿಂದ ರಾಜ್ಯವನ್ನು ನಿರ್ಬಂಧಿಸಲಾಗಿದೆ. ಮತಾಂತರಗೊಳ್ಳುವ

54 https://prsindia.org/files/bills_acts/bills_states/uttar-pradesh/2020/UP%20Prohibition%20of%20Unlawful%20Conversion%20of%20Religion%20Ordinance,%202020%20.pdf

55 https://prsindia.org/files/bills_acts/acts_states/uttar-pradesh/2021/Act%20No%203%20of%202021%20UP.pdf

ಆರೋಪಿಯ ಮೇಲೆ ಸಾಕ್ಷಿಯ ಹೊರೆ ಇರುತ್ತದೆ. 2016 ರ ನಂತರದ ಎಲ್ಲಾ "ಧರ್ಮದ ಸ್ವಾತಂತ್ರ್ಯ" ಕಾನೂನುಗಳಲ್ಲಿ ಪುರಾವೆಯ ಹೊರೆಯ ಈ ಹಿಮ್ಮುಖತೆಯು ನಿಯಮಿತ ಲಕ್ಷಣವಾಗಿ ಹೊರಹೊಮ್ಮುತ್ತದೆ.

ಮಧ್ಯಪ್ರದೇಶ, ಒಂದು ಸುಗ್ರೀವಾಜ್ಞೆ (ಅಧ್ಯಾದೇಶದ) ಮೂಲಕ[56] ತನ್ನ ಹಿಂದಿನ 1968 ರ ಅಧಿನಿಯಮವನ್ನು 2020 ರಲ್ಲಿ ರದ್ದುಗೊಳಿಸಿದೆ. ಈಗ ಅಧ್ಯಾದೇಶವು ತಪ್ಪು ನಿರೂಪಣೆ, ಬಲವಂತ, ವಂಚನೆ, ಆಮಿಷ, ಬೆದರಿಕೆ, ಬಲವಂತದಿಂದ ಅಥವಾ ಮದುವೆಯ ಮೂಲಕ ಮತಾಂತರಕ್ಕೆ/ಪ್ರಚೋದನೆಗೆ/ಸಂಚುಮಾಡುವುದನ್ನು ನಿರ್ಬಂಧಿಸುತ್ತದೆ. ಮತಾಂತರದ ಏಕೈಕ ಉದ್ದೇಶಕ್ಕಾಗಿ ಮತ್ತು ಪ್ರತಿಯಾಗಿ ಮಾಡಿದ ಮದುವೆಯನ್ನು ಶೂನ್ಯ ಮತ್ತು ಅನೂರ್ಜಿತವೆಂದು ಪರಿಗಣಿಸಲಾಗುತ್ತದೆ. ಅಧ್ಯಾದೇಶವು ಪ.ಜಾ/ಪ.ಪಂ ಸಮುದಾಯಕ್ಕೆ ಸೇರಿದ ಅಪ್ರಾಪ್ತ/ಮಹಿಳೆ/ವ್ಯಕ್ತಿಯ ಮತಾಂತರಕ್ಕೆ 10 ವರ್ಷಗಳವರೆಗೆ ಶಿಕ್ಷೆ ಮತ್ತು ರೂ 50,000/-ಗಳಷ್ಟು ಜುಲ್ಮಾನೆಯನ್ನು ವಿಧಿಸಿದೆ.

ಅಂತಿಮವಾಗಿ, ಇತ್ತೀಚಿನ ಗುಜರಾತ್ ಧರ್ಮದ ಸ್ವಾತಂತ್ರ್ಯ (ತಿದ್ದುಪಡಿ) ಅಧಿನಿಯಮವನ್ನು 2021[57] ರಲ್ಲಿ ಅಂಗೀಕರಿಸಲಾಯಿತು. ಈ ತಿದ್ದುಪಡಿಯು ಮದುವೆಗೆ ಮತ್ತು ವಿಪರ್ಯಾಯಕ್ಕಾಗಿ ಮತಾಂತರವನ್ನು ಒಳಗೊಂಡಂತೆ ಮತಾಂತರದ ಮೇಲಿನ ನಿಷೇಧವನ್ನು ವಿಸ್ತರಿಸುತ್ತದೆ ಮತ್ತು ಪ್ರತಿಯಾಗಿ ಅಂತಹ ವಿವಾಹಗಳನ್ನು ಅನೂರ್ಜಿತ ಎಂದು ಅದು ಘೋಷಿಸುತ್ತದೆ. ನಿರೀಕ್ಷಿತವಾಗಿ, ತಿದ್ದುಪಡಿಯು ವ್ಯಕ್ತಿಯನ್ನು ಪರಿವರ್ತಿಸುವ ಅಥವಾ ಸಹಾಯ ಮಾಡುವ/ಉತ್ತೇಜಿಸುವ/ಸಮಾಲೋಚನೆ/ಪರಿವರ್ತನೆಗೆ ಅನುಕೂಲವಾಗಿಸುವವರು ತಾವು ಹಾಗೆ ಮಾಡಿಲ್ಲವೆಂಬುದನ್ನು ಪುರಾವೆಯನ್ನು ಒದಗಿಸಬೇಕಾಗುತ್ತದೆ.

ಈ ಕಾನೂನುಗಳ ಹೆಸರಿನಲ್ಲಿ "ಧರ್ಮದ ಸ್ವಾತಂತ್ರ್ಯ" ಎಂಬ ವ್ಯಂಗ್ಯೋಕ್ತಿಯು ಸ್ಪಷ್ಟವಾಗುತ್ತಲೇ ಇದೆ. ಕಾರ್ಯಾಚರಣೆಯಲ್ಲಿ, ಈ ಕಾನೂನುಗಳು ಧರ್ಮದ ಸ್ವಾತಂತ್ರ್ಯವನ್ನು ಪ್ರಚಾರ ಮಾಡುವುದರಿಂದ ದೂರವಿದೆ ಆದರೆ ವಾಸ್ತವವಾಗಿ ಧರ್ಮದ ಸ್ವಾತಂತ್ರ್ಯದ ಮೇಲೆ ಪ್ರಭಾವ ಬೀರಲು ಬಳಸಲಾಗುತ್ತದೆ.

ಈ ಕಾನೂನುಗಳ ಮತ್ತೊಂದು ಪ್ರಯಾಸದಾಯಕ ಅಂಶವೆಂದರೆ ಮಹಿಳೆಯರು, ಅಪ್ರಾಪ್ತ ಮಕ್ಕಳು ಮತ್ತು ಪ.ಜಾ/ಪ.ಪಂ ಸಮುದಾಯದ ವ್ಯಕ್ತಿಗಳನ್ನು ಬಲವಂತವಾಗಿ ಮತಾಂತರ ಮಾಡಿಸಿದ್ದಲ್ಲಿ ಹೆಚ್ಚಿನ ಶಿಕ್ಷೆಗೆ ಗುರಿಯಾಗುತ್ತಾರೆ. ಮಹಿಳೆಯರು, ಅಪ್ರಾಪ್ತ ಮಕ್ಕಳು ಮತ್ತು ಪ.ಜಾ/ಪ.ಪಂ ಬಲವಂತದ ಮತಾಂತರವು ಈ ಎರಡು ಗುಂಪುಗಳ ನಡುವಿನ ಅರ್ಥಗರ್ಭಿತ ವ್ಯತ್ಯಾಸವೇನು ಎಂಬುದನ್ನು ವಿವರಿಸದೆ ಈ ಗುಂಪುಗಳಿಗೆ ಸೇರದ ವ್ಯಕ್ತಿಗಳಿಗಿಂತ ಕೆಟ್ಟದಾಗಿದೆ ಎಂದು ಕಾನೂನು ಸ್ವತಃ ಊಹಿಸುತ್ತದೆ. ಈ ತಥಾಕಥಿತ ಧರ್ಮದ ಸ್ವಾತಂತ್ರ್ಯ ಕಾನೂನುಗಳು ಸೂಚಿಸಿರುವ ಹೆಚ್ಚಿದ ಜೈಲುಶಿಕ್ಷೆ ಮತ್ತು ದಂಡದ ಅವಧಿಯು ಪ.ಜಾ/ಪ.ಪಂ ಸಮುದಾಯದ ಮಹಿಳೆಯರು ಮತ್ತು ವ್ಯಕ್ತಿಗಳ ಧರ್ಮವನ್ನು ಆಯ್ಕೆ ಮಾಡುವ ಕತೃತ್ವವನ್ನು ಶೈಶವೀಕರಿಸುವ ರೀತಿಯಲ್ಲಿ ಹೇಳಲಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

---

[56] https://prsindia.org/files/bills_acts/bills_states/madhya-pradesh/2021/MP%20Ordinance%20No.1%20of%202021.pdf

[57] https://www.theleaflet.in/wp-content/uploads/2021/08/2021-Amendment-Act-C.pdf

ಕಳೆದ ಐದು ದಶಕಗಳಲ್ಲಿ, ಕಾನೂನಿನ ಪಠ್ಯದಲ್ಲಿ ನಾಲ್ಕು ಪಲ್ಲಟಗಳಿವೆ, ಅದು ಈ ಧಾರ್ಮಿಕ ಸ್ವಾತಂತ್ರ್ಯದ ಕಾನೂನುಗಳನ್ನು ಮೊದಲಿಗಿಂತ ಹೆಚ್ಚು ಅಲ್ಪಸಂಖ್ಯಾತ ಧಾರ್ಮಿಕ ಸಮುದಾಯದ ಸದಸ್ಯರ ವಿರುದ್ಧ ಆಯುಧಗೊಳಿಸಲು ಅವಕಾಶ ನೀಡುತ್ತದೆ.

**ಮೊದಲನೆಯದಾಗಿ**, ಮತಾಂತರದ ನಿಷೇಧವು ಈಗ ಮದುವೆಗಾಗಿ ಮತ್ತು ವಿಪರ್ಯಾಯಕ್ಕಾಗಿ ಮತ್ತು ಕೇವಲ ಮತಾಂತರದ ಏಕೈಕ ಉದ್ದೇಶಗಳಿಗಾಗಿ ಮಾಡಿದ ಮದುವೆಗಳು ಅಥವಾ ಕೇವಲ ಮದುವೆಯ ಉದ್ದೇಶಗಳಿಗಾಗಿ ಮಾಡಿದ ಮತಾಂತರವನ್ನು ಶೂನ್ಯ ಅಥವಾ ಅಕೃತ ಎಂದು ಘೋಷಿಸುತ್ತದೆ. ಮದುವೆಗೆ ಪೂರಕವಾಗಿ ಪರಿವರ್ತನೆಯ ಮೇಲಿನ ಈ ಕಂಬಳಿ ಪಟ್ಟಿಯು ಸಾಂವಿಧಾನಿಕವಾಗಿ ಖಾತರಿಪಡಿಸುವ ಆಯ್ಕೆಮಾಡುವ ವ್ಯಕ್ತಿಯ ಅತ್ಯಂತ ಅಂತರ್ಗತ ಮತ್ತು ಮೂಲಭೂತ ಹಕ್ಕನ್ನು ದುರ್ಬಲಗೊಳಿಸುತ್ತದೆ.

**ಎರಡನೆಯದಾಗಿ,** ಇಂದು ಗಮನಿಸಬಹುದಾದ ಬದಲಾವಣೆಯು ಅಪರಾಧದ ಸ್ವರೂಪದಲ್ಲಿದೆ, ಅದು ಬಲವಂತದ ಮತಾಂತರವಾಗಿದೆ - ಸಂಜ್ಞೇಯ ಅಪರಾಧದಿಂದ, ಇಂದು ಅದು ಜಾಮೀನುರಹಿತ ಅಪರಾಧವಾಗಿದೆ. ಇದು ಆರೋಪಿಗಳಿಗೆ ಜಾಮೀನು ಪಡೆಯಲು ತುಂಬಾ ಕಷ್ಟಕರವಾಗಿಸುತ್ತದೆ, ವಿಶೇಷವಾಗಿ ಈ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮದ ಮೂಲಕ ಗುರಿಯಾಗಿರುವ ಹೆಚ್ಚಿನ ಸಂಖ್ಯೆಯ ಜನರು ಬಡತನದಲ್ಲಿರುವವರು ಮತ್ತು ಕಾನೂನು ಬೆಂಬಲವನ್ನು ಪಡೆಯಲು ಅಸಮರ್ಥರು ಎಂಬ ವಾಸ್ತವವನ್ನು ನೀಡಲಾಗಿದೆ.

**ಮೂರನೆಯದಾಗಿ,** ಅವನು/ಅವಳು/ಅವರು ವಂಚನೆ/ಬಲವಂತ/ತಪ್ಪು ನಿರೂಪಣೆ/ಬಲಾತ್ಕಾರ/ಆಮಿಷದಿಂದ ಅಥವಾ ಮದುವೆಗಾಗಿ ಮತಾಂತರವಾಗಲಿಲ್ಲ ಎಂಬುದಕ್ಕೆ ಮತಾಂತರಗೊಳ್ಳಲು ಯತ್ನಿಸಿದ/ಮತಾಂತರ/ಮತಾಂತರಕ್ಕೆ ಪ್ರಚೋದನೆ ನೀಡಿದ ವ್ಯಕ್ತಿಯ ಮೇಲೆ ಪುರಾವೆಯ ಹೊರೆಯನ್ನು ಕಡಿಮೆ ಮಾಡುವುದು. ಇದು ತಮ್ಮನ್ನು ನಿರಪರಾಧಿ ಎಂದು ಸಾಬೀತುಪಡಿಸಲು ಆರೋಪಿಗಳ ಮೇಲೆ ಅಸಮಂಜಸವಾದ ಹೊರೆಯನ್ನು ಹಾಕುತ್ತದೆ. ಅಪರಾಧಿಯನ್ನು ನಿರಪರಾಧಿ ವ್ಯಕ್ತಿ ಎಂದು ಸಾಬೀತಾಗುವವರೆಗೆ ಇದು ಕ್ರಿಮಿನಲ್ ಕಾನೂನಿನ ನಿರ್ಣಾಯಕ ಊಹೆಯನ್ನು ಕಡಿಮೆ ಮಾಡುತ್ತದೆ.

**ನಾಲ್ಕನೆಯದಾಗಿ,** ಮತಾಂತರಕ್ಕೆ ಸಂಬಂಧಿಸಿದಂತೆ ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸೂಚನೆಯನ್ನು ನೀಡುವ ಅಗತ್ಯವಾದ ಕಾನೂನಿನ ಈಗ ಪೂರ್ವಾನುಮತಿ/ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಪರಿವರ್ತನೆಯ ಘೋಷಣೆಯೊಂದಿಗೆ ಮುಂಚಿತವಾಗಿ ಮಾಡಬೇಕಾಗಿದೆ. ಇದು "ಮತಾಂತರ ನೈಜವಾದ ಕಾರಣ, ಉದ್ದೇಶ ಮತ್ತು ಪ್ರೇರಣೆಯನ್ನು" ವಿಚಾರಣೆ ಮಾಡಲು ಪೊಲೀಸರ ಮೂಲಕ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ಗೆ ಸೂಚಿಸುತ್ತದೆ. ಈ ಘೋಷಣೆಗಳ ಕಾರ್ಯವಿಧಾನದ ಸೂಕ್ಷ್ಮವ್ಯತ್ಯಾಸಗಳನ್ನು ಅನುಸರಿಸಲು  ವಿಫಲವಾದರೆ ಕ್ರಿಮಿನಲ್ ಕ್ರಮವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರ್ ಆರಂಭಿಸಬಹುದು. ಎಲ್ಲಾ ಮತಾಂತರಗಳನ್ನು ಕಾನೂನಿನ ಅಡಿಯಲ್ಲಿ ಮಾಡಲಾಗುತ್ತದೆ ಎಂಬುದನ್ನು ಅನುಮಾನದ ದೃಷ್ಟಿಯಲ್ಲಿ ಇದನ್ನು ನೋಡಲಾಗುತ್ತದೆ. ಈ ಅನುಮಾನವು ಮಾಧ್ಯಮದ ಪ್ರಸಾರಕ್ಕೆ ಅನುವಾದಿಸಿದೆ, ಮತಾಂತರವು ಅಂತರ್ಗತವಾಗಿ ತಪ್ಪು ಮತ್ತು ಕಾನೂನುಬಾಹಿರ ಎಂಬ ಸಾರ್ವಜನಿಕ ಗ್ರಹಿಕೆಯನ್ನು ರೂಪಿಸುತ್ತದೆ.

ಕಾನೂನಿನಲ್ಲಿ ಅಸ್ಪಷ್ಟತೆ ಮತ್ತು ಅನಿಯಂತ್ರಿತೆಯ ಸಂದಿಗ್ಧತೆಯನ್ನು ಕಾನೂನಿನ ಒಂದು ಆಮಿಷದ ಪರಿಕಲ್ಪನೆಯಾಗಿದೆ.ಆಮಿಷದ ವ್ಯಾಖ್ಯಾನವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು, ನಾವು ಉತ್ತರಪ್ರದೇಶದ ಧಾರ್ಮಿಕ ಸ್ವಾತಂತ್ರ್ಯ ಅಧಿನಿಯಮ, 2021 ನ್ನು ಒಂದು ಉದಾಹರಣೆಯನ್ನಾಗಿ ನೋಡಬಹುದು.

---

**2. ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-**

**ಎ) "ಆಮಿಷ" ಎಂದರೆ, ಮತ್ತು ಇದರಲ್ಲಿ**

- **ನಗದಾಗಲಿ ಅಥವಾ ವಸ್ತುರೂಪದಲ್ಲಾಗಲಿ ಯಾವುದೇ ಕಾಣಿಕೆ, ಲಂಚ, ಸುಲಭವಾಗಿ ಹಣ ಮಾಡುವುದು ಅಥವಾ ಅನುಕೂಲಕರವಾದ ಲಾಭದ ವಸ್ತು;**
- **ಯಾವುದೇ ಧಾರ್ಮಿಕ ಸಂಸ್ಥೆ ನಡೆಸುತ್ತಿರುವ ಪ್ರತಿಷ್ಠಿತ ಶಾಲೆಯಲ್ಲಿ ಉದ್ಯೋಗ, ಉಚಿತ ಶಿಕ್ಷಣ; ಅಥವಾ**
- **ಉತ್ತಮ ಜೀವನಶೈಲಿ, ದೈವಿಕ ಮುನಿಸು ಅಥವಾ ಅನ್ಯಥಾ ರೂಪದಲ್ಲಿನ ಯಾವುದೇ ಆಕರ್ಷಕ ಕೊಡುಗೆಗಳನ್ನು ಒಳಗೊಳ್ಳುತ್ತದೆ.**

ಆಮಿಷ ಕೇವಲ ಭೌತಿಕ ಪ್ರಯೋಜನಗಳನ್ನು ಒಳಗೊಳ್ಳುವುದು ಮಾತ್ರವಲ್ಲದೆ ಮಾನವರು ಅಂತರ್ಗತವಾಗಿ ತೃಪ್ತಿ, ಉತ್ತಮ ಜೀವನ ಶೈಲಿಯಂತಹ ಎಲ್ಲಾ ರೀತಿಯ ಅಮೂರ್ತ, ಅಳೆಯಲಾಗದ ಅಗತ್ಯಗಳನ್ನು ಒಳಗೊಂಡಿದೆ. ಕಾನೂನಿನ ವಿಶಾಲವ್ಯಾಪ್ತಿಯು ಯಾವುದನ್ನಾದರೂ "ಸಂತೋಷ" ಮತ್ತು "ಉತ್ತಮ ಜೀವನ ಶೈಲಿ" ಅಡಿಯಲ್ಲಿ ಸೇರಿಸಲು ಅನುಮತಿಸುತ್ತದೆ. ಆಗ ಎಲ್ಲವೂ ಅಕ್ರಮ ಮತಾಂತರವಾಗುತ್ತದೆ. ಸಂವಿಧಾನದ ಪ್ರಕಾರ ಉತ್ತಮ ಜೀವನಶೈಲಿ ಮತ್ತು ತೃಪ್ತಿಗಾಗಿ ಹಂಬಲಿಸುವುದು ಕಾನೂನು ಬಾಹಿರವಲ್ಲ ಎಂಬ ವಾದವು ಉಳಿದಿದೆ. ವಾಸ್ತವವಾಗಿ, ಸುಪ್ರೀಂಕೋರ್ಟಿನ ಮೂಲಕ ಆರೋಗ್ಯದ ಹಕ್ಕಿನ ತಿಳುವಳಿಕೆಯಲ್ಲಿ ಆಧ್ಯಾತ್ಮಿಕ ಅಗತ್ಯಗಳನ್ನು ಸೇರಿಸಲಾಗಿದೆ. ಪಂಜಾಬ್ ಮತ್ತು ಇತರೆ ರಾಜ್ಯದಲ್ಲಿ ಸುಪ್ರೀಂ ಕೋರ್ಟ್. ವಿರುದ್ಧ ರಾಮ್ ಲುಬಾಯ ಬಗ್ಗಾ ಮತ್ತು ಇತರರು[58] ಎತ್ತಿ ಹಿಡಿದಿರುವುದೆನೆಂದರೆ,

> *"ಬೇರೆ ರೀತಿಯಲ್ಲಿ ಹೇಳುವುದಾದರೆ, ಮನುಷ್ಯನ ಜೀವನವು ಅರ್ಥಪೂರ್ಣವಾಗಿರಬೇಕು, ಬದುಕಲು ಯೋಗ್ಯವಾಗಿರಬೇಕು. ಜೀವನದ ಮುಖ್ಯ ಭಾಗ ಮತ್ತು ವಸ್ತುವಾಗಿರಬೇಕು. ಇದು ಓರ್ವ ಉದ್ಯೋಗಿ ಅಥವಾ ಇತರೆ ಸೇರಿದಂತೆ ಜೀವನದ ಎಲ್ಲಾ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ. ಇತರೆ ಅಂದರೆ ಭೌತಿಕ, ಸಾಮಾಜಿಕ, ಆಧ್ಯಾತ್ಮಿಕ ಅಥವಾ ಯಾವುದೇ ಕಲ್ಪಿಸಬಹುದಾದ ಮಾನವ ಚಟುವಟಿಕೆಗಳು. ಈ ವೇಳೆ ಇವುಗಳನ್ನು ನಿರಾಕರಿಸಿದರೆ, ಎಲ್ಲವೂ ಕುಸಿಯುತ್ತವೆ ಎಂದು ಹೇಳಲಾಗುತ್ತದೆ."*

ಕರ್ನಾಟಕದಲ್ಲಿ ಪ್ರಸ್ತುತ ಸಂದರ್ಭದಲ್ಲಿ, ರಾಜ್ಯದ ಮುಖ್ಯಮಂತ್ರಿ[59] ಮತ್ತು ಗೃಹಸಚಿವರ[60] ಹಂತದಲ್ಲಿ ಮತಾಂತರ ವಿರೋಧಿ ವಿಧೇಯಕದ ಬಗ್ಗೆ ಪದೇಪದೇ ಸಾರ್ವಜನಿಕ ಹೇಳಿಕೆಗಳನ್ನು ನೀಡಿದ್ದಾರೆ. ಕರ್ನಾಟಕದಲ್ಲಿ ಮತಾಂತರ ವಿರೋಧಿ ವಿಧೇಯಕವು ಕಾನೂನು ಮತ್ತು ಮೂಲಭೂತ ಹಕ್ಕುಗಳ ಪರಮಾಧಿಕಾರವನ್ನು ನಂಬುವ ಎಲ್ಲರಿಗೂ ಗಂಭೀರ ಕಾಳಜಿಯ ವಿಷಯವಾಗಿದೆ. ಇದು, ೯ ರಾಜ್ಯಗಳಲ್ಲಿ ಈ ಧಾರ್ಮಿಕ ಸ್ವಾತಂತ್ರ್ಯದ ಕಾನೂನುಗಳು ಅವುಗಳ ತನ್ನ ಅಂತರ್ಗತ ಅಸ್ಪಷ್ಟತೆ

---

[58] MANU/SC/0156/1998

[59] https://timesofindia.indiatimes.com/city/bengaluru/we-plan-to-table-anti-conversion-bill-during-december-session-in-belagavi-karnataka-cm-basavaraj-bommai/articleshow/87597161.cms

[60] https://timesofindia.indiatimes.com/city/bengaluru/will-soon-bring-bill-against-forcible-conversions-karnataka-minister/articleshow/86415250.cms

ಮತ್ತು ಅನಿಯಂತ್ರಿತತೆಗಾಗಿ ತೀವ್ರವಾಗಿ ಟೀಕಿಸಲ್ಪಟ್ಟಿವೆ.[61] ಅವರು ನಿಖರವಾದ ಮತ್ತು ಅನಿಶ್ಚಿತ ಪರಿಭಾಷೆಯಿಂದ ಸವಾರಿ ಮಾಡುತ್ತಾರೆ. ಕರ್ನಾಟಕದ ಜನರಾಗಿ, ನಾವು ವಿವಿಧ ರಾಜ್ಯಗಳ ಈ ಕಾನೂನುಗಳ ಟೀಕೆಗಳಿಂದ ಕಲಿಯಬೇಕು ಮತ್ತು ಅದನ್ನು ನಿಸ್ಸಂದೇಶವಾಗಿ ವಿರೋಧಿಸಬೇಕು. ಈ ಕಾನೂನುಗಳು ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿಗೆ ಸವಾಲಾಗಿವೆ ಮತ್ತು ಕರ್ನಾಟಕದಲ್ಲಿ ಇಂತಹ ಆಯ್ಕೆ ವಿರೋಧಿ, ಜನವಿರೋಧಿ, ಕಾನೂನನ್ನು ನಾವು ಬಲವಾಗಿ ವಿರೋಧಿಸಬೇಕಾಗಿದೆ.

[61] Anti-Conversion Laws: Challenges to Secularism and Fundamental Rights, Economic Political Weekly, January 12 2008, South Asia Human Rights Documentation Centre

## ಅಧ್ಯಾಯ ೪ : ಮತಾಂತರದ ಕಟ್ಟುಕತೆಗಳನ್ನು ಮಾಧ್ಯಮದ ವರದಿಗಳನ್ನಾಧರಿಸಿ ಅರ್ಥೈಸಿಕೊಳ್ಳುವುದು

ಇವತ್ತಿನ ಪ್ರಪಂಚದಲ್ಲಿ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ ಮಾಧ್ಯಮಗಳ ಪಾತ್ರ ದೊಡ್ಡದು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಹಲವಾರು ವರ್ಷಗಳಿಂದ ಕನ್ನಡದ ಮಾಧ್ಯಮಗಳಿಗೆ ಬಹುಸಂಖ್ಯಾತರ ಪರವಾಗಿಯೇ ಇರುವುದೇ ಪತ್ರಿಕೋದ್ಯಮದ ನೀತಿಯಂತಾಗಿಬಿಟ್ಟಿದೆ.[62]

ಕ್ರೈಸ್ಥ ಧರ್ಮೀಯರ ಮೇಲೆ ಇಷ್ಟೆಲ್ಲಾ ಹಲ್ಲೆಗಳು ನಡೆದರೂ ಕನ್ನಡ ಮಾಧ್ಯಮಗಳು ಇದರ ಬಗ್ಗೆ ಚಕಾರವೆತ್ತಿಲ್ಲವೆಂದರೆ ಊಹಿಸಿಕೊಳ್ಳಿ. ಅದರ ಬದಲಿಗೆ ಕ್ರೈಸ್ತರು ಸಾಮೂಹಿಕ ಮತಾಂತರ ಮಾಡುತ್ತಿದ್ದಾರೆ ಎಂದು ಏಪ್ರಿಲ್ 1, 2021 ರಿಂದ ಕ್ರೈಸ್ತ ಸಮುದಾಯದ ವಿರುದ್ಧವೇ ಮುಗಿಬಿದ್ದಿದೆ. ಇಂಥಃ ಸುದ್ಧಿಗಳು ನೋಡುಗರಿಗೆ ಹೊಸದೇನೂ ಅಲ್ಲವಾದರೂ ಈ ಭಾರಿ ಕ್ರೈಸ್ತರ ಅಪರಾಧಗಳನ್ನು "ಬೆತ್ತಲು" ಮಾಡಿದುದಾಗಿ ವರದಿಗಳು ಹರಿದುಬಂದವು.

ಮಾಧ್ಯಮಗಳಲ್ಲಿ ಶಾಸಕ ಗೂಳಿಹಟ್ಟಿ ಶೇಖರ್ ಮತ್ತು ಆತನ ತಾಯಿ ಈ ವರದಿಗಳ ಮುಖ್ಯ ಪಾತ್ರಗಳಾದವು. "ಮತಾಂತರಗೊಳಿಸುವವರಿಗೆ ಗೂಳಿಹಟ್ಟಿ ಶೇಖರ್ ಸಹೋದರನ ಸಾವು ಕಾರಣವಾಯಿತು"!, "ಶೋಕದಲ್ಲಿ ಮುಳುಗಿದ್ದ ತಾಯಿಗೆ ಏಸು ಪರಿಚಯಿಸಿ ಮತಾಂತರಗೊಳಿಸಲಾಯಿತು"! "ಗೂಳಿ ಹಟ್ಟಿ ಶೇಖರ್ ಅವರ ತಾಯಿ ಮತಾಂತರಗೊಂಡಿದ್ದು ಏಕೆ ಮತ್ತು ಹೇಗೆ"! ಎಂಬಥಹ ಹೆಡ್ ಲೈನುಗಳೊಂದಿಗೆ ಸುದ್ಧಿಗಳು ಬಿತ್ತರಗೊಂಡವು. ಇದು ಮಾಧ್ಯಮಗಳಿಗೆ ಪರಂಪರಾಗಥವಾಗಿ ಬಂದಿರುವ ಪುರುಷ ಪ್ರಧಾನವಾದ ರೂಢಿಗತ ಧ್ವನಿಯನ್ನು ಬಿಂಬಿಸುತ್ತದೆ. ಅಂತೆಯೇ ಒಂದು ಹೆಣ್ಣು ತನ್ನ ಧರ್ಮವಾವುದೆಂದು ಆಯ್ಕೆ ಮಾಡಿಕೊಳ್ಳಬಲ್ಲ ಅರಿವುಳ್ಳವಳೇ ಎಂಬ ಪ್ರಶ್ನೆಯನ್ನೂ ಎತ್ತಿ ತೋರುತ್ತದೆ... ಆಕೆಯ ಮಗನೇ ತನ್ನ ತಾಯಿ ಯಾವ ಧರ್ಮದಲ್ಲಿರಬೇಕು ಏನನ್ನು ನಂಬಬೇಕು ಎಂಬುದನ್ನು ತೀರ್ಮಾನಿಸುತ್ತಾನೆ.

ಮಾಧ್ಯಮದ ವರದಿಗಳು ಭಾರತೀಯ ಅಲ್ಪಸಂಖ್ಯಾತರ ಮೇಲೆ ದುಷ್ಪರಿಣಾಮ ಬೀರುತ್ತಿವೆ. ಅಂತೆಯೇ ಅವರ ಹಕ್ಕುಗಳನ್ನು ಹತ್ತಿಕ್ಕುತ್ತಿವೆ. ಈ ಹಿಂದಿನ ವರದಿ ದ್ವೇಷಪೂರಿತ ಭಾಷಣಗಳ ವಿರುದ್ಧ ಆಂದೋಲನ (ದಿ ವೇಜಸ್ ಆಫ್ ಹೇಟ್ : ಜರ್ನಲಿಸಂ ಇನ್ ಡಾರ್ಕ್ ಟೈಮ್ಸ್ 2020) ದಲ್ಲಿ ದ್ವೇಷ ಅಪರಾಧಗಳಲ್ಲಿ ಮಾಧ್ಯಮದ ಮಾದರಿಗಳನ್ನು ಎತ್ತಿ ತೋರುತ್ತದೆ. ಈ ವರದಿಯು ಕನ್ನಡ ಮಾಧ್ಯಮಗಳು ಹೇಗೆ ಸಿಟಿಜ಼ನ್‌ಶಿಪ್ ಅಮೆಂಡ್ಮೆಂಟ್ ಆಕ್ಟ್ ಮತ್ತು ಕೋವಿಡ್–19 ಸಾಂಕ್ರಾಮಿಕವನ್ನು ನಿರ್ಧಿಷ್ಟ ಕೋಮಿನ ಮೇಲೆ ಆರೋಪ ಹೊರಿಸಿದವು ಎಂಬುದನ್ನೂ ಪರಿಶೀಲಿಸಿದೆ. ಈ ವರದಿಯು ಮಾನನಷ್ಟವೆನಿಸಿಕೊಳ್ಳುವ, ಪಿತೂರಿಯಿಂದ ಕೂಡಿದ ಕಥೆಗಳನ್ನು

[62] Wages of Hate: Journalism in Dark Times, https://hatespeechbeda.wordpress.com/2020/09/08/report-wages-of-hate-journalism-in-dark-times/

ಹರಿಬಿಡುವುದು, ಹಿಂದುತ್ವ ಗುಂಪುಗಳಿಗೆ ಹೆಚ್ಚಿನ ಸಮಯ ಕೊಡುವುದು, ವಸ್ತುನಿಷ್ಟತೆಯೇ ಇಲ್ಲದ ವರದಿಗಳನ್ನು ಬಿತ್ತರಿಸುವುದು, ಸುಳ್ಳು ಸುದ್ದಿಗಳು ಮತ್ತು ಅರ್ಧ ಸತ್ಯಗಳನ್ನೇ ಇಟ್ಟುಕೊಂಡು ತೀರ್ಪುಕೊಡುವುದರ ಜೊತೆಗೆ ಇಂಥ ವರದಿಗಾರಿಕೆಯಿಂದಾಗುವ ಅನಾಹುತಗಳು ಮತ್ತು ದುಷ್ಪರಿಣಾಮಗಳ ಬಗೆಗೆ ವಿಶ್ಲೇಷಿಸಿದೆ.

ಅಂತಹ ಮಾದರಿಗಳು ಮಾಧ್ಯಮಗಳಲ್ಲಿ ಬೇರೂರಿವೆ ಮತ್ತು ಹಾಗೆಯೇ ಕಾಣಿಸಿಕೊಳ್ಳತೊಡಗಿವೆ. ಕನ್ನಡ ಮಾಧ್ಯಮವಂತೂ ಮತಾಂತರವೆಂಬುದನ್ನು ಅತ್ಯಂತ ಸೂಕ್ಷ್ಮಗೊಳಿಸಿ ಕ್ರಸ್ತರನ್ನು ಸಿಎಎಗಳೇನೋ ಎಂಬಂತೆ ಚಿತ್ರಿಸುತ್ತವೆ. ಸಂವಿಧಾನದ ಪರಿಚ್ಛೇಧ 25 ರಲ್ಲಿ ಮತಾಂತರವೆಂಬುದು ಸಾಂವಿಧಾನಿಕ ಹಕ್ಕು ಎಂಬುದನ್ನು ಬಿಟ್ಟು ಬಲವಂತದ ಮತಾಂತರವೆಂಬ ಕಟ್ಟುಕಥೆಯನ್ನೇ ಹರಿಬಿಡುತ್ತವೆ.

ಧಾರ್ಮಿಕ ಸ್ವಾತಂತ್ರ್ಯದ ಬೆಗೆಗೆ ಹಾಗೂ ಕರ್ನಾಟಕದಲ್ಲಿ ಆಗುತ್ತಿರುವ ವಿಧ್ಯಮಾನಗಳ ಬಗ್ಗೆ ರಾಷ್ಟ್ರೀಯ ಮಾಧ್ಯಮಗಳಿಗೆ ಹೆಚ್ಚಿನ ಆಸಕ್ತಿ ಇಲ್ಲವಾಗಿದೆ. ಮೂಲಭೂತವಾಗಿ ಕನ್ನಡ ಮಾಧ್ಯಮಗಳಲ್ಲಿಯೇ ಸುದ್ದಿಗಳು ಪ್ರಕಟಗೊಳ್ಳುತ್ತಿವೆ ಮತ್ತು ಬಿತ್ತರಗೊಳ್ಳುತ್ತಿವೆ.

ಕನ್ನಡದ ಏಷಿಯಾನೆಟ್ ಸುವರ್ಣ ನ್ಯೂಸ್, ಪಬ್ಲಿಕ್ ಟಿವಿ, ಟಿವಿ 5 ಮುಂತಾದ ಟಿವಿಗಳಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರದ ಬಗ್ಗೆ ಪ್ರಸಾರಗೊಂಡ ಕಾರ್ಯಕ್ರಮಗಳ ವಿವರ ನೀಡಲಾಗಿದೆ.[63]

ಮಾಧ್ಯಮ ವರದಿಗಳು ವಾದಗಳಿಂದ ಕೂಡಿವೆ, ಹಾದಿ ತಪ್ಪಿಸುವ ವ್ಯಾಖ್ಯಾನಗಳಾಗಿವೆ, ಸುಳ್ಳು ಸುದ್ದಿಗಳಿಂದ ಕೂಡಿವೆ, ಏಕಪಕ್ಷೀಯವಾಗಿವೆ, ಹಿಂದುತ್ವದ ಪರ, ಕ್ರೈಸ್ತ ಧರ್ಮದ ವಿರುದ್ಧ ಇವೆ. ತುಂಬಾ ಸೂಕ್ಷ್ಮಮತಿಯಾಗಿವೆ. ಕೆಲವೊಮ್ಮೆ ಸ್ಟಿಂಗ್ (ತನಿಖಾ ವರದಿ)ಗಳಂತೆ ಬಿತ್ತರವಾಗಿವೆ, ಯಾರೋ ಸಂವಿಧಾನ ವಿರೋಧಿ ಚಟುವಟಿಕೆ ಮಾಡಿ ಸಿಕ್ಕಿಬಿದ್ದಹಾಗೆ ಬಿಂಬಿಸಲಾಗಿದೆ. ನಮ್ಮ ಎಲ್ಲಾ ಚಟುವಟಿಕೆಗಳು ಕಾನೂನಾತ್ಮಕವಾಗಿಯೇ ಇವೆ ಮತ್ತು ಅವು ಮೂಲಭೂತ ಹಕ್ಕುಗಳ ಪ್ರಕಟಣೆಯೂ ಹೌದು.

ಮುಖ್ಯವಾಹಿನಿಯ ಮಾಧ್ಯಮಗಳು ಸಾಮಾಜಿಕ ಜಾಲತಾಣಗಳೊಟ್ಟಿಗೆ ಬೆಸೆದು ಕೆಲಸ ಮಾಡುತ್ತವೆ. ಹಿಂದುತ್ವದ ಗುಂಪುಗಳು ವಾಟ್ಸಪ್ ಮತ್ತು ಫೇಸ್ ಬುಕ್ ನಲ್ಲಿ ಹರಿಬಿಡುವ ವಿಡಿಯೋಗಳನ್ನು ವೈರಲ್ ಯಾ ಟ್ರೆಂಡಿಂಗ್ ಎಂದು ಕರೆದು ಸಾಮಾಜಿಕ ಜಾಲತಾಣದ ಬಳಕೆದಾರರಿಗೆ ಇದೊಂದು ಬಹಳ ದೊಡ್ಡ ಚರ್ಚೆಯ ವಿಷಯವೇನೋ ಎಂಬಂತೆ ಬಿಂಬಿಸಲಾಗುತ್ತದೆ.

---

[63] https://www.youtube.com/watch?v=sjfrM2ofEas&t=155s,
https://www.youtube.com/watch?v=azLp4csiD7I&t=39s,
https://www.youtube.com/watch?v=w7DBczqz6bA, https://www.youtube.com/watch?v=i_x7Pzl-Y_Y,
https://youtu.be/5Exz01wGSCQ, https://youtu.be/k0GY3Kkj_h8, https://youtu.be/cAM1-CVg-rM,
https://youtu.be/Xd5AK3G_HTg.

ಕರ್ನಾಟಕದ ಕೆಲವು ಪ್ರಕರಣಗಳನ್ನು ದಾಖಲಿಸುವ ಓಪನ್ ಡೋರ್ಸ್ ಎಲ್ ಎಸ್ ಇ ಆನ್ ಪರ್ಸೆಕ್ಯೂಷನ್ ಆಫ್ ಕ್ರಿಶ್ಚಿಯನ್ಸ್ ಇನ್ ಇಂಡಿಯಾ (ಡಿಸ್ಟ್ರಕ್ಟೀವ್ ಲೈಸ್ ಜುಲೈ 2021) ವರದಿ ಹೇಳುವಂತೆ ಹಿಂದುತ್ವದ ಗುಂಪುಗಳು ಸಣ್ಣ ಸಣ್ಣ ಚರ್ಚ್ ಗಳ ಮೇಲೆ ದಾಳಿ ನಡೆಸುತ್ತವೆ, ಬಹಳಷ್ಟು ಬಾರಿ ಅವರು ಮಾಡುವ ಚಟುವಟಿಕೆಯನ್ನು ಚಿತ್ರೀಕರಿಸಿಕೊಳ್ಳಲಾಗುತ್ತದೆ ಅಂತೆಯೇ ಪಾದ್ರಿ ಮತ್ತು ಅನುಯಾಯಿಗಳು ಇವರ ದಾಳಿಗಳನ್ನು ಚಿತ್ರೀಕರಿಸುವುದನ್ನು ತಡೆಯಲು ಅವರ ಫೋನ್ ಗಳನ್ನು ಕಸಿಯುತ್ತಾರೆ.

ಈ ಏಕರೂಪದ ಮಾದರಿಗಳ ವಿಡಿಯೋ ತುಣುಕುಗಳು ಬಲವಂತದ ಮತಾಂತರವೆಂಬುದನ್ನೇ ಪದೇ ಪದೇ ಹೇಳುತ್ತವೆ. ಬಡ ಮತ್ತು ಹಿಂದುಳಿದ ಹಿಂದೂಗಳ ಬಗೆಗೆ ಈ ದಾಳಿಕೋರರು ತಮ್ಮ ಕಾಳಜಿ ವ್ಯಕ್ತಪಡಿಸುತ್ತಾರೆ. ಈ ರೀತಿಯ ದಾಳಿಗಳಲ್ಲಿ ತೊಡಗುವವರಿಗೆ ರಾಜಕೀಯ ಅವಕಾಶಗಳು ತೆರೆದುಕೊಳ್ಳುತ್ತವೆ. ಅಂತೆಯೇ ಯಾವುದೇ ಪ್ರತಿಪಲಾಪೇಕ್ಷೆ ಇಲ್ಲದೆ ಹಿಂದೂ ಸಮುದಾಯವನ್ನು ರಕ್ಷಿಸಲು ಹೋರಾಡುತ್ತಿರುವ ಹೋರಾಟಗಾರರಂತೆ ಅವರನ್ನು ಬಿಂಬಿಸಲಾಗುತ್ತದೆ. ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಬಿತ್ತರವಾಗುವ ಸುದ್ಧಿಗಳು ಇಂಥವರ ಪರವಾಗಿಯೇ ಸೂಕ್ಷ್ಮಗ್ರಾಹಿಯಾಗಿರುತ್ತವೆ. ಪೊಲೀಸ್ ಅಧಿಕಾರಿಗಳು, ಸ್ಥಳೀಯ ನ್ಯಾಯಾಲಯ ಮತ್ತು ಆಡಳಿತಾಧಿಕಾರಿಗಳು ಮತ್ತು ಮಾಧ್ಯಮ ವರದಿಗಳೆಲ್ಲಾ ಜೊತೆಜೊತೆಯಾಗಿಯೇ ಕೆಲಸಮಾಡುತ್ತವೆ. ಬಲವಂತದ ಮತಾಂತರದ ಬಗ್ಗೆ ಬಿತ್ತರಗೊಳ್ಳುವ ವರದಿಗಳು ಮತ್ತು ಗೂಳಿಹಟ್ಟಿ ಶೇಖರ್, ಗೃಹ ಸಚಿವ ಜ್ಞಾನೇಂದ್ರ ಮತ್ತು ಮುಖ್ಯಮಂತ್ರಿ ಎಸ್ ಆರ್ ಬೊಮ್ಮಾಯಿ ಇನ್ನಿತರರ ಕ್ರೈಸ್ತರ ವಿರುದ್ಧ ಆಡುವ ಮಾತುಗಳನ್ನು ಮಾಧ್ಯಮಗಳು ತಮ್ಮಿಷ್ಟದಂತೆ ಮೌಲ್ಯಮಾಪನ ಮಾಡುತ್ತವೆ.

ಕರ್ನಾಟಕದಲ್ಲಿ ಕ್ರಿಶ್ಚಿಯನ್ನರ ವಿರುದ್ಧ ನಡೆಯುತ್ತಿರುವ ದ್ವೇಷ ಅಪರಾಧಗಳು ಈ ಕೆಳಕಂಡ ಮಾದರಿಗಳಲ್ಲಿ ನಡೆಯುತ್ತವೆ.

1. ಅಪರಾಧವನ್ನು ಊಹಿಸುವುದು ಕ್ರಿಶ್ಚಿಯನ್ನರ ಪ್ರತಿದಿನದ ಧಾರ್ಮಿಕ ಚಟುವಟಿಕೆಗಳು ಅಶುಭ ಎಂಬಂತೆ ಕಾಣಿಸುತ್ತವೆ. ಕ್ರೈಸ್ತ ಧರ್ಮೀಯರ ವಿರುದ್ಧ ಬಳಸುವ ಭಾಷೆ ನಿಂದನಾತ್ಮಕವಾಗಿರುತ್ತದೆ. ಕ್ರೈಸ್ತರ ಯಾವುದೇ ಚಟುವಟಿಕೆ ಅನುಮಾನಾಸ್ಪದವಾಗಿ ಕಾಣುತ್ತದೆ. ಬಲವಂತದ ಮತದಾನ ವೆಂಬ ಕಟ್ಟುಕಥೆ ಬಹಳ ಚಾಲ್ತಿಯಲ್ಲಿರಿಸಲಾಗಿದೆಯಲ್ಲದೆ ನಿರಂತರವಾಗಿ ಬಿತ್ತಲಾಗುತ್ತಿದೆ. ಈ ಸುದ್ಧಿಗಳನ್ನು ಹರಿಬಿಡುವವರು ಮತಾಂತರಕ್ಕೆ ವಿದೇಶಿ ಹಣ ವಿನಿಯೋಗಿಸಲಾಗುತ್ತಿದೆಯೆಂದು ಯಾವುದೇ ಸಾಕ್ಷಿ ಪುರಾವೆ ಇಲ್ಲದೆ ಹೇಳುತ್ತಿದ್ದಾರೆ.

2. ವ್ಯಕ್ತಿಯ ಮೂಲಭೂತ ಹಕ್ಕಿನ ಬಗೆಗೆ ಚಕಾರವೆತ್ತದೇ ಇರುವುದು

ಒಬ್ಬ ವ್ಯಕ್ತಿಯು ತನ್ನಿಚ್ಛೆಯ ಧರ್ಮ ವನ್ನು ಆಚರಿಸುವುದು ಆತನ ಮೂಲಭೂತ ಹಕ್ಕು ಎಂದು ಮಾಧ್ಯಮಗಳು ಹೇಳುವುದೇ ಇಲ್ಲ. ಮತಾಂತರ ಮಾಡಲು ಹಕ್ಕಿಲ್ಲವೆಂದು ಹೇಳುತ್ತಲೇ ಆ ಹಕ್ಕನ್ನು ಮೊಟಕುಗೊಳಿಸಲು ಸಾಧ್ಯವೇ.

3. ಜಾಗರೂಕದಳದ ದಾಳಿಗಳನ್ನು ಸಹಿಸುವುದು ಮತ್ತು ಕಾನೂನು ಮರೆಯಾಗಿರುವುದು

ಧಾರ್ಮಿಕ ಆಚರಣೆಗಳ ಮೇಲೆ ಕಾನೂನುಬಾಹಿರವಾಗಿ ದಾಳಿ ಮಾಡಿ ತೊಡಕುಂಟುಮಾಡುವುದು ಪ್ರಶ್ನಾತೀತವಾಗಿ ಜಾರಿಯಲ್ಲಿದೆ. ಹಲ್ಲೆ, ದಾಳಿಗಳು ಮಾಧ್ಯಮಗಳಿಗೆ ಒಪ್ಪಿತವಾಗಿವೆ. ಕ್ರೈಸ್ತರ ವಿರುದ್ಧ ದಾಳಿ ಮಾಡುತ್ತಿರುವ ಹಿಂದುತ್ವದ ಗುಂಪುಗಳ ಸದಸ್ಯರನ್ನು ಹೋರಾಟಗಾರರೆಂದು ಮಾಧ್ಯಮಗಳು ಬಿಂಬಿಸುತ್ತಿವೆ. ಈ ಗುಂಪುಗಳು ಯಾವ ಸಂವಿಧಾನಕ್ಕಾಗಿ ಹೋರಾಡುತ್ತಿದ್ದಾರೋ ಅದೇ ಕಾರಣಕ್ಕೆ ಅವರನ್ನು ಒಪ್ಪಲಾಗಿದೆ. ವಾಸ್ತವವಾಗಿ ಅವರೆಲ್ಲಾ ಸಾಂವಿಧಾನಿಕ ಮೌಲ್ಯಗಳ ವಿರುದ್ಧ ಮತ್ತು ಕಾನೂನನ್ನು ಕೈಗೆತ್ತಿಕೊಳ್ಳುವವರೇ ಆಗಿದ್ದಾರೆ.

4. ದ್ವೇಶದ ಭಾಷಣ

ಟಿವಿ ಮಾಧ್ಯಮಗಳಲ್ಲಿ ಬಳಸುವ "ಮತಾಂತರ ಮಾಫಿಯಾ" ಮತ್ತು "ಆಮಿಷ" ವೆಂಬ ಪದಗಳು "ಬ್ರೈನ್ ವಾಷ್" ಪದ ಬಳಸಿದಾಗ ಸತ್ಯವೆಂಬಂತೆ ಕಾಣುತ್ತವೆ. ಇಂಥ ಹೆಚ್ಚಿನ ವರದಿಗಳು ದಲಿತ ಕ್ರಿಶ್ಚಿಯನ್ನರ ವಿರುದ್ಧವೇ ಆಗಿರುತ್ತವೆ. ಇಂಥ ದ್ವೇಷದ ಸುದ್ದಿಗಳು ಮಾಧ್ಯಮಗಳಲ್ಲಿ ಕೇಂದ್ರೀಕೃತವಾಗಿರುವ ಜಾತಿ ವ್ಯವಸ್ಥೆಯನ್ನು ಎತ್ತಿ ತೋರುತ್ತದೆ.[64]

5. ಏಕಪಕ್ಷೀಯ ವರದಿಗಾರಿಕೆ ಮತ್ತು ಸುದ್ದಿಯನ್ನು ಹೆಚ್ಚು ಸೂಕ್ಷ್ಮವಾಗಿಸುವುದು

ಹಿಂದೂ ಮಠಗಳು ನೀಡುವ ಹೇಳಿಕೆಗಳನ್ನು ಕ್ರೈಸ್ತ ಚರ್ಚುಗಳು, ಕ್ರೈಸ್ತರ ಪ್ರತಿನಿಧಿಗಳ ಹೇಳಿಕೆಗಳನ್ನು ಪಡೆಯದೆ ಮಾಧ್ಯಮದ ವಿವೇಚನೆಯನ್ನೂ ಬಳಸದೆ ಯತಾವತ್ ಬಿತ್ತರಗೊಳಿಸಲಾಗುತ್ತದೆ. ಮಾಧ್ಯಮ ಪ್ರತಿನಿಧಿಗಳು ಹಿಂದುತ್ವ ಸಂಘಟನೆಗಳಿಗೆ ಕ್ರೈಸ್ತರು ತಮ್ಮ ಧರ್ಮಪ್ರಚಾರವನ್ನು ಮೊಟಕೊಳಿಸಲು ಸಲಹೆ ನೀಡುತ್ತಾರೆ. ಮತ್ತೊಬ್ಬರು ರಾಷ್ಟ್ರೀಯ ಸ್ವಯಂಸೇವಕ ಸಂಘದ ವಕ್ತಾರರಿಗೆ ಕ್ರೈಸ್ತ ಮಷಿನರಿಗಳಿಗನ್ನು ಹೇಗೆ ಹತ್ತಿಕ್ಕಬೇಕೆಂದು ಸಲಹೆ ನೀಡುತ್ತಾರೆ. ಬಲಾತ್ಕಾರದ ಆರೋಪ, ಹಿಂಸೆ ಎಲ್ಲವೂ ಸಾಕ್ಷಿ ಇಲ್ಲದ ಪ್ರಚಾರ ಪಡೆದುಕೊಳ್ಳುತ್ತವೆ.

6. ಕಾನೂನು ಬಾಹಿರ ಮತ್ತು ಕಾನೂನು ಮಿತಿಯ ಮತಾಂತರದ ನಡುವಿನ ಎಲ್ಲಾ ಅಂಶಗಳನ್ನು ಮರೆಮಾಚಲಾಗುತ್ತಿದೆ.

ಕನ್ನಡ ಮಾಧ್ಯಮದ ಪ್ರಕಾರ ಎಲ್ಲಾ ಮತಾಂತರವೂ ಕಾನೂನು ಬಾಹಿರ. ವ್ಯಕ್ತಿಯ ಧಾರ್ಮಿಕ ನಂಬಿಕೆ, ಲೈಂಗಿಕ ಆಯ್ಕೆ ಮುಂತಾದ ಖಾಸಗಿ ಆಯ್ಕೆಗಳು ಸಂವಿಧಾನಿಕವಾಗಿ ಪ್ರದತ್ತವಾಗಿರುವ ಮೂಲಭೂತ ಹಕ್ಕು ಎಂಬುದನ್ನು ಮಾಧ್ಯಮಗಳು ಎಲ್ಲಿಯೂ ಬಿಂಬಿಸುವುದಿಲ್ಲ.

---

[64] Wages of Hate: Journalism in Dark Times, https://hatespeechbeda.wordpress.com/2020/09/08/report-wages-of-hate-journalism-in-dark-times/

7. ತನಿಖಾ ಪತ್ರಿಕೋದ್ಯಮವೆಂಬ ಮಾಫಿಯ

ತನಿಖಾ ಪತ್ರಿಕೋದ್ಯಮದ ಹೆಸರಿನಲ್ಲಿ ಮಾಧ್ಯಮಗಳು ಪ್ರಾರ್ಥನಾ ಸ್ಥಳಗಳಿಗೆ ನುಗ್ಗಿ ಪ್ರಾರ್ಥನೆಯಲ್ಲಿ ತೊಡಗಿರುವ ಕ್ರೈಸ್ತರನ್ನು ಅಪರಾಧಿಗಳೆಂಬಂತೆ ಬಿಂಬಿಸುತ್ತಾರೆ. ಇವರು ಬಿತ್ತರಿಸುವ ವಿಡಿಯೋಗಳು ನಾಲ್ಕು ವಿಧಗಳಿವೆ

- ಕ್ರೈಸ್ತ ಧರ್ಮಕ್ಕೆ ಸಂಬಂಧವೇ ಇಲ್ಲದೆ ರಸ್ತೆಯಲ್ಲಿ ನಡೆದಾಡುತ್ತಿರುವ ಜನಸ್ತೋಮ
- ಪ್ರಾರ್ಥನಾ ಸ್ಥಳದಲ್ಲಿರುವ ಜನ
- ಯಾವುದೇ ಧ್ವನಿ ಇಲ್ಲದ ಸಣ್ಣ ಪ್ರಾರ್ಥನಾ ಸಭೆಯ ವಿಡಿಯೋ. ಅಲ್ಲಿ ಪಾದ್ರಿಯೊಬ್ಬರು ಪ್ರಸಾದವೆಂಬಂತೆ ಒಂದು ಪೊಟ್ಟಣ ಕೊಡುವ ವಿಡಿಯೋ.

ಈ ಎಲ್ಲಾ ವಿಡಿಯೋ ತುಣುಕುಗಳನ್ನು ಸರಿಯಾಗಿ ಜೋಡಿಸಿ ಅದಕ್ಕೆ ದೊಡ್ಡ ಧ್ವನಿಯ ಮ್ಯೂಸಿಕ್ ಹಾಕಿ ಈ ಮತಾಂತರವನ್ನು ಪತ್ತೆ ಮಾಡಿರುವ ಚಾನಲ್ ಏನು ಮಾಡುತ್ತದೆ ಎಂಬುದನ್ನು ಹೇಳುವ ಪ್ರೊಮೋ ಬಿಡುತ್ತಾರೆ. ಯಾವ ವಿಡಿಯೋ ತುಣುಕಿಗೂ ರೆಕಾರ್ಡ್ ಮಾಡಿದ ಡೇಟ್ ಆಗಲಿ ಅಥವಾ ಅದು ಲೈವ್ ಕವರೇಜ್ ಹೌದಾ ಅಥವಾ ಸ್ಟಾಕ್ ಶಾಟ್ಸ್ ನಿಂದ ತೆಗೆದದ್ದಾ ಹೇಳುವುದಿಲ್ಲ. ಅಂಥದೊಂದು ಡೀಟೇಲ್ಸ್ ಸುದ್ಧಿ ಪ್ರಸರಣ ಮತ್ತು ಡಿಜಿಟಲ್ ಸ್ಟಾಂಡರ್ಡ್ ನ ನೀತಿ ಸಂಹಿತೆಯಲ್ಲಿ ಇದೆ.

ಇಂಥ ಸುದ್ಧಿಗಳನ್ನು ಬಿತ್ತರ ಮಾಡುವಾಗ ಕಟ್ಟುಕಥೆಗಳನ್ನು ಹರಿಬಿಡುವಾಗ ಜನ ಸಮುದಾಯಗಳನ್ನು ಒಡೆಯುತ್ತಿದ್ದಾರೆಂಬುದು ವೇದ್ಯವಾಗುತ್ತದೆ. ಬಹುಸಂಖ್ಯಾತರ ಅಜೆಂಡಾಗಳಿಗೆ ಪೂರಕವಾಗಿ ಈ ತಂತ್ರಗಾರಿಕೆಗಳು ಫಲಿತಾಂಶ ನೀಡುತ್ತವೆಂಬುದು ಐತಿಹಾಸಿಕ ಸತ್ಯ.

ಇಂಥ ವರದಿಗಾರಿಕೆಗಳು ಎಷ್ಟು ಸಾಮಾನ್ಯವಾಗಿವೆಯೆಂದರೆ ಮಾಧ್ಯಮಗಳು ರೂಢಿಸಿಕೊಂಡಿರುವ ಈ ವರದಿಗಾರಿಕೆಯೇ ಅವರಿಗೆ ಕಾನೂನಾತ್ಮಕವೆಂಬಂತೆ ಆಗಿ ಹೋಗಿದೆ. ವಾಸ್ತವದಲ್ಲಿ ಮಾಧ್ಯಮಗಳು ಕಾನೂನಿನನ್ವಯ ಕೆಲಸ ನಿರ್ವಹಿಸಬೇಕಾಗುತ್ತದೆ. ಪ್ರೋಗ್ರಾಮ್ ಮತ್ತು ಅಡ್ವರ್ಟೈಸ್ಮೆಂಟ್ ಕೋಡ್ 1994 ರ ಪ್ರಕಾರ[65], ಕೇಬಲ್ ಸರ್ವೀಸ್ ನಲ್ಲಿ ಧರ್ಮಗಳ ಅಥವಾ ಸಮುದಾಯಗಳ ವಿರುದ್ಧದ ದಾಳಿಗಳ ವಿಡಿಯೋ ಪ್ರಸಾರ ಮಾಡಬಾರದು. ಅಂತೆಯೇ ಧಾರ್ಮಿಕ ಗುಂಪುಗಳ ಬಗೆಗಿನ ಅವಹೇಳನಕಾರಿ ಅಂಶಗಳನ್ನು ಪ್ರಸಾರ ಮಾಡಬಾರದು, ಜೊತೆಗೆ ಅಹಿತಕರ, ನಿಂದಕ, ಸುಳ್ಳಿನಿಂದ ಕೂಡಿದ, ಅರ್ಧ ಸತ್ಯ ಅಥವಾ

[65] https://mib.gov.in/sites/default/files/pac1.pdf

ಉದ್ದೇಶಪೂರ್ವಕವಾಗಿ ಎಸಗುವ ಕೃತ್ಯಗಳನ್ನೂ ಪ್ರಸಾರ ಮಾಡಬಾರದು. ಹಿಂಸೆಯನ್ನು ಪ್ರಚೋದಿಸುವ, ಕಾನೂನಿಗೆ ಭಂಗ ತರಬಲ್ಲ, ದೇಶ ದ್ರೋಹದ ಅಂಶಗಳನ್ನೂ ಪ್ರಸಾರ ಮಾಡಬಾರದು.

ಟೀಕಿಸುವ, ಕೆಡುಕುಂಟು ಮಾಡುವ ಯಾವುದೇ ವ್ಯಕ್ತಿಯನ್ನು ಅಥವ ಗುಂಪುಗಳನ್ನು ನಿಂದಿಸುವ ದೇಶದ ನೈತಿಕ ಬದುಕಿಗೆ ಭಂಗ ತರುವ ಅಂಶಗಳಿರುವ ಸುದ್ದಿ ಅಥವಾ ವಿಡಿಯೋ ಪ್ರಸಾರ ಮಾಡಬಾರದು. ದೂಷಿಸುವ ಪದಗಳನ್ನು ಬಳಸುವ, ವ್ಯಂಗ್ಯವಾಡುವ, ಯಾವುದೇ ಭಾಷೆ, ಧರ್ಮ ಅಥವಾ ಜನಾಂಗವನ್ನು ದ್ವೇಷಿಸುವ ವಿಡಿಯೋಗಳನ್ನು ತೋರಿಸಬಾರದು.

ಪ್ರೋಗ್ರಾಮ್ ಮತ್ತು ಅಡ್ವರ್ಟೈಸ್ಮೆಂಟ್ ಕೋಡ್ ನೊಂದಿಗೆ ನ್ಯೂಸ್ ಬ್ರಾಡ್‌ಕ್ಯಾಸ್ಟಿಂಗ್ ಅಥಾರಿಟಿಯು ಸ್ವಯಂ ನೀತಿ ನಿಯಮಗಳನ್ನು ಹಾಕಿಕೊಂಡಿದೆ.[66] ಅದರಲ್ಲೂ ಸುದ್ದಿಯನ್ನು ಸೂಕ್ಷ್ಮಗೊಳಿಸುವುದಕ್ಕೆ ನಿಯಂತ್ರಣವಿದೆ. ಈ ನೀತಿ ಸಂಹಿತೆಯ ಪ್ರಕಾರ ಮಾಧ್ಯಮಗಳು ನಿಷ್ಪಕ್ಷಪಾತವಾಗಿ, ವಸ್ತುನಿಷ್ಟವಾಗಿ, ತಟಸ್ಥವಾಗಿ ವರದಿ ಮಾಡಬೇಕು.

ಈ ನೀತಿಸಂಹಿತೆಯನ್ನು ಉಲ್ಲಂಘಿಸಿರುವುದಕ್ಕಾಗಿ ಏಷಿಯಾ ನೆಟ್ ಸುವರ್ಣ ಟಿವಿ[67] ವಿರುದ್ಧ ನ್ಯೂಸ್ ಬ್ರಾಡ್‌ಕಾಸ್ಟಿಂಗ್ ಅಂಡ್ ಡಿಜಿಟರ್ ಸ್ಟಾಂಡರ್ಡ್ಸ್ ಅಥಾರಿಟಿಗೆ ಮತ್ತು ದಿಗ್ವಿಜಯ ಟಿವಿ ವಿರುದ್ಧ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಮಕ್ಷಮಕ್ಕೆ ದೂರು ಸಲ್ಲಿಸಲಾಗಿದೆ.[68] ನ್ಯೂಸ್ ಬ್ರಾಡ್ ಕಾಸ್ಟಿಂಗ್ ಅಂಡ್ ಡಿಜಿಟಲ್ ಸ್ಟಾಂಡರ್ಡ್ ಅಥಾರಿಟಿಯು ದೂರು ನೀಡಿದ್ದು ಒಂದು ದಿನ ತಡವಾಗಿದ್ದಕ್ಕೆ ದೂರನ್ನು ತಿರಸ್ಕರಿಸಿದೆ. ಜಿಲ್ಲಾ ಉಸ್ತುವಾರಿ ಸಮಿತಿಯು ಈ ಬಗ್ಗೆ ತಲೆಕೆಡಿಸಿಕೊಂಡೂ ಇಲ್ಲ. ಚಾನಲ್ ಗಳಿರಲಿ ಮತ್ತವುಗಳನ್ನು ನಿಯಂತ್ರಿಸುವ ಸಂಸ್ಥೆಗಳೂ ಸಹ ಕಾನೂನು ಪಾಲಿಸಲು ತಯಾರಿಲ್ಲವೆಂಬುದು ಇದರಿಂದ ವೇದ್ಯವಾಗುತ್ತದೆ.

---

66 http://www.nbanewdelhi.com/

67 https://hatespeechbeda.wordpress.com/2021/03/14/complaint-13-03-2021-complaint-against-asianet-suvarna-news-for-the-mahaexclusive-and-cover-story/

68 https://hatespeechbeda.wordpress.com/2021/04/29/complaint-28-04-2021-complaint-against-digvijay-news/

## ಅಧ್ಯಾಯ ೫: ದೃಢ ನಿಶ್ಚಯದಿಂದ ಮುನ್ನಡೆಯುವುದು

ಕರ್ನಾಟಕದಲ್ಲಿ ಮತಾಂತರ ನಿಷೇಧ ಕಾಯಿದೆ ಇಲ್ಲದಿದ್ದರೂ, ಕ್ರಿಶ್ಚಿಯನ್ನರು ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಿ ದ್ವೇಷದ ಅಪರಾಧಗಳನ್ನೆಸಗುತ್ತಿರುವುದು ಈ ವರದಿಯಲ್ಲಿ ದಾಖಲಾಗಿರುವ ದ್ವೇಷ ಅಪರಾಧಗಳಿಂದ ವೇದ್ಯವಾಗುತ್ತದೆ. ಕ್ರಿಶ್ಚಿಯನ್ನರು ತಮ್ಮ ಧರ್ಮವನ್ನು ಆಚರಿಸಲು ತೊಡಕುಂಟಾಗುತ್ತಿರುವುದಲ್ಲದೆ, ಅದೇ ಕಾರಣಕ್ಕೆ ಅವರನ್ನು ಕ್ರೂರವಾಗಿ ಹಿಂಸಿಸಲಾಗುತ್ತಿರುವುದು ಇಂದಿನ ವಾಸ್ತವ. ಪ್ರತಿ ವಾರ ನಡೆಯುತ್ತಿರುವ ದ್ವೇಷ ಅಪರಾಧಗಳು ಕ್ರಿಶ್ಚಿಯನ್ನರು ಅನುಭವಿಸುತ್ತಿರುವ ಮಾನಸಿಕ ಯಾತನೆ ಮತ್ತು ಅವರ ನಿಜಜೀವನದ ಮೇಲಾಗಿರುವ ದುಷ್ಪರಿಣಾಮಗಳನ್ನು ಕಾಣಿಸುತ್ತಿದೆ. ಈ ಎಲ್ಲಾ ಘಟನೆಗಳನ್ನು ಗಮನಿಸಿದಾಗ ಸಾಂವಿಧಾನಿಕ ಮೌಲ್ಯವಾದ ಭ್ರಾತೃತ್ವ ಇಲ್ಲವಾಗಿದೆ, ಅಂತೆಯೇ ಒಂದು ಧರ್ಮವನ್ನು ಆಚರಿಸುವ ಮೂಲಭೂತ ಹಕ್ಕು ಕಸಿಯಲಾಗಿದೆ.

ಹಿಂದುತ್ವದ ಗುಂಪುಗಳು ಕ್ರಿಶ್ಚಿಯನ್ನರಿಗೆ ನೀಡುತ್ತಿರುವ ಕಿರುಕುಳವನ್ನು ಅನುಭವಿಸುತ್ತಲೇ ಅವರ ಮೇಲೆ ಹೊರಿಸಿರುವ ಆರೋಪಗಳನ್ನು ತಿರಸ್ಕರಿಸಿದೆ. ಕೆಲವು ಪ್ರಕರಣಗಳಲ್ಲಿ ಪಾದ್ರಿಗಳು ಮತ್ತು ಕ್ರೈಸ್ತ ಧರ್ಮದ ಅನುಯಾಯಿಗಳ ಮೇಲೆ ಹಲ್ಲೆ ನಡೆದಾಗ ಇತರೆ ಪಾದ್ರಿಗಳು ಹಾಗೂ ವಕೀಲರ ಸಹಾಯದಿಂದ ಹಿಂದುತ್ವದ ಗುಂಪುಗಳ ಮೇಲೆ ಕೇಸು ದಾಖಲಿಸಿದ್ದಾರೆ.

2008 ರಲ್ಲಿಯೂ ಸಹ ಚರ್ಚುಗಳ ಮೇಲೆ ದಾಳಿ ನಡೆದಾಗ ಅಂಥ ಕೃತ್ಯಗಳ ವಿರುದ್ಧ ಕ್ರಿಶ್ಚಿಯನ್ನರು ಪ್ರತಿಭಟನೆ ನಡೆಸಿದ್ದರು. 2011 ರಲ್ಲಿ ಇಂಟರ್‌ನ್ಯಾಷನಲ್ ಫೆಡರೇಷನ್ ಆಫ್ ಕರ್ನಾಟಕ ಕ್ರಿಶ್ಚಿಯನ್ ಅಸೋಸಿಯೇಷನ್ (ಐಎಫ್ ಕೆ ಸಿಎ) ಆಗಿನ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪನವರಿಗೆ ಮನವಿ ಸಲ್ಲಿಸಿತ್ತು. ಅದಾಗ ಮುಖ್ಯಮಂತ್ರಿಗಳು 338 ಕ್ರಿಶ್ಚಿಯನ್ನರ ವಿರುದ್ಧ ಸುಮಾರು 26 ಕೇಸುಗಳು ದಾಖಲಾಗಿರುವುದಾಗಿ ತಿಳಿಸಿದ್ದರು. ಇದೇ ಸಂಘವು ಆಗಿನ ಗೃಹ ಸಚಿವ ಆರ್ ಅಶೋಕ್ ಅವರನ್ನು ಭೇಟಿಯಾಗಿತ್ತು. ಅವರು ಎಲ್ಲಾ ಕೇಸುಗಳನ್ನು ಹಿಂಪಡೆಯುವುದಾಗಿ ಹೇಳಿದ್ದರು.[69]

ಕೆಲವೊಮ್ಮೆ ಕ್ರೈಸ್ತ ಧರ್ಮದ ಅನುಯಾಯಿಗಳನ್ನು ವೈಯಕ್ತಿಕವಾಗಿ ಗುರಿಯಾಗಿಸಿಕೊಂಡಿದ್ದೂ ಹೌದು. ಒಂದು ವಿಶಿಷ್ಟ ಉದಾಹರಣೆ ಕೊಡಬಹುದಾದರೆ ಬೇಗೂರು ಕೆರೆಯಲ್ಲಿ ಶಿವನ ಮೂರ್ತಿಯನ್ನು ತೆರವುಗೊಳಿಸಿದ್ದು. ಕ್ರೈಸ್ತ ಧರ್ಮದ ಒಬ್ಬ ಪರಿಸರವಾದಿಯು ಶಿವನ ಮೂರ್ತಿ ಯನ್ನು ಅಕ್ರಮವಾಗಿ ಸ್ಥಾಪಿಸಿದ್ದರ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದರು. ಕರ್ನಾಟಕದ ಹೈಕೋರ್ಟ್ ಪೊಲೀಸ್ ಕಮೀಷನರ್ ಅವರಿಗೆ ಇದರ ಬಗ್ಗೆ ಪರಿಶೀಲಿಸಲು ಆದೇಶಿಸಿತ್ತು. ತದನಂತರ ಆದ ಬೆಳವಣಿಗೆಗಳನ್ನು ಕಂಡ ಉಚ್ಚ ನ್ಯಾಯಾಲಯವು "*ಕೋರ್ಟಿನ ಆದೇಶವನ್ನು ತಿರಸ್ಕರಿಸಿದ್ದು ಕಾನೂನುಬಾಹಿರವಾದ ಕೆಲಸ. ರಾಜ್ಯ ಸರ್ಕಾರವು ಇದಕ್ಕೆ ಪಾತ್ರವಾಗಬಾರದು ತಕ್ಷಣ ಕ್ರಮ ಕೈಗೊಳ್ಳಬೇಕು.*"[70] ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ಹಾಸನ ಜಿಲ್ಲೆಯ ಬೇಲೂರಿನ ಮತ್ತೊಂದು ಪ್ರಕರಣದಲ್ಲಿ ಭಜರಂಗದಳದ ಸದಸ್ಯರು ಪ್ರಾರ್ಥನಾ ಸ್ಥಳಕ್ಕೆ ತೆರಳಿ ಗಲಭೆ ಎಬ್ಬಿಸಿದ್ದರು. ಕ್ರೈಸ್ತ ಸಮುದಾಯದ ಕೆಚ್ಚೆದೆಯ ಹೆಣ್ಣುಮಗಳೊಬ್ಬಳು ಈ ಗುಂಪಿನ ವಿರುದ್ಧ ಸೆಣಸಿದ್ದಳು.

---

[69] https://daijiworld.com/index.php/news/newsDisplay?newsID=95605

[70] https://www.indiatoday.in/law/story/karnataka-hc-cracks-whip-over-shiva-statue-installation-in-begur-lake-1839765-2021-08-11

ಹುಬ್ಬಳ್ಳಿಯ ಯುನೈಟೆಡ್ ಧಾರವಾಡ ಡಿಸ್ಟ್ರಿಕ್ಟ್ ಕ್ರಿಶ್ಚಿಯನ್ ಪಾಸ್ಟರ್ಸ್ ಅಂಡ್ ಲೀಡರ್ಸ್ ಅಲಿಯನ್ಸ್ ಕಪ್ಪು ಬಟ್ಟೆಗಳನ್ನು ಧರಿಸಿ ಕ್ರೈಸ್ತ ಸಮುದಾಯದ ವಿರುದ್ಧ ನಡೆಯುತ್ತಿರುವ ದ್ವೇಷ ಅಪರಾಧಗಳು ನಿಲ್ಲಬೇಕೆಂದು ಜಾಥಾ ನಡೆಸಿದ್ದರು. ಅಲ್ಲದೆ ತಮ್ಮ ನಂಬಿಕೆಯ ಆಚರಣೆಗೆ ತೊಡಕಾಗಬಾರದು ನಂಬಿಕೆಯ ಆಚರಣೆಗೆ ಅವಕಾಶವಿರಬೇಕು, ಅದು ತಮ್ಮ ಸಾಂವಿಧಾನಿಕ ಹಕ್ಕು ಎಂದು ಪ್ರತಿಪಾದಿಸಿ ಮುಖ್ಯಮಂತ್ರಿಗಳು, ಗೃಹ ಸಚಿವರು ಮತ್ತು ವಿರೋಧ ಪಕ್ಷದ ನಾಯಕರಿಗೆ ಪತ್ರ ಬರೆದರು.[71] ಚಿಕ್ಕಬಳ್ಳಾಪುರದಲ್ಲಿ ದಲಿತರು ಮತ್ತು ಕ್ರೈಸ್ತ ಸಮುದಾಯದವರು ಜಾಥಾ ಆಯೋಜಿಸಿದ್ದರು. ಅವರು ಜೈಭೀಮ್ ಹಾಸ್ಟೆಲ್ ನಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೆ ಜಾಥಾ ನಡೆಸಿದ್ದರು. ಅಂತೆಯೇ ಆನೇಕಲ್ ನಲ್ಲಿ ದಲಿತರು ಮತ್ತು ಅಲ್ಪಸಂಖ್ಯಾತರ ವಿರುದ್ಧ ನಡೆಯುತ್ತಿರುವ ದಾಳಿ ಹಾಗೂ ಹಲ್ಲೆಗಳನ್ನು ವಿರೋಧಿಸಿ 12 ಕಿಲೋಮೀಟರ್ ಜಾಥಾ ನಡೆಸಲಾಯಿತು.

ಡಿಸೆಂಬರ್ 4, 2021 ರಂದು ಆಲ್ ಕರ್ನಾಟಕ ಯುನೈಟೆಡ್ ಕ್ರಿಶ್ಚಿಯನ್ ಫೋರಮ್ ಫಾರ್ ಹ್ಯೂಮನ್ ರೈಟ್ಸ್ ಪ್ರಸ್ತಾವಿತ ಮತಾಂತರ ನಿಷೇಧ ಬಿಲ್ ವಿರುದ್ಧ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕ್ಯಾಥೆಡ್ರಲ್ ಮೈದಾನದಲ್ಲಿ ಸಭೆ ಏರ್ಪಡಿಸಿತ್ತು. ರಾಜಾಸ್ಥಾನ ಮಾಜಿ ರಾಜ್ಯಪಾಲರಾದ ಶ್ರೀಮತಿ ಮಾರ್ಗರೆಟ್ ಆಳ್ವಾ ಮಾತನಾಡಿದರು. ಬಹಳಷ್ಟು ಮಂದಿ ನಾಗರೀಕ ಸಂಘಟನೆಗಳು ವಿದ್ಯಾರ್ಥಿಗಳು ಈ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದರು.[72]

ಕರ್ನಾಟಕದಲ್ಲಿ ಚರ್ಚ್ ಗಳ ಬಗೆಗೆ ಮಾಹಿತಿ ಕಲೆಹಾಕುವ ಸರ್ಕಾರದ ನಿಲುವಿನ ಬಗ್ಗೆ ರೆವರೆಂಡ್ ಪೀಟರ್ ಮಚಾಡೋ, ಆರ್ಚ್ ಬಿಷಪ್ ಬಹಳ ಕಡೆ ತಮ್ಮ ಕಾಳಜಿ ಮತ್ತು ಆತಂಕ ವ್ಯಕ್ತಪಡಿಸಿದ್ದರು. ಸರ್ಕಾರದ ಆ ಕ್ರಮವನ್ನು ಅವರು ವಿರೋಧಿಸಿದ್ದಲ್ಲದೆ ಅದೊಂದು ಅಪಾಯಕಾರಿ ಬೆಳವಣಿಗೆ ಎಂದೂ ಬಣ್ಣಿಸಿದ್ದರು. ಅಲ್ಲದೆ ಪಾದ್ರಿಗಳು ಮತ್ತು ಅವರ ನಂಬಿಕೆಗಳ ವಿರುದ್ಧ ದಾಳಿ ಮಾಡಲು ಅದು ನೆರವು ಮಾಡಿಕೊಡುತ್ತದೆಂದೂ ಪ್ರತಿಪಾದಿಸಿದರು. ಕೆಲವರು ಕ್ರೈಸ್ತ ಸಮುದಾಯಕ್ಕೆ ಕಪ್ಪುಚುಕ್ಕೆ ಬಳಿಯಲು ಪ್ರಯತ್ನಿಸುತ್ತಿರುವುದಾಗಿ ಆತಂಕಿತರಾಗಿದ್ದರು. ಅಂತೆಯೇ ಯಾವುದೇ ವ್ಯಕ್ತಿ ತನ್ನ ಇಷ್ಟದ ಧರ್ಮವನ್ನು ಬಹಿರಂಗವಾಗಿ ಹೇಳಿಕೊಳ್ಳಲು, ಆಚರಿಸಲು, ಪ್ರಚಾರ ಮಾಡಲು ಸಂವಿಧಾನ ಹಕ್ಕು ಕಲ್ಪಿಸಿದೆ ಎಂದೂ ಜನಪ್ರತಿನಿಧಿಗಳಿಗೆ ಮತ್ತೊಮ್ಮೆ ನೆನಪುಮಾಡಿಕೊಡುವ ಕೆಲಸ ಮಾಡಿದರು. ಆರ್ಚ್ ಬಿಷಪ್ ಅವರು ರಾಷ್ಟ್ರೀಯ ಮಾಧ್ಯಮಗಳಲ್ಲಿ ಮತಾಂತರ ನಿಷೇಧ ಕಾಯಿದೆಯನ್ನು ವಿರೋಧಿಸಿ ಮಾತನಾಡಿದ್ದರು. 24, ಸೆಪ್ಟೆಂಬರ್ 2021 ರಂದು ಕರ್ನಾಟಕದ ಪಾದ್ರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮತಾಂತರ ನಿಷೇಧದ ಬಗ್ಗೆ ತಮ್ಮ ಕಳವಳ ವ್ಯಕ್ತಪಡಿಸಿದ್ದರು. ಕ್ರೈಸ್ತ ಸಮುದಾಯದ ಈ ದೃಢ ನಿರ್ಧಾರಗಳು ಸಂವಿಧಾನ ನಮಗೆ ನೀಡಿರುವ ಹಕ್ಕುಗಳನ್ನು ಪುನಃಸ್ಥಾಪಿಸುವ ಮತ್ತು ಪುನಶ್ಚೇತನಗೊಳಿಸುವ ಭರವಸೆಯನ್ನು ನೀಡಿದೆ.

2002 ರಲ್ಲಿ ದ್ರಾವಿಡ ರಾಜ್ಯವಾದ ತಮಿಳುನಾಡಿನಲ್ಲಿ ಜಯಲಲಿತ ಮತಾಂತರ ನಿಷೇಧ ಕಾಯಿದೆ ತಂದಿದ್ದನ್ನು ಇಲ್ಲಿ ಸ್ಮರಿಸಬಹುದು. ಎಐಡಿಎಂಕೆಯು ಬಲವಂತರ ಮತಾಂತರ ಕಾಯಿದೆ 2002 ತಂದ[73] ನಂತರ ಕ್ರೈಸ್ತ ಸಮುದಾಯದಿಂದ

---

71 https://drive.google.com/file/d/18_1RseUGPVOt4NB4W_N9D_YzjwLESC2Y/view

72 https://www.indiatoday.in/india/story/bengaluru-christians-oppose-proposed-anti-conversion-bill-hold-peace-assembly-1884427-2021-12-05

73 https://www.indiatoday.in/india/story/bengaluru-christians-oppose-proposed-anti-conversion-bill-hold-peace-assembly-1884427-2021-12-05

ತೀವ್ರ ವಿರೋಧ ಎದುರಿಸಿದ್ದಲ್ಲದೆ ಇತರೆ ಸಮುದಾಯಗಳೂ ಅದನ್ನು ವಿರೋಧಿಸಿದವು.[74] ಅದರಿಂದ ಎಚ್ಚೆತ್ತು 2006 ರಲ್ಲಿ ಮತಾಂತರ ನಿಷೇಧ ಕಾಯಿದೆಯನ್ನು ಹಿಂಪಡೆಯಲಾಯ್ತು.[75] ಆದಾಗ್ಯೂ ಎಐಎಡಿಎಂಕೆ ಯು ಮುಂದಿನ ಚುನಾವಣೆಯಲ್ಲಿ ಅನೇಕ ಸ್ಥಾನಗಳನ್ನು ಕಳಕೊಂಡಿತು. ಇದರಿಂದ ಅರ್ಥವಾಗುವುದೇನೆಂದರೆ "ಬಲವಂತದ ಮತಾಂತರ" ಎಂಬ ಕಟ್ಟು ಕಥೆಗಳನ್ನು ದ್ರಾವಿಡ ಸಮುದಾಯಗಳು ಒಪ್ಪುವುದಿಲ್ಲ ಮತ್ತು ಒಂದು ನಂಬಿಕೆಯ ಆಚರಣೆಯನ್ನು ಅಪರಾಧೀಕರಣಗೊಳಿಸಲು ಪ್ರಭುತ್ವಕ್ಕೆ ಬಿಡುವುದಿಲ್ಲ.

ತಮಿಳುನಾಡಿನಂತೆಯೇ ಕರ್ನಾಟಕದಲ್ಲೂ ಸಹ ಕ್ರೈಸ್ತ ಅನುಯಾಯಿಗಳ ವಿರುದ್ಧ ನಡೆಯುತ್ತಿರುವ ದೌರ್ಜನ್ಯವನ್ನು ವಿರೋಧಿಸಲು ಮತ್ತು ಈಗ ತರಲೆತ್ನಿಸುತ್ತಿರುವ ಮತಾಂತರ ನಿಷೇಧ ಕಾಯಿದೆಯ ವಿರುದ್ಧ ಧ್ವನಿ ಎತ್ತಲು ಜನರು ಮುಂದಾಗಬೇಕು.

ಈ ವರದಿಯನ್ನು ಬರೆಯುತ್ತಿರುವ ಸಮಯದಲ್ಲೇ ಬೆಳಗಾವಿಯಲ್ಲಿ ಮತ್ತೊಂದು ದಾಳಿ ನಡೆದಿದೆ. ಡಿಸೆಂಬರ್ 11, 2021 ರಂದು ಒಬ್ಬ ವ್ಯಕ್ತಿ ಮಚ್ಚು ಹಿಡಿದ ಚರ್ಚಿನೊಳಗೆ ನುಗ್ಗಿ ಪಾದ್ರಿಯನ್ನು ಅಟ್ಟಾಡಿಸಿದ್ದಾನೆ.[76] ಈ ಘಟನೆಯು ನಡೆಯುವುದಕ್ಕೂ ಮುನ್ನ ಬೆಳಗಾವಿ ಪೋಲೀಸರು ಬಾಡಿಗೆ ಮನೆಗಳಲ್ಲಿ ಪ್ರಾರ್ಥನೆಯನ್ನು ನಡೆಸಬೇಡಿ ಎಂಬ "ಸ್ನೇಹಮಯ ಎಚ್ಚರಿಕೆ" ನೀಡಿದ್ದರು.[77] ರಾಜ್ಯದ ಪೋಲೀಸರು ಇಂಥ ದಾಳಿಗಳನ್ನು ತಡೆಯಲಾಗದಿರುವುದು ನಮಗೆ ಗಾಭರಿ ಹುಟ್ಟಿಸಿದೆ. ಡಿಸೆಂಬರ್ 12, 2021 ರಂದು ಕೋಲಾರದಲ್ಲಿ ಕ್ರೈಸ್ತ ಮತದ ಪುಸ್ತಕಗಳನ್ನು ಸುಟ್ಟುಹಾಕಲಾಗಿದೆ.[78] ಡಿಸೆಂಬರ್ 13 2021 ರಿಂದ ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಹಿಂದುತ್ವ ಗುಂಪಿನ ಗೂಂಡಾವರ್ತನೆಯನ್ನು ವಿರೋಧಿಸಿ ನ್ಯಾಯ ಸ್ಥಾಪಿಸಲು  ಎಲ್ಲರೂ ಒಕ್ಕೊರಲಿನಿಂದ ಹೋರಾಡಬೇಕಿದೆ. ಕ್ರೈಸ್ತ ಧರ್ಮಿಯರಿಗೆ ನ್ಯಾಯಕೊಡಿಸುವ ಒತ್ತಾಯದ ಭಾಗವಾಗಿ ಮತಾಂತರ ನಿಷೇಧ ಕಾಯಿದೆಯನ್ನೂ ವಿರೋಧಿಸಬೇಕು, ಏಕೆಂದರೆ ಆ ಕಾನೂನು ಅಲ್ಪಸಂಖ್ಯಾತರ ವಿರುದ್ಧ ನಡೆಯುವ ಗೂಂಡಾವರ್ತನೆಯನ್ನು ಕಾನೂನುಬದ್ಧಗೊಳಿಸಿಬಿಡುವ ಅಪಾಯವಿದೆ.

ಜವಾಬ್ದಾರಿಯುತ ನಾಗರೀಕರಾದ ನಾವು ಇದೀಗ ಮೌನವಹಿಸಿದರೆ ಜಾತ್ಯಾತೀತ ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರಲಿದೆ. ನಮ್ಮ ಸಾಂವಿಧಾನಿಕ ಮೌಲ್ಯಗಳಾದ ಸಮಾತನೆ, ವ್ಯಕ್ತಿ ಘನತೆ, ಭ್ರಾತೃತ್ವ ರಕ್ಷಿಸುವುದಕ್ಕೋಸ್ಕರ ನಾವು ನಮ್ಮ ಮಾಧ್ಯಮಗಳು, ನ್ಯಾಯಾಂಗ ವ್ಯವಸ್ಥೆ, ಶಾಸಕಾಂಗ ವ್ಯವಸ್ಥೆ ಹಾಗೂ ಸರ್ಕಾರವನ್ನು ಪ್ರಶ್ನಿಸಬೇಕಿದೆ.

1. ಒಬ್ಬ ವ್ಯಕ್ತಿಯಾಗಿ ಮತ್ತೊಬ್ಬ ವ್ಯಕ್ತಿಯ ನಂಬಿಕೆಗಳಿಗೂ ನನಗೂ ಏನು ಸಂಬಂಧ?

---

74 https://www.baptistpress.com/resource-library/news/anti-conversion-law-repeal-announced-in-indian-state/

75 https://cms.tn.gov.in/sites/default/files/acts/ACT_10to12_131_07JUN06_0.pdf

76 https://www.ndtv.com/india-news/on-camera-man-armed-with-machete-enters-karnataka-church-chases-priest-2647387

77 https://www.thenewsminute.com/article/belagavi-cops-tell-christians-avoid-prayer-meets-if-they-dont-want-rw-attacks-158053

78 https://indianexpress.com/article/cities/bangalore/karnataka-right-wing-groups-attack-christians-set-religious-books-on-fire-7669416/

2. ನಾನು ಯಾವ ಧರ್ಮವನ್ನು ನಂಬುತ್ತೇನೆ ಮತ್ತು ಆಚರಿಸುತ್ತೇನೆ ಎಂಬುದನ್ನು ನಾನು ತೀರ್ಮಾನಿಸುತ್ತೇನೆ? ಬೇರೆ ಯಾರೋ ಅದನ್ನು ಹೇರುವುದು ಏಕೆ?
3. ಯಾವುದು ಭಲವಂತದ ಮತಾಂತರ ಮತ್ತು ಯಾವುದು ಸ್ವ ಇಚ್ಛೆಯಿಂದ ಆಯ್ಕೆ ಮಾಡಿಕೊಂಡದ್ದು ಎಂಬುದನ್ನು ತೀರ್ಮಾನಿಸಲು ಹಿಂದುತ್ವ ಗುಂಪುಗಳಿಗೆ ಇರುವ ಅಧಿಕಾರವಾದರೂ ಏನು?
4. ಒಂದು ಕಾನೂನಿನ ಅಡಿಯಲ್ಲಿರುವ ಸಮಾಜದಲ್ಲಿ ಯಾವುದೋ ವ್ಯಕ್ತಿಯು ಕ್ರೈಸ್ತರು ಮತಾಂತರ ಮಾಡುತ್ತಿದ್ದಾರೆ ಎಂಬ ಆರೋಪದಡಿ ನಡೆಸುವ ದೌರ್ಜನ್ಯ, ಲೈಂಗಿಕ ಕಿರುಕುಳ ಮುಂತಾದ ಅಪರಾಧಗಳನ್ನು ಕಾನೂನು ಒಪ್ಪುತ್ತದೆಯೇ?

**ರಾಜ್ಯ ಪ್ರಭುತ್ವಕ್ಕೆ ಕೆಳಗಿನ ಪ್ರಶ್ನೆಗಳು:**

1. ಈ 39 ದ್ವೇಷ ಅಪರಾಧ ಪ್ರಕರಣಗಳಲ್ಲಿ ರಾಜ್ಯ ಏನು ಮಾಡಿದೆ?
2. ಒಬ್ಬ ವ್ಯಕ್ತಿಯ ಧರ್ಮ ಮತ್ತು ನಂಬಿಕೆಗಳನ್ನು ನಿಯಂತ್ರಿಸಲು ರಾಜ್ಯದ ಪಾತ್ರವಾದರೂ ಏನು?
3. ಪ್ರಸ್ತುತ ಇರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ಅಡಿಯಲ್ಲಿ ಶಿಕ್ಷೆಗೊಳಗಾಗಿರುವವರು ಕೆಲವರೇ ಇದ್ದಾಗ್ಯೂ ಪ್ರಭುತ್ವ ಮತಾಂತರ ನಿಷೇಧ ಕಾಯಿದೆಯನ್ನು ತರಲು ಬಯಸುತ್ತಿರುವುದಾದರೂ ಏಕೆ?
4. ಸಂವಿಧಾನ ಪ್ರದತ್ತವಾಗಿಸಿರುವ ವ್ಯಕ್ತಿಯ ನಂಬಿಕೆಯ ವಿಷಯವಾಗಿ ರಾಜ್ಯ ಮಧ್ಯ ಪ್ರವೇಶಿಸುತ್ತಿರುವುದೇಕೆ?
5. ಪೊಲೀಸರು ಕಾನೂನನ್ನು ಕೈಗೆ ತೆಗೆದುಕೊಂಡು ಕ್ರೈಸ್ತ ಧರ್ಮೀಯರ ಮೇಲಿನ ದ್ವೇಷ ಅಪರಾಧಗಳು ಹೆಚ್ಚು ಮಾಡುತ್ತಿರುವುದೇಕೆ?
6. ರಾಜ್ಯವು ತನ್ನ ನಾಗರೀಕರಿಗೆ ಇರುವ ಮೂಲಭೂತ ಹಕ್ಕು ಮತ್ತು ವ್ಯಕ್ತಿಯ ಆಯ್ಕೆಯ ಧರ್ಮವನ್ನು ಅಚರಿಸುವ ಹಕ್ಕನ್ನು ನಿಯಂತ್ರಿಸುತ್ತಿರುವುದೇಕೆ?

**ಮಾಧ್ಯಮಕ್ಕೆ ಕೆಳಗಿನ ಪ್ರಶ್ನೆಗಳು**:

1. ಯಾವ ಟಿವಿ ಮಾಧ್ಯಮವು ಕ್ರೈಸ್ತರ ವಿರುದ್ಧ ನಡೆದಿರುವ 39 ಪ್ರಕರಣಗಳನ್ನು ಚಿತ್ತರಿಸಿದೆ?
2. ಒಂದು ಟಿವಿ ಮಾಧ್ಯಕ್ಕೆ ಯಾವುದೋ ವ್ಯಕ್ತಿಯ ಮನೆಗೆ ಹೋಗಿ ಅವರು ಆಚರಿಸುತ್ತಿರುವ ಧರ್ಮದ ಕಾರಣಕ್ಕೆ ಅವರನ್ನು ಕ್ರಿಮಿನಲ್ ಗಳೆಂಬಂತೆ ಬಿಂಬಿಸಲು ಇರುವ ಅಧಿಕಾರವಾದರೂ ಏನು?
3. ಸಾರ್ವಜನಿಕರಾದ ನಮಗೆ ಒಂದು ತಟಸ್ಥ, ವಸ್ತುನಿಷ್ಟ ಮತ್ತು ನಿಷ್ಪಕ್ಷವಾದ ಮಾಹಿತಿಯನ್ನು ಪಡೆಯುವ ಹಕ್ಕನ್ನು ಟಿ ವಿ ಮಾಧ್ಯಮಗಳು ಹೇಗೆ ಮೊಟಕುಗೊಳಿಸುತ್ತವೆ ಮತ್ತು ಉಲ್ಲಂಘಿಸುತ್ತವೆ?

# ಶಿಫಾರಸ್ಸುಗಳು

**ರಾಜ್ಯ ಸರ್ಕಾರವು**

1. <u>*Tahseen S Poonawalla v Union of India* *[ಂಖು 2018 ಖಅ 3354]*</u> ಪ್ರಕರಣದಲ್ಲಿ ಗುಂಪುಗಲಭೆ ಮತ್ತು ಹತ್ಯೆಯ ಬಗೆಗೆ ಸರ್ವೋಚ್ಚ ನ್ಯಾಯಾಲಯ ನೀಡಿರುವ ನಿರ್ದೇಶನಗಳನ್ನು ರಾಜ್ಯ ಸರ್ಕಾರ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಅಹಿತಕರ ಘಟನೆಗಳು ನಡೆದಾಕ್ಷಣ ತಡಮಾಡದೆ ಎಫ್ ಐ ಆರ್ ದಾಖಲಿಸಬೇಕು. ಸಂತ್ರಸ್ಥರ ಕುಟುಂಬದ ಸದಸ್ಯರಿಗೆ ಕಿರುಕುಳ ತಪ್ಪಿಸಬೇಕು. ದಿನಂಪ್ರತಿ ಫಾಸ್ಟ್ ಟ್ರಾಕ್ ಕೋರ್ಟುಗಳಲ್ಲಿ ಗುಂಪುಗಲಬೆಗಳ ವಿಚಾರಣೆ ನಡೆಯಬೇಕು. ಅಪರಾಧ ಪ್ರಕರಣಗಳನ್ನು ತಡೆಯಲು ಸೋತ ಪೋಲೀಸರನ್ನು ಬಾಧ್ಯಸ್ಥರನ್ನಾಗಿ ಮಾಡಬೇಕು.

1. ತೆಹಸೀನ್ ಪೂನಾವಾಲ ಪ್ರಕರಣದಲ್ಲಿ ನೀಡಿರುವ ನಿರ್ದೇಶನದಂತೆ ಸೆಕ್ಷನ್ 357 ಎ ಸಿಆರ್‌ಪಿಸಿ ಅಡಿ ದ್ವೇಷ ಅಪರಾಧಗಳ ಸಂತ್ರಸ್ಥರಿಗೆ ಪರಿಹಾರ ಒದಗಿಸಲು ಯೋಜನೆಯೊಂದನ್ನು ತಕ್ಷಣ ರೂಪಿಸಬೇಕು. ಪರಿಹಾರ ನೀಡುವಾಗ ರಾಜ್ಯ ಸರ್ಕಾರವು ಸಂತ್ರಸ್ಥರಿಗೆ ದೈಹಿಕವಾಗಿ ಆಗಿರುವ ಗಾಯಗಳು, ಮಾನಸಿಕ ಆಘಾತ, ಕಳಕೊಂಡ ವಸ್ತುಗಳು, ಕೆಲಸ ಹಾಗೂ ಶಿಕ್ಷಣದ ಅವಕಾಶಗಳಿಂದ ವಂಚನೆಗೊಳಗಾದದ್ದು, ಚಿಕಿತ್ಸೆ ಹಾಗೂ ಕಾನೂನು ಸೇವೆಗಳ ವೆಚ್ಚವನ್ನು ಪರಿಗಣಿಸಬೇಕು. ಈ ಪರಿಹಾರ ಯೋಜನೆಯಲ್ಲಿ ಮಧ್ಯಂತರ ವಾಗಿ ಪರಿಹಾರ ನೀಡಲು ಅವಕಾಶ ಕಲ್ಪಿಸಬೇಕು. ಗುಂಪು ಗಲಭೆ ಅಥವಾ ಹತ್ಯೆ ಪ್ರಕರಣಗಳಲ್ಲಿ ಘಟನೆ ನಡೆದ 30 ದಿನಗಳೊಳಗಾಗಿ ಸಂತ್ರಸ್ಥರಿಗೆ ಅಥವಾ ಸಂತ್ರಸ್ಥ ಮರಣವನ್ನಪ್ಪಿದಲ್ಲಿ ಹತ್ತಿರದ ಸಂಭಂದಿಗೆ ಪರಿಹಾರ ನೀಡುವಂತಾಗಬೇಕು. *<u>Kodungallur Film Society &Anr v Union of India [(2018) 10 SCC 713]</u>*, ಜೊತೆಗೆ ಸಾಮಾಜಿಕ ವ್ಯವಸ್ಥೆ ಹಾಗೂ ಗುಂಪುಗಲಬೆಗಳನ್ನು ತಡೆಗಟ್ಟುವ ಉಪಕ್ರಮಗಳು, ಪ್ರಕರಣಗಳ ಸಂಖ್ಯೆ ಕಡಿಮೆ ಮಾಡುವುದು, ಗಲಭೆ ಮಾಡಿದ ವ್ಯಕ್ತಿಯನ್ನು ಬಾಧ್ಯಸ್ಥನನ್ನಾಗಿ ಮಾಡುವುದು ಮತ್ತು ಪೋಲೀಸರ ಜವಾಬ್ಧಾರಿ ಮೊದಲಾದ ಅಂಶಗಳು ಒಳಗೊಳ್ಳಬೇಕು.

2. 2008 ರ ಕೋಮು ಸೌಹಾರ್ಧತೆಯ ಮಾರ್ಗಸೂಚಿಗಳನ್ನು ಜಾರಿಗೊಳಿಸಲು ತುರ್ತು ಕ್ರಮ ಕೈಗೊಳ್ಳಬೇಕು.

3. ಆಸ್ತಿ ಪಾಸ್ತಿಗಳನ್ನು ಧ್ವಂಸಗೊಳಿಸುವ ವಿಧ್ವಂಸಕ ಕೃತ್ಯಗಳನ್ನು ವಿಶೇಷವಾಗಿ ಚರ್ಚುಗಳ ಮೇಲೆ ನಡೆದ ದಾಳಿಗಳಲ್ಲಿ ಆದ ಸಾರ್ವಜನಿಕ/ಖಾಸಗಿ ಆಸ್ತಿ ಪಾಸ್ತಿ ನಷ್ಟ, ಜನರಿಗೆ ಆದ ಗಾಯಗಳು ಇತ್ಯಾದಿಗಳನ್ನು ಮೌಲ್ಯಮಾಪನ ಮಾಡಲು ಆಯುಕ್ತಾಲಯ ರಚಿಸಬೇಕು. ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ *<u>In Re: Destruction of Public & Private Properties v State of AP and Ors [ AIR 2009 SC 2266]</u>*. ದಾಳಿಗೆ ಕಾರಣರಾದವರು ಮತ್ತು ದಾಳಿಯ ಹಿಂದಿನ ಶಕ್ತಿಗಳಿಂದಲೇ ನಷ್ಟ ಪರಿಹಾರವನ್ನು ಕೊಡಿಸುವ ಕೆಲಸವಾಗಬೇಕು.

4. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಗುಂಪುಗಲಭೆಗಳು ಮತ್ತು ಹತ್ಯೆಗಳನ್ನು ನಿಯಂತ್ರಿಸಲು ಎಸ್ ಪಿ ಕೇಡರ್ ಗಿಂತ ಕಡಿಮೆ ಇರದ ಪೋಲೀಸ್ ಅಧಿಕಾರಿಯನ್ನು ನೋಡಲ್ ಅಧಿಕಾರಿಯಾಗಿ ಪ್ರತಿ ಜಿಲ್ಲಾ ಕೇಂದ್ರಕ್ಕೆ ನೇಮಿಸಬೇಕು. ಅವರ ನೆರವಿಗೆ ಡಿ ಎಸ್ ಪಿ ರ್‍ಯಾಂಕಿನ ಅಧಿಕಾರಿಯೊಬ್ಬರನ್ನು ನಿಯೋಜಿಸಬೇಕು. ಇಂಥ ಕೃತ್ಯಗಳನ್ನು ಎಸಗುವ ಮಂದಿಯನ್ನು ಪತ್ತೆಹಚ್ಚಲು, ದ್ವೇಷದ ಭಾಷಣ ಮಾಡುವವರನ್ನು ಗುರುತಿಸಲು ಮತ್ತು ಸುಳ್ಳು ಸುದ್ಧಿಗಳನ್ನು

ಹರಿಬಿಡುವವರ ಬಗೆಗೆ ನಿಗಾವಹಿಸಲು ವಿಶೇಷ ಜಾಗೃತ ದಳ ರಚಿಸಬೇಕು. ಇವರೆಲ್ಲರೂ ಕೂಡಿ ತಿಂಗಳಿಗೊಂದರಂತೆ ಸಭೆ ನಡೆಸಬೇಕು. ಸಭೆಯಲ್ಲಿ ಸ್ಥಳೀಯ ಜಾಗೃತ ದಳ, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲಾ ವ್ಯಾಪ್ತಿಯಲ್ಲಿ ಗುಂಪುಗಲಭೆ ಹಾಗೂ ಹತ್ಯೆ ಪ್ರಕರಣಗಳು ಇರುವಿಕೆಯ ಬಗ್ಗೆ ಚರ್ಚಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ದಾಳಿಗಳಿಗೆ ಪ್ರಚೋದನೆ ನೀಡುವಂತಃ ಯಾವುದೇ ಅಂಶಗಳನ್ನು ಚಿತ್ತರಗೊಳ್ಳುವುದನ್ನು ನಿಷೇಧಿಸಲು ಕ್ರಮ ಕೈಗೊಳ್ಳಬೇಕು. ನೋಡಲ್ ಅಧಿಕಾರಿಯು ಯಾವುದೇ ಜಾತಿ ಅಥವಾ ಸಮುದಾಯಗಳನ್ನು ಗುರಿಯಾಗಿಸಿಕೊಂಡು ನಡೆಯಬಹುದಾದ ದಾಳಿಗಳನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಕ್ರಮ ಕೈಗೊಳ್ಳಬೇಕು. *TehseenPoonawala vs. Union of India [AIR 2018 SC 3354]*

5. ಇತ್ತೀಚಿಗೆ ಅಥವಾ ಕಳೆದ ಐದು ವರ್ಷಗಳಲ್ಲಿ ರಾಜ್ಯದ ಯಾವ ಜಿಲ್ಲೆ ತಾಲ್ಲೂಕು ಅಥವಾ ಗ್ರಾಮಗಳಲ್ಲಿ ಗುಂಪು ಗಲಭೆಗಳು ಮತ್ತು ಹತ್ಯೆಗಳು ನಡೆದಿವೆ ಎಂಬುದನ್ನು ಗುರುತಿಸಬೇಕು. *TehseenPoonawala vs. Union of India [AIR 2018 SC 3354]*

6. ಯಾವ ಠಾಣೆ ವ್ಯಾಪ್ತಿಯಲ್ಲಿ ಗುಂಪುಗಲಭೆಗಳು ನಡೆದಿವೆಯೋ ಅಲ್ಲಿನ ಪೊಲೀಸ್ ಅಧಿಕಾರಿ ಹೆಚ್ಚಿನ ನಿಗಾವಹಿಸಬೇಕೆಂಬ ನಿರ್ದೇಶನ ಕೊಡತಕ್ಕದ್ದು. *TehseenPoonawala vs. Union of India [AIR 2018 SC 3354]*

7. ಗುಂಪುಗಲಭೆಗಳಲ್ಲಿ ತೊಡಗುವ ಮತ್ತು ಹತ್ಯೆ ಮಾಡುವವರು *TehseenPoonawala vs. Union of India [AIR 2018 SC 3354]* ತೀರ್ಪಿನಲ್ಲಿ ಸೂಚಿಸಿರುವಂತೆ ಅತ್ಯಂತ ಗಂಭೀರ ಶಿಕ್ಷೆಗೆ ಒಳಗಾಗಬೇಕಾಗಬಹುದೆಂದು ರೇಡಿಯೋ, ಟಿವಿ ಮಾಧ್ಯಮಗಳು ಸೇರಿದಂತೆ ಗೃಹ ಇಲಾಖೆ ವೆಬ್‌ಸೈಟ್ ನಲ್ಲೂ ಪ್ರಕಟಿಸಬೇಕು.

8. ಗುಂಪುಗಲಭೆಗಳನ್ನು ನಿರ್ವಹಿಸಲು ವಿಶೇಷ ಸಹಾಯವಾಣಿ ಇರಬೇಕು. *Kodungallur Film Society and Ors. vs. Union of India (UOI) and Ors. [(2018) 10 SCC 713]*

**ಪೊಲೀಸ್ ಇಲಾಖೆ ಕೈಗೊಳ್ಳಬೇಕಾದ ಕ್ರಮ**

1. ಆಯಾ ರಾಜ್ಯಗಳ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಗೃಹ ಇಲಾಖೆಯ ಕಾರ್ಯದರ್ಶಿಗಳು ಕನಿಷ್ಠ ಮೂರು ತಿಂಗಳಿಗೊಮ್ಮೆ ನೋಡಲ್ ಅಧಿಕಾರಿಗಳು ಮತ್ತು ರಾಜ್ಯ ಪೊಲೀಸ್ ಗುಪ್ತಚರ ಇಲಾಖೆ ಮುಖ್ಯಸ್ಥರೊಂದಿಗೆ ಸಭೆ ನಡೆಸಬೇಕು. ನೋಡಲ್ ಅಧಿಕಾರಿಗಳು ಗುಂಪು ಗಲಭೆ ಮತ್ತು ಹತ್ಯೆಗಳ ಕುರಿತಾದ ಅಂತರ ಜಿಲ್ಲಾ ಸಮನ್ವಯದ ಅಗತ್ಯತೆಯ ಬಗ್ಗೆ ಪೊಲೀಸ್ ವರಿಷ್ಠಾಧಿಕಾರಿ ಅವರ ಗಮನಕ್ಕೆ ತರಬೇಕು. *Tehseen Poonawala vs. Union of India [AIR 2018 SC 3354]*

2. ಯಾವುದೇ ಗುಂಪು ಗಲಭೆ ಅಥವಾ ಹತ್ಯೆ ಪ್ರಕರಣವು ಘಟನೆ ನಡೆದ ಬಗ್ಗೆ ಸ್ಥಳೀಯ ಪೊಲೀಸರಿಗೆ ಮಾಹಿತಿ ದೊರೆತ ಕೂಡಲೇ ಐಪಿಸಿ ಸೆಕ್ಷನ್ ಅಥವಾ ಇತರೆ ಕಾನೂನು ರೀತ್ಯಾ ಪ್ರದತ್ತವಾದ ಇತರೆ ಅವಕಾಶಗಳ ಅಡಿಯಲ್ಲಿ ತಡಮಾಡದೆ ಎಫ್ ಐ ಆರ್ ದಾಖಲಿಸಬೇಕು. *Tehseen Poonawala vs. Union of India [AIR 2018 SC 3354]*

3. ಪ್ರಕರಣ ದಾಖಲಾಗುತ್ತಿದ್ದಂತೆ ಆ ಠಾಣಾಧಿಕಾರಿಯು ನೋಡಲ್ ಅಧಿಕಾರಿ ಅವರ ಗಮನಕ್ಕೆ ತರಬೇಕಾದ್ದು ಅವರ ಕರ್ತವ್ಯವಾಗಬೇಕು. ಇದರಿಂದ ಸಂತ್ರಸ್ಥರ ಕುಟುಂಬಗಳ ಸದಸ್ಯರಿಗೆ ಆಗಬಹುದಾಗ ಕಿರುಕುಳವನ್ನು ತಪ್ಪಿಸುವುದು ನೋಡಲ್ ಅಧಿಕಾರಿಯ ಜವಾಬ್ಧಾರಿಯಾಗಬೇಕು. _Tehseen Poonawala vs. Union of India [AIR 2018 SC 3354]_

4. ಇಂಥಹ ಪ್ರಕರಣಗಳಲ್ಲಿ ಕರ್ತವ್ಯ ನಿಷ್ಠ ನೋಡಲ್ ಅಧಿಕಾರಿ ಖುದ್ದು ತನಿಖೆ ನಡೆಸಬೇಕು. ಕೇಸು ದಾಖಲಾದ ನಂತರ ಕಾನೂನಿನನ್ವಯ ಆರೋಪಿಯ ಬಂಧಿಸಿದ ಅಥವಾ ಎಫ್ ಐ ಆರ್ ಹಾಕಿದ ನಂತರ ನಿರ್ಧಿಷ್ಠ ಸಮಯದಲ್ಲಿ ಚಾರ್ಜ್ ಶೀಟ್ ಹಾಕಬೇಕು. _TehseenPoonawala vs. Union of India [AIR 2018 SC 3354]_

5. ವಿಶೇಷವಾಗಿ ಜಾತಿ ನಿಂದನೆಯಂಥಹ ಪ್ರಕರಣಗಳಲ್ಲಿ ಪ್ರಿವೆನ್ಷನ್ ಆಫ್ ಅಟ್ರಾಸಿಟೀಸ್ ಆಕ್ಟ್ 1989 ರ ಅನ್ವಯ ತಕ್ಷಣ ಎಫ್ ಐ ಆರ್ ದಾಖಲಿಸಬೇಕು.

6. ಗುಂಪು ಗಲಭೆ ಮತ್ತು ಹತ್ಯೆಯಂತಹ ಪ್ರಕರಣಗಳನ್ನು ತಡೆಯುವಲ್ಲಿ ಅಥವಾ ತನಿಖೆ ಮಾಡುವಲ್ಲಿ, ತ್ವರಿತವಾಗಿ ಘಟನೆಗೆ ಸಾಕ್ಷಿಯಾದವರನ್ನು ಪತ್ತೆ ಮಾಡುವಲ್ಲಿ ವಿಫಲವಾದ ಅಧಿಕಾರಿಗಳು ತಿಳಿದೂ ಮಾಡಿರುವ ಉದಾಸೀನವೆಂದೂ, ಕರ್ತವ್ಯ ಲೋಪವೆಂದೂ ಪರಿಗಣಿಸಿ ಇಲಾಖಾ ಕ್ರಮಕ್ಕೂ ಮೀರಿದ ಸೇವಾ ನಿಯಮಗಳಡಿಯಲ್ಲಿ ಕ್ರಮ ಕೈಗೊಳ್ಳಬೇಕು. ಇಲಾಖಾ ಕ್ರಮವು ಸಾಮಾನ್ಯವಾಗಿ ಆರು ತಿಂಗಳಿನಲ್ಲಿ ತನ್ನ ತನಿಖೆ ಮುಗಿಸುತ್ತದೆ. _Tehseen Poonawala vs. Union of India [AIR 2018 SC 3354]_

7. ಹಿಂಸಾತ್ಮಕ ಚಟುವಟಿಕೆಯಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಸ್ತಿ ಪಾಸ್ತಿ ನಷ್ಟವಾಗಿದ್ದಲ್ಲಿ, ಅದು ಯಾವುದೇ ಒಬ್ಬ ವಕ್ತಾರನಿಂದಲೋ ಅಥವಾ ಸಾಮಾಜಿಕ ಜಾಲತಾಣದ ಮುಖೇನವೋ ಅಥವಾ ಸಂಸ್ಥೆಗಳಿಂದಲೋ ಅಂಥವರ ವಿರುದ್ಧ ಸೆಕ್ಷನ್ 153 ಎ, 295 ಎ 298 ಮತ್ತು 425 ಐಪಿಸಿ 1860 ಅಡಿ ಕೇಸು ದಾಖಲಿಸಿಕೊಳ್ಳಬೇಕು. _Kodungallur Film Society and Ors. vs. Union of India (UOI) and Ors. [(2018) 10 SCC 713]_

8. ಯಾವುದೇ ಹಿಂಸೆ ಪ್ರಕರಣದಲ್ಲಿ ಆಸ್ತಿಪಾಸ್ತಿ ನಷ್ಟವಾಗಿದ್ದಲ್ಲಿ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳು ಎಫ್ ಐ ಆರ್ ದಾಖಲಿಸಿಕೊಳ್ಳಬೇಕು. ನಿಗಧಿತ ಅವಧಿಯಲ್ಲಿ ತನಿಖೆ ನಡೆಸಬೇಕು. ಆ ಸಂಬಂಧ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ಯಾವುದೇ ಘನವಾದ ಕಾರಣವಿಲ್ಲದೆ ತನಿಖೆ ವಿಳಂಭವಾದಲ್ಲಿ ಅಥವಾ ಮಾಡದಿದ್ದಲ್ಲಿ ಅದನ್ನು ಕರ್ತವ್ಯದ ನಿರ್ಲಕ್ಷ್ಯವೆಂದು ಪರಿಗಣಿಸಬೇಕು ತತ್ಸಂಭಂದ ಇಲಾಖಾ ಕ್ರಮ ಕೈಗೊಳ್ಳಬೇಕು. _Kodungallur Film Society and Ors. vs. Union of India (UOI) and Ors. [(2018) 10 SCC 713]_

**ಚುನಾಯಿತ ಶಾಸಕಾಂಗದ ಸದಸ್ಯರು**

1. ಮತಾಂತರ ನಿಷೇಧ ಕಾಯಿದೆ ಮಂಡಿಸುವುದನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ ನಲ್ಲಿ ವಿರೋಧಿಸಬೇಕು.

**ನಾಗರೀಕ ಸಮಾಜದ ಪ್ರತಿ ವ್ಯಕ್ತಿಯೂ**

1. ಕ್ರೈಸ್ತ ಸಮುದಾಯಕ್ಕೆ ತಮ್ಮ ಬೆಂಬಲ ಪ್ರದರ್ಶಿಸಬೇಕು ಹಾಗೂ ಕಾನೂನು ನೆರವನ್ನು ನೀಡಬೇಕು.
2. ಮತಾಂತರ ನಿಷೇಧ ಕಾಯಿದೆಯನ್ನು ವಿರೋಧಿಸಬೇಕು
3. ಜೊತೆಗೂಡಿ ಬದುಕುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಜಾತಿ ಮತ್ತು ಸಮುದಾಯಗಳಲ್ಲಿನ ಒಡಕುಗಳನ್ನು ತೊಡೆದುಹಾಕಿ ಒಗ್ಗಟ್ಟು ಮೂಡಿಸಬೇಕು.
4. ಎಲ್ಲ ಸಮುದಾಯಗಳು ಭಾಗವಹಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ತನ್ಮೂಲಕ ಎಲ್ಲಾ ಸಮುದಾಯಗಳು ಭ್ರಾತೃತ್ವದ ನೆಲೆಯಲ್ಲಿ ಬದುಕುವುದನ್ನು ಪ್ರೋತ್ಸಾಹಿಸಿದಂತಾಗುತ್ತದೆ.
5. ದ್ವೇಷ ಅಪರಾಧಗಳು ನಡೆಯುವ ಸಂದರ್ಭದಲ್ಲಿ ಸಾರ್ವಜನಿಕರು ಮಧ್ಯಸ್ಥಿಕೆ ವಹಿಸಬೇಕೆಂದು ಅರಿವು ಮೂಡಿಸಬೇಕು. ಇದರಿಂದ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸಿದಂತಾಗುತ್ತದೆ.

**ಮಾಧ್ಯಮ ಮತ್ತು ಸ್ವಯಂ ನಿಯಂತ್ರಣಕ್ಕೊಳಪಡುವ ಸಂಸ್ಥೆಗಳು**

1. ಜಾಹೀರಾತು ನಿಯಮಗಳು ಮತ್ತು ನೀತಿಗಳಿಗೆ ಬದ್ಧವಾಗಿರಬೇಕು.
2. ಬಲವಂತದ ಮತಾಂತರವೆಂಬ ಕಟ್ಟುಕಥೆಯನ್ನು ವೈಭವೀಕರಿಸಬಾರದು.
3. ದ್ವೇಷ ಅಪರಾಧಗಳನ್ನು ಹೆಚ್ಚು ವರದಿ ಮಾಡಬೇಕು. ರಾಜ್ಯದ ಜನತೆಗೆ ವಸ್ತುನಿಷ್ಠ ವರದಿಗಳು ಸಿಗಬೇಕು.
4. ಸುದ್ದಿ ಚಿತ್ತರ ಮತ್ತು ಡಿಜಿಟಲ್ ಸ್ಟ್ಯಾಂಡರ್ಡ್ ಅಥಾರಿಟಿ ಹಾಗೂ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿಯು ಯಾವುದೇ ಮಾಧ್ಯಮ ಪ್ರಸರಣದ ನೀತಿ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಅಂಥವರ ವಿರುದ್ಧ ಕ್ರಮ ಕೈಗೊಳ್ಳಬೇಕು.

**ಮಾನವ ಹಕ್ಕು ಆಯೋಗಳು**

**ರಾಜ್ಯ ಮಾನವ ಹಕ್ಕುಗಳ ಆಯೋಗ ಮತ್ತು ರಾಜ್ಯ ಅಲ್ಪಸಂಖ್ಯಾತರ ಆಯೋಗ ಹಿಂದುತ್ವದ ಗುಂಪುಗಳು ಮಾಡಿರುವ ಮಾನವ ಹಕ್ಕುಗಳ ಉಲ್ಲಂಘನೆ ವಿರುದ್ಧ ಕ್ರಮ ಕೈಗೊಳ್ಳಲು ಸರಕಾರದ ಸಂಬಂಧಪಟ್ಟ ವಿವಿಧ ಇಲಾಖೆಗಳಿಗೆ ಆದೇಶ ನೀಡಬೇಕು.**

| ಕ್ರಮ ಸಂಖ್ಯೆ | ಘಟನೆಯ ದಿನಾಂಕ | ಘಟನೆಯ ಸ್ಥಳ | ವಿವರ | ಎಫ್.ಐ.ಆರ್ ವಿವರ (ಏನಾದರೂ ಇದ್ದಲ್ಲಿ) (ಎಫ್.ಐ.ಆರ್. ನಂ./ ದಿನಾಂಕ/ ಸೆಕ್ಷನ್) | ಫೋಟೋ, ವಿಡಿಯೋ ಡಾಕ್ಯುಮೆಂಟ್ ಲಿಂಕ್ | ಕ್ರೌರ್ಯ ವಿವರ |
|---|---|---|---|---|---|---|
| 1 | 03/01/21 | ಕೊಪ್ಪಳ, ಕರ್ನಾಟಕ | ಕ್ರೈಸ್ತ ಧರ್ಮೀಯರೊಬ್ಬರ ಮನೆಯ ಹೊರಗೆ ನಡೆದಿರುವ ಘಟನೆ ಇದು. ಸುಮಾರು ಹತ್ತಿಪ್ಪತ್ತು ಜನರ ಗುಂಪೊಂದು ಇಬ್ಬರು ಪಾದ್ರಿಗಳನ್ನು ಮನೆಯ ಹೊರಗಿನ ತೆಂಗಿನ ಮರದ ಬಳಿ ಕರೆದೊಯ್ದು ಥಳಿಸಿದ್ದಾರೆ. ಇವರೀರ್ವರಲ್ಲಿ ಒಬ್ಬರ ಮೇಲೆ ಬರ್ಭರವಾಗಿ ಥಳಿಸಿದ್ದು ಅವರ ಕಾಲಿನ ಮೂಳೆ ಮುರಿದುಹೋಗಿದೆ.<br><br>ನಂತರ 5 ಮಂದಿ ಕ್ರಿಶ್ಚಿಯನ್ನರನ್ನು ಒಂದು ಕೋಣೆಯೊಳಗೆ ಬಂಧಿಸಿ ಅವರ ಫೋಟೋಗಳು ಮತ್ತು ವೀಡಿಯೊಗಳನ್ನು ತೆಗೆದುಕೊಂಡು ಜೈ ಶ್ರೀ ರಾಮ್ ಮತ್ತು ಜೈ ಸೇವಾಲಾಲ್ ಎಂಬ ಘೋಷಣೆ ಕೂಗುವಂತೆ ಒತ್ತಾಯಿಸಿದ್ದಾರೆ.<br>ಒಬ್ಬ ಪಾದ್ರಿಗೆ ಪುನಃ ಚರ್ಚಿಗೆ ಬಂದಲ್ಲಿ ಕೊಂದುಬಿಡುವುದಾಗಿ ಬೆದರಿಕೆ ಹಾಕಿದ್ದಾರೆ.<br><br>ಜನವರಿ 5 ರಂದು ಬೆಳಗ್ಗೆ 10 ಗಂಟೆಗೆ ಪಾದ್ರಿಗಳು, ಕೆಲವು ಅನುಯಾಯಿಗಳು ಮತ್ತು ಅವರ ವಕೀಲರು ಪೊಲೀಸ್ ಠಾಣೆಗೆ ಹೋಗಿ ಪಿಎಸ್ಐ ಬರುವವರೆಗೆ ಮಧ್ಯಾಹ್ನ 3 ಗಂಟೆಯ ತನಕ ಕಾದಿದ್ದಾರೆ. ಆಗ ಸುಮಾರು 200 ಹಿಂದುತ್ವ ತೀವ್ರವಾದಿಗಳ ದೊಡ್ಡ ಗುಂಪು ಜಮಾಯಿಸಿ ಇಬ್ಬರು ಪಾದ್ರಿಗಳ ವಿರುದ್ಧ ಪ್ರತಿ ದೂರು ದಾಖಲಿಸಲು ಪೊಲೀಸರ ಸಹಾಯ ಪಡೆದರು. ಅಂತಿಮವಾಗಿ ಅವರಿಗೆ ಜಾಮೀನು ನೀಡಲಾಯಿತು. | ಎಫ್.ಐ.ಆರ್ (ಪರವಾಗಿ)<br>ಎಫ್.ಐ.ಆರ್ ನಂ. 04/2021<br>ದಿನಾಂಕ: 04/01/2021<br>ಸೆಕ್ಷನ್: ಐಪಿಸಿ 507, 504, 147, 448, 143, 149, 323 ಮತ್ತು 354<br>ಠಾಣೆ: ಕೊಪ್ಪಳ ಗ್ರಾಮಾಂತರ | | ತೊಂದರೆ, ಬೆದರಿಕೆ ಮತ್ತು ಕಿರುಕುಳ, ದೈಹಿಕ ಹಲ್ಲೆ |
| 2 | 04/01/21 | ಬಾಳೆಹೊನ್ನೂರು ಚಿಕ್ಕಮಗಳೂರು, ಕರ್ನಾಟಕ | ಜನವರಿ 4, 2021 ರಂದು ಕ್ರಿಶ್ಚಿಯನ್ ಸಮುದಾಯದ ಕೆಲವರು ಮತ್ತೊಬ್ಬ ಕ್ರಿಶ್ಚಿಯನ್ನರ ಮನೆಗೆ ತೆರಳುತ್ತಿದ್ದಾಗ ಅವರ ಮೇಲೆ ದಾಳಿ ಮಾಡಲಾಗಿದೆ. ಕ್ರಿಶ್ಚಿಯನ್ನರು ತಮ್ಮ ಪ್ರಾರ್ಥನೆಯನ್ನು ಮುಗಿಸಿ ಬಂದ ಸಮಯದಲಿ ಅವರಿಗೆ ಬೆದರಿಕೆ ಹಾಕಿ ಜಾತಿ ನಿಂದನೆ ಮಾಡಲಾಗಿದೆ. ಈ ಅಪರಾದ ಎಸಗಿದವರ ವಿರುದ್ಧ ಅಪರಾಧ ಸಂಖ್ಯೆ 0003/2021 ರಲ್ಲಿ ಎಫ್ ಐ ಆರ್ | ಎಫ್.ಐ.ಆರ್ (ಪರವಾಗಿ)<br>ಎಫ್.ಐ.ಆರ್ ನಂ. 0003/2021<br>ದಿನಾಂಕ: 01/01/2021<br>ಸೆಕ್ಷನ್: ಐಪಿಸಿ 1860(ಗ,/- 504,307,114,34)<br>ಠಾಣೆ: ಚಿಕ್ಕಮಗಳೂರು ಗ್ರಾಮಾಂತರ<br>ಎಫ್.ಐ.ಆರ್ (ವಿರುದ್ಧ)<br>ಎಫ್.ಐ.ಆರ್ ನಂ. 0002/2021 | | ತೊಂದರೆ, ಬೆದರಿಕೆ ಮತ್ತು |

| | | | | | | |
|---|---|---|---|---|---|---|
| | | | ದಾಖಲಿಸಲಾಗಿದೆ. ಕ್ರಿಶ್ಚಿಯನ್ನರ ವಿರುದ್ಧ ಅಪರಾಧ ಸಂಖ್ಯೆ 0002/2021 ರಲ್ಲಿ ಮತಾಂತರದ ಸುಳ್ಳು ಆರೋಪದ ಮೇಲೆ ಪ್ರಕರಣವನ್ನು ದಾಖಲಿಸಲಾಗಿದೆ. ಅವರು ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು ಮತ್ತು ಅದನ್ನು 22 ಜನವರಿ 2021 ರಂದು ತಿರಸ್ಕರಿಸಲಾಯಿತು. | ದಿನಾಂಕ: 01/01/2021 ಸೆಕ್ಷನ್ ಐಪಿಸಿ 1860 (ಗ/- 143,147,148,324,427,149) ಠಾಣೆ: ಚಿಕ್ಕಮಗಳೂರು ಗ್ರಾಮಾಂತರ | | ಕಿರುಕುಳ |
| 3 | 25/01/21 | ಪಾಂಡವಪುರ, ಮಂಡ್ಯ ಜಿಲ್ಲೆ ಕರ್ನಾಟಕ | ಒಂದು ದಿನ ಇಬ್ಬರು ಕ್ರಿಶ್ಚಿಯನ್ ಸಹೋದರರು ಮಗುವಿನ ನಾಮಕರಣ ಸಮಾರಂಭಕ್ಕಾಗಿ ಚರ್ಚ್‌ನಲ್ಲಿ ಪ್ರಾರ್ಥನಾ ಸಭೆಯನ್ನು ನಡೆಸುತ್ತಿದ್ದರು. ಕೇಕ್ ಕತ್ತರಿಸಿ ಆ ಫೋಟೋಗಳನ್ನು ಫೇಸ್ ಬುಕ್ ನಲ್ಲಿ ಹಂಚಿಕೊಂಡಿದ್ದಾರೆ. ಈ ವಿಷಯ ಗ್ರಾಮದ ಕೆಲ ಬಲಪಂಥೀಯ ತೀವ್ರವಾದಿಗಳ ಗಮನಕ್ಕೆ ಬಂದಿದೆ.<br><br>ಅದರ ನಂತರ ಮತ್ತೊಂದು ದಿನ (ಜನವರಿ 24) ಕ್ರಿಶ್ಚಿಯನ್ನರ ಮೇಲೆ ಅವರ ಮನೆಗಳ ಬಳಿಯೇ ದಾಳಿ ಮಾಡಲಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುಂಪೊಂದು ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನು ಅವಾಚ್ಯವಾಗಿ ನಿಂದಿಸಿ ಬೆದರಿಕೆ ಹಾಕಿದ್ದಾರೆ. ತೀವ್ರವಾದಿಗಳು ಪೊಲೀಸರನ್ನು ಕರೆಸಿದಾಗ ಅವರು ಕೆಲವು ಕ್ರಿಶ್ಚಿಯನ್ನರನ್ನು ಬಂಧಿಸಿದರು. ಈ ವಿಷಯವನ್ನು ಸಂಜೆಯ ವೇಳೆಗೆ ಪಾದ್ರಿಗೆ ತಿಳಿಸಿದ ತಕ್ಷಣ ಅವರು ಕೆಲವು ಅನುಯಾಯಿಗಳೊಂದಿಗೆ ಪೊಲೀಸ್ ಠಾಣೆಗೆ ತೆರಳಿದರು. ಅಲ್ಲಿಯೂ ಗುಂಪು ನೆರೆದಿತ್ತು. ಕ್ರಿಶ್ಚಿಯನ್ನರ ಪರವಾಗಿ ನಿಲ್ಲಲು ಪ್ರಯತ್ನಿಸುತ್ತಿದ್ದ ಕೆಲವು ಮಹಿಳೆಯರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಲ್ಲದೆ ಬೆದರಿಕೆ ಹಾಕುತ್ತಿದ್ದರು. ಅವರು ನಮ್ಮ ವಿರುದ್ಧ ದೂರು ನೀಡಲು ಪ್ರಯತ್ನಿಸಿದರುಆದರೆ ಹಾಗೆ ಮಾಡುವ ಅವಕಾಶವನ್ನು ನಿರಾಕರಿಸಲಾಯಿತು. ಮಹಿಳೆಯೊಬ್ಬರ ಲ್ಯಾಪ್‌ಟಾಪ್ ವಶಪಡಿಸಿಕೊಳ್ಳಲಾಯಿತು. ಒಬ್ಬ ಅಧಿಕಾರಿ ನಾರಾಯಣಗೌಡ (ಸಚಿವರು) ಆಗಲೇ ಕರೆ ಮಾಡಿ ಕ್ರೈಸ್ತರನ್ನು ಜೈಲಿನಲ್ಲಿಡುವಂತೆ ಪೊಲೀಸರಿಗೆ ಸೂಚಿಸಿದ್ದಾರೆ ಎಂದು ಹೇಳಿದರು. ಕ್ರಿಶ್ಚಿಯನ್ನರು "ಶರಣಾಗತರಾಗಿದ್ದಾರೆ" | ಎಫ್.ಐ.ಆರ್ (ವಿರುದ್ಧ)<br>ಎಫ್.ಐ.ಆರ್ ನಂ: 0037/2021<br>ದಿನಾಂಕ: 24/01/2021 | | ತೊಂದರೆ, ಬೆದರಿಕೆ ಮತ್ತು ಕಿರುಕುಳ, ದೈಹಿಕ ಹಲ್ಲೆ, ಬಂಧನ |

| | | | | | | |
|---|---|---|---|---|---|---|
| | | | ಎಂದು ಅಧಿಕಾರಿಯೊಬ್ಬರು ಸಚಿವರ ಕಚೇರಿಗೆ ತಿಳಿಸಿರುವುದನ್ನು ನಾವು ಖುದ್ದು ನೋಡಿದೆವು. ಈ ಬಗ್ಗೆ ಪತ್ರಿಕೆಯಲ್ಲೂ ಹಾಗೆಯೇ ವರದಿಯಾಗಿದೆ. 2 ಮಹಿಳೆಯರು, 2 ಅಪ್ರಾಪ್ತ ವಯಸ್ಕರು, ಒಂದು ಚಿಕ್ಕ ಮಗು ಮತ್ತು ಹದಿಹರೆಯದವರು ಸೇರಿದಂತೆ ಆರು ಜನರನ್ನು ಬಂಧಿಸಲಾಗಿದೆ.<br><br>ಆಗ ಇನ್ಸ್‌ಪೆಕ್ಟರ್ ಪ್ರಭಾಕರ್ ಅವರು ಪಾದ್ರಿಯೊಂದಿಗೆ ಅಸಭ್ಯವಾಗಿ ಮಾತನಾಡಿದರು. “ನಮ್ಮ ಬಳಿ ಇರುವ ಲ್ಯಾಪ್‌ಟಾಪ್ ಒಳಗೆ ಏನು ಹಾಕಬೇಕೆಂದು ನಮಗೆ ತಿಳಿದಿದೆ. ಯಾವುದೇ ಪುರಾವೆಗಳಿಲ್ಲದಿದ್ದರೂ, ನಿಮ್ಮ ವಿರುದ್ಧದ ಪ್ರಕರಣವನ್ನು ಹೇಗೆ ಪ್ರಬಲಗೊಳಿಸಬೇಕೆಂದು ನಮಗೆ ತಿಳಿದಿದೆ ಅಂತೆಯೇ ಕ್ರಿಶ್ಚಿಯನ್ನರು ಎಂದಿಗೂ ಜೈಲಿನಿಂದ ಹೊರಬರಲಾಗದಂತೆ ಮಾಡುವುದೂ ನಮಗೆ ಗೊತ್ತಿದೆ” ಎಂದು ಹೇಳಿದ್ದಾರೆ.<br><br>ಕ್ರಿಶ್ಚಿಯನ್ನರ ಪರ ವಕೀಲರು ಅವರ ಪರ ಜಾಮೀನಿಗಾಗಿ ವಾದಿಸಲು ಪ್ರಯತ್ನಿಸುತ್ತಿದ್ದರೂ ಪೊಲೀಸ್ ಠಾಣೆಯಿಂದ ಅವರಿಗೆ ನಿಯೋಜಿಸಲಾದ ವಕೀಲರು ನಮಗೆ ಶ್ಯೂರಿಟಿ ನೀಡಬೇಡಿ ಎಂದು ಹೇಳಿದರು. ಪೊಲೀಸ್ ಅಧಿಕಾರಿಯೊಬ್ಬರು ರೂ.<br>35,000 ಪಡೆದು, ಅವರಿಗೆ ರಶೀದಿಯನ್ನೂ ನೀಡದೆ ಅದರ ಬದಲಿಗೆ ಅವರಿಗೆ ಸಹಾಯ ಮಾಡುವುದಾಗಿ ಭರವಸೆ ನೀಡಿದರು.<br><br>2 ಮಹಿಳೆಯರು ಮತ್ತು 2 ಮಕ್ಕಳಿಗೆ ಜಾಮೀನು ನೀಡಲಾಗಿದೆ. ಇಬ್ಬರು ಅಪ್ರಾಪ್ತ ವಯಸ್ಕರನ್ನು ಮಂಡ್ಯದ ಜೈಲಿಗೆ ಕರೆದೊಯ್ಯಲಾಯಿತು. ಅಲ್ಲಿ ಅವರಿಗೆ ಜೈಲಿನಲ್ಲಿ ಸ್ಥಳವಿಲ್ಲ ಎಂದು ಹೇಳಲಾಯಿತು. ನಂತರ ಜಾಮೀನು ಸಿಗುವವರೆಗೆ ಒಂದು ವಾರ ಮೈಸೂರು ಬಾಲಾಪರಾಧಿ ಜೈಲಿನಲ್ಲಿ ಇರಿಸಲಾಗಿತ್ತು. ಅವರೆಲ್ಲರೂ ತಕ್ಷಣವೇ ತಮ್ಮ ಹುಟ್ಟೂರು ಬಳ್ಳಾರಿಗೆ ಮರಳಿದರು. ಅವರು ಕೇವಲ ದೈನಂದಿನ ಕೂಲಿಗಾಗಿ ಮಾತ್ರ ತೆರಳಿದ್ದರು. | | | |

| | | | | | | |
|---|---|---|---|---|---|---|
| 4 | 31/01/21 | ಹಾರೋಹಳ್ಳಿ ಕನಕಪುರ, ರಾಮನಗರ ಜಿಲ್ಲೆ ಕರ್ನಾಟಕ | ಒಂದು ಭಾನುವಾರದಂದು ಪಾದ್ರಿಯೊಬ್ಬರು ಪ್ರಾರ್ಥನಾ ಮಂದಿರವಾಗಿ ಬಳಸುವ ಬಾಡಿಗೆ ಮನೆಯಲ್ಲಿ ಸುಮಾರು 60 ಕ್ರೈಸ್ತರಿಗೆ ಸಾಮೂಹಿಕವಾಗಿ ಸಭೆ ನಡೆಸುತ್ತಿದ್ದರು.<br>ಏಕಾಏಕಿ ಆರು ಮಂದಿ ಒಳ ನುಗ್ಗಿ ಒಬ್ಬ ಪಾದ್ರಿಯನ್ನು ಥಳಿಸಲು ಶುರುವಿಟ್ಟರು. ಅವರನ್ನು ಹೊರಗೆ ಎಳೆದೊಯ್ದರು. ಅಲ್ಲಿದ್ದ ಅನೇಕ ಅನುಯಾಯಿಗಳು ಗುಂಪನ್ನು ತಡೆಯಲು ಪ್ರಯತ್ನಿಸುತ್ತಿದ್ದರೂ ಪಾದ್ರಿ ಮತ್ತು ಇತರ ಕೆಲವು ಕ್ರಿಶ್ಚಿಯನ್ನರ ಮೇಲೆ ದಾಳಿ ಮುಂದುವರೆಸಿದರು. ಥಳಿತಕ್ಕೊಳಗಾದವರಲ್ಲಿ ಕೇವಲ 14 ವಯಸ್ಸಿನ ಪಾದ್ರಿಯ ಮಗಳೂ ಸೇರಿದ್ದಳು. ಆಕೆಯ ಮೇಲೆ ಅಮಾನುಷವಾಗಿ ಹಲ್ಲೆ ನಡೆಸಿ ಹೊಟ್ಟೆಗೆ ಹಲವು ಬಾರಿ ಒದ್ದರು. ಇದರಿಂದ ಆಕೆಯ ಯೋನಿಯಲ್ಲಿ ರಕ್ತಸ್ರಾವವಾಗಿತ್ತು. ಅಂದು 27 ಜನರನ್ನು ಥಳಿಸಲಾಗಿದೆ ಮತ್ತು ಒಬ್ಬ ಪಾದ್ರಿ ಗಾಯಗೊಂಡಿದ್ದಾರೆ. ಪೊಲೀಸ್ ಠಾಣೆಗೆ ಕೆಲವು ಅನುಯಾಯಿಗಳು ಹೋದರೆ ಮತ್ತೆ ಕೆಲವು ಅನುಯಾಯಿಗಳು ಮತ್ತು ಗಾಯಗೊಂಡ ಪಾದ್ರಿ ಹಾಗೂ ಇತರೆ ಕ್ರಿಶ್ಚಿಯನ್ನರನ್ನು ಆಸ್ಪತ್ರೆಗೆ ಕರೆದೊಯ್ಯಲು ಸಹಾಯ ಮಾಡಿದರು.<br><br>ಅವರು ಕೆಲವು ಗೂಂಡಾಗಳ ವಿರುದ್ಧ ಎಫ್ಐಆರ್ ದಾಖಲಿಸಿದರು. ಆದರೆ ದೊಂಬಿಯಲ್ಲಿದ್ದ ಜನರು ಪಾದ್ರಿಗಳ ವಿರುದ್ಧ ಸೆಕ್ಷನ್ 295, 295 ಎ ಮತ್ತು ಸೆಕ್ಷನ್ 153 ಎ ಅಡಿಯಲ್ಲಿ ಎಫ್ಐಆರ್ ದಾಖಲಿಸಲು ಅವಕಾಶ ನೀಡಲಾಯಿತು.<br><br>"ಅವರನ್ನು ಬಂಧಿಸಲಾಗಿದೆಯೇ ಎಂದು ನಮಗೆ ಇನ್ನೂ ತಿಳಿದಿಲ್ಲ. ಮಹಿಳೆಯರು ಮತ್ತು ಮಕ್ಕಳು ಕೇವಲ ದೈಹಿಕ ಹಲ್ಲೆಯಿಂದ ಮಾತ್ರವಲ್ಲ ಅವರ ಪೂಜಾ ಸ್ಥಳದ ಮೇಲೆ ಇಂತಹ ಕ್ರೂರ ಹಿಂಸಾತ್ಮಕ ಆಕ್ರಮಣವನ್ನು ಕಣ್ಣಾರೆ ನೋಡಿದ್ದರಿಂದ ತೀವ್ರ ಆಘಾತಕ್ಕೊಳಗಾಗಿದ್ದಾರೆ." ಎಂದು ಪಾದ್ರಿ ಸತೀಶ್ ಹೇಳಿದರು. | ಎಫ್.ಐ.ಆರ್ (ಪರವಾಗಿ) ಎಫ್.ಐ.ಆರ್ ನಂ. 0017/2021<br>ದಿನಾಂಕ: 31/01/2021<br>ಸೆಕ್ಷನ್: ಐಪಿಸಿ 143,323, 354, 448, 506, 504 ಮತ್ತು 149 ಸೆಕ್ಷನ್ 3(1)(ಡಿ) ಮತ್ತು 3(1)() ೨ ಖಅ/ಖಖ ಕಾಯ್ದೆ.<br><br>ಠಾಣೆ: ಹಾರೋಹಳ್ಳಿ<br><br>ಎಫ್.ಐ.ಆರ್ (ವಿರುದ್ಧ) ಎಫ್.ಐ.ಆರ್ ನಂ. 0018/2021<br>ದಿನಾಂಕ :01/02/2021<br>ಸೆಕ್ಷನ್: 153/ಎ, 295, 295ಎ<br>ಠಾಣೆ: ಹಾರೋಹಳ್ಳಿ | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ದೊಂಬಿ ಗಲಾಟೆ/ ಕ್ರೌರ್ಯ, ಆಸ್ತಿ ನಾಶ, ದೈಹಿಕ ಹಲ್ಲೆ, ಧಾರ್ಮಿಕ ಸಭೆಗಳಿಗೆ ನಿರ್ಬಂಧ |
| 5 | 28/02/21 | ಚಿತ್ತಾಪುರ ಗುಲ್ಬರ್ಗಾ, ಕರ್ನಾಟಕ | ಪಾದ್ರಿಯೊಬ್ಬರು ಪ್ರಾರ್ಥನೆಯ ಸಮಯದಲ್ಲಿ ಅನುಯಾಯಿಯೊಬ್ಬರ ಮನೆಗೆ ಪ್ರಾರ್ಥನಾ ಸಭೆಗೆ ಹೋಗುತ್ತಿದ್ದಾಗ 20 ಜನರ ಗುಂಪೊಂದು ಬಂದು ನಮಗೆ ಮೈಕ್ ಆಫ್ ಮಾಡುವಂತೆ ಧಮಕಿ ಹಾಕಿದರು. ಗ್ರಾಮಸ್ಥರನ್ನು ಬಹಿಷ್ಕರಿಸುವ ಬೆದರಿಕೆ ಹಾಕಿದರು. ಅಲ್ಲಿನ ಮುಖ್ಯ ದ್ವಾರವನ್ನು ಮುರಿದರು. ಎಲ್ಲರನ್ನೂ ಜನರು ಅವಾಚ್ಯ ಶಬ್ದಗಳಿಂದ ನಿಂದಿಸುವಾಗ ಅನೇಕ ಜನರನ್ನು ಥಳಿಸಿದರು. ಗುಂಪಿನ ಕೆಲವು ಸದಸ್ಯರಿಂದ ಮಹಿಳೆಯರ | ಎಫ್.ಐ.ಆರ್(ಪರವಾಗಿ) ಎಫ್.ಐ.ಆರ್ ನಂ: 0022/2021<br>ದಿನಾಂಕ: 1/03/2021<br>ಸೆಕ್ಷನ್:ಯು/ಎಸ್- 143, 147, 148, 448, 323, 354, 295ಎ, 427, 504, 506, 149<br>ಠಾಣೆ: ಚಿತ್ತಾಪುರ ಸರ್ಕಲ್. | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಧಾರ್ಮಿಕ ಸಭೆಗಳಿಗೆ ನಿರ್ಬಂಧ, ದೊಂಬಿ ಗಲಾಟೆ/ |

| | | | | | | |
|---|---|---|---|---|---|---|
| | | | ಮೇಲೆ ಲೈಂಗಿಕ ದೌರ್ಜನ್ಯವೂ ನಡೆದಿದೆ. | | | |
| 6 | 01/03/21 | ಬೈಲಹೊಂಗಲ, ಬೆಳಗಾಮ್ ಕರ್ನಾಟಕ | ಪಾದ್ರಿಯೊಬ್ಬರು ಒಬ್ಬ ಹುಡುಗನ ಹುಟ್ಟುಹಬ್ಬಕ್ಕಾಗಿ ಸಣ್ಣದೊಂದು ಸಭೆಯಲ್ಲಿ ಪ್ರಾರ್ಥನೆ ನೆರವೇರಿಸುತ್ತಿದ್ದರು. ಏಕಾಏಕಿ 40-50 ಮಂದಿ ಒಳ ನುಗ್ಗಿ ಪಾದ್ರಿ ಹಾಗೂ ಬಾಲಕನ ತಂದೆಗೆ ಥಳಿಸಿದ್ದಾರೆ. ಪೊಲೀಸರು ಬರುವವರೆಗೂ 45 ನಿಮಿಷಗಳ ಕಾಲ ಹಿಂಸಾಚಾರ ಮುಂದುವರೆಯಿತು. ಇಬ್ಬರು ಪಾದ್ರಿಗಳಿಗೆ ಗಾಯಗಳಾಗಿ ಮೂಳೆ ಮುರಿದಿದ್ದರಿಂದ ಅವರನ್ನು ಆಸ್ಪತ್ರೆಗೆ ಸೇರಿಸಲು ಬೆಳಗಾವಿಯ ಪಾಸ್ಟರ್ಸ್ ಅಸೋಸಿಯೇಶನ್‌ನ ಸದಸ್ಯರು ಸಹಾಯ ಮಾಡಿದರು.<br><br>ಪೊಲೀಸರು ಸಂತ್ರಸ್ತರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. | - | | ಬೆದರಿಕೆ, ತೊಂದರೆ, ಮತ್ತು ಕಿರುಕುಳ, ದೊಂಬಿ ಗಲಾಟೆ/ಕ್ರೌರ್ಯ, ದೈಹಿಕ ಹಲ್ಲೆ |
| 7 | 02/03/21 | ಬೆಂಗಳೂರು, ಕರ್ನಾಟಕ | 10 ರಿಂದ 15 ವರ್ಷಗಳ ಕಾಲ ವೃತ್ತಿಪರ ಕೊರಿಯರ್ ಸೇವೆಯಲ್ಲಿ ಕೆಲಸ ಮಾಡಿದ ವ್ಯಕ್ತಿಯೊಬ್ಬರು ಒಂದು ದಿನ ಕರ್ತವ್ಯದಲ್ಲಿದ್ದರು. ಕೆನರಾ ಬ್ಯಾಂಕ್‌ನಿಂದ ಬಂದಿದ್ದ ಪಾರ್ಸೆಲ್ ಒಂದಕ್ಕೆ ಕರಪತ್ರವನ್ನೂ ಲಗತ್ತಿಸಿದ. ಕೊರಿಯರ್ ಕಂಪನಿ ಮತ್ತು ಡೆಲಿವರಿ ಮಾಡುವ ವ್ಯಕ್ತಿಯ ವಿರುದ್ಧ ಬಲವಂತದ ಮತಾಂತರವನ್ನು ಆರೋಪಿಸಿದ ಗ್ರಾಹಕ (ಕೊರಿಯರ್ ಪಡೆದವ) ಫೇಸ್‌ಬುಕ್‌ನಲ್ಲಿ ಫೋಟೋವನ್ನು ಪೋಸ್ಟ್ ಮಾಡಿದ್ದಾರೆ.<br><br>ಪಾರ್ಸೆಲ್ ಕಳುಹಿಸಿದ ಕೆನರಾ ಬ್ಯಾಂಕ್ ವಿರುದ್ಧ ಗ್ರಾಹಕ ಬಗ್ಗೆ ದೂರು ನೀಡಿದ್ದಾರೆ. ಬ್ಯಾಂಕ್ ಕೊರಿಯರ್ ಕಂಪನಿಯ ವಿರುದ್ಧ ಬ್ಯಾಂಕ್ ದೂರು ದಾಖಲಿಸಿದೆ ಮತ್ತು ಕೊರಿಯರ್ ಕಂಪನಿಯು ಡೆಲಿವರಿ ಮಾಡುವ ವ್ಯಕ್ತಿಯ ವಿರುದ್ಧ ದೂರು ದಾಖಲಿಸಿದೆ. ಪೊಲೀಸರು ಆ ವ್ಯಕ್ತಿಯನ್ನು 36 ಗಂಟೆಗಳ ಕಾಲ ಬಂಧಿಸಿಟ್ಟರು. ತದನಂತರ ಯಾವುದೇ ಪರಿಹಾರ, ಇಎಸ್ಐ, ಪಿಎಫ್ ಕೊಡದೆ, ಕೆಲಸದಿಂದ ವಜಾ ಮಾಡಿರುವುದಕ್ಕೆ ಪತ್ರವೂ ಕೊಡದೆ ಕೊರಿಯರ್ ಬಾಯ್ ಅನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಕೆಲವು ವಾರಗಳವರೆಗೆ ಕೆಲಸ ಹುಡುಕಲು ಹೆಣಗಾಡಿದರು ಮತ್ತು ಈಗ ಕ್ಯಾಬ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದಾರೆ. | - | https://www.facebook.com/253397325221445/posts/861795227714982/ | ಬೆದರಿಕೆ, ತೊಂದರೆ, ಕಿರುಕುಳ, ಬಂಧನ |

| | | | | | | |
|---|---|---|---|---|---|---|
| 8 | 03/03/21 | ಸಾಲಗಾಮೆ<br>ಹಾಸನ<br>ಕರ್ನಾಟಕ | ಮಾರ್ಚ್ 3, 2021 ರಂದು ಕೆಲವು ಧಾರ್ಮಿಕ ತೀವ್ರವಾದಿಗಳು ಒಬ್ಬ ಪಾದ್ರಿಯ ಮನೆಗೆ ಹೋಗಿ ಪ್ರಾರ್ಥನಾ ಸಭೆಗಳನ್ನು ನಡೆಸಬಾರದು ಎಂದು ಬೆದರಿಕೆ ಹಾಕಿದರು. ಒಂದು ವೇಳೆ ಅವರ ಮಾತನ್ನು ಪಾಲಿಸದಿದ್ದಲ್ಲಿ ಹಿಗ್ಗಾ ಮುಗ್ಗಾ ಥಳಿಸುವುದಾಗಿ ಬೆದರಿಕೆ ಹಾಕಿದರು. ಪಾದ್ರಿ ತನ್ನ ಸಹಾಯಕ್ಕಾಗಿ ಹಾಸನ ಗ್ರಾಮಾಂತರ ಪೋಲೀಸರನ್ನು ಸಂಪರ್ಕಿಸಿದರು ಆದರೆ ಪೋಲೀಸರಿಂದ ಯಾವುದೇ ಗಣನೀಯವಾದ ಸಹಾಯವಾಗಲಿಲ್ಲ. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ |

| | | | | | | |
|---|---|---|---|---|---|---|
| 9 | 14/03/21 | ತಿಪಟೂರು, ತುಮಕೂರು | ಲಿಂಗಾಯಿತ ಸಮುದಾಯದವರೊಬ್ಬರಿಗೆ ಸೇರಿದ ಸ್ಥಳವೊಂದರಲ್ಲಿ ಕಳೆದ 14 ವರ್ಷಗಳಿಂದ ಒಬ್ಬ ಪಾದ್ರಿ ಮತ್ತು ಕೆಲವು ಕ್ರೈಸ್ಥ ಧರ್ಮದ ಅನುಯಾಯಿಗಳು ಪ್ರಾರ್ಥನೆ ಸಲ್ಲಿಸುತ್ತಿದ್ದರು. ಆರಂಭಿಕವಾಗಿ ಆತ ಯಾವುದೇ ತೊಂದರೆ ಕೊಟ್ಟಿರಲಿಲ್ಲ.<br>ಒಮ್ಮೆ ಪೊಲೀಸರು ಪ್ರಾರ್ಥನಾ ಸ್ಥಳಕ್ಕೆ ನುಗ್ಗಿ ಬಲವಂತವಾಗಿ ಮತಾಂತರ ಮಾಡಲಾಗುತ್ತಿದೆ ಎಂದು ಆರೋಪಿಸಿದರು ಮತ್ತು ಒಂದೇ ಸಮನೆ ಅವರ ಮೇಲೆ ಕೂಗಾಡುತ್ತಿದ್ದರು. ಪಾದ್ರಿ ಮತ್ತು ಕ್ರಿಶ್ಚಿಯನ್ ಧರ್ಮೀಯರ ಮಾತು ಕೇಳವೂ ಅವರು ಅವಕಾಶಕೊಡಲಿಲ್ಲ. ಅವರು 3 ವ್ಯಾನ್‌ಗಳನ್ನು ತರಿಸಿ 29 ಜನರನ್ನು ಪೊಲೀಸ್ ಠಾಣೆಗೆ ಕರೆದೊಯ್ದರು. ಅವರನ್ನು ಪೊಲೀಸ್ ಠಾಣೆಯಲ್ಲಿ ಕೂರಿಸಿ ಅವರ ಸಂಪರ್ಕ ಸಂಖ್ಯೆಗಳು/ ಫೋನ್ ನಂಬರ್ ಸ್ಥಳೀಯ ಮನೆಯ ವಿಳಾಸ ಮತ್ತು ಅವರು ಯಾವ ಜಾತಿಯಲ್ಲಿ ಜನಿಸಿದರು ಎಂದು ಕೇಳಿ ಅವರೆಲ್ಲರ ಹೇಳಿಕೆಗಳನ್ನು ಪಡೆದುಕೊಂಡರು.<br><br>ಪೊಲೀಸರು ಅನುಯಾಯಿಗಳಿಗೆ ಎಷ್ಟು ದುಡ್ಡು ಕೊಡುತ್ತೀದ್ದೀರೆಂದು ಪಾದ್ರಿಗಳನ್ನು ಪದೇ ಪದೇ ಕೇಳಿದರು. ಆದರೆ ಆ ರೀತಿಯ ಹಣವಿದ್ದರೆ ತಮ್ಮದೇ ಆದ ಪ್ರಾರ್ಥಾನಾ ಸ್ಥಳವನ್ನು ನಿರ್ಮಿಸಲು ಬಯಸುತ್ತಿದ್ದೆವು ಎಂದು ಪಾದ್ರಿಗಳು ವಿವರಿಸಲು ಪ್ರಯತ್ನಿಸಿದರು.<br><br>ನಾವು ಜನರ ಹೆಸರನ್ನು ಬದಲಾಯಿಸುತ್ತಿಲ್ಲ ಅಥವಾ ಯಾರನ್ನೂ ಬಲವಂತವಾಗಿ ಮತಾಂತರ ಮಾಡುತ್ತಿಲ್ಲ ಜೊತೆಗೆ ಯಾವುದೇ ತಪ್ಪು ಮಾಡುತ್ತಿಲ್ಲ ನಾವಿಲ್ಲಿ ಪ್ರಾರ್ಥನೆ ಮಾಡಲು ಅಷ್ಟೇ ಒಟ್ಟಿಗೆ ಸೇರುತ್ತೇವೆ ಎಂದು ಪಾದ್ರಿಗಳು ವಿವರಣೆ ನೀಡಿದರು.<br><br>ಇನ್ನು ಮುಂದೆ ಮನೆಗಳಲ್ಲಿ ಯಾವುದೇ ಪ್ರಾರ್ಥನೆ ಮಾಡಬಾರದೆಂದು ಪಿಎಸ್‌ಐ ಮನೋಜಯ ಎಚ್ಚರಿಸಿದರು.<br><br>ತಿಪಟೂರಿನ ಆರ್‌ಎಸ್‌ಎಸ್ ಮುಖಂಡರು ಪೊಲೀಸ್ ಠಾಣೆಗೆ ಬಂದು ಮಹಿಳೆಯರು ಹಾಗೂ ಇತರರ ಜೊತೆಗೆ ಬಹಳ ಕೆಟ್ಟದಾಗಿ ಮಾತನಾಡಿದರು. ಮಕ್ಕಳನ್ನೂ ಪೋಷಕರೊಂದಿಗೆ ಠಾಣೆಗೆ ಕರೆದೊಯ್ದರು. ಆರ್‌ಎಸ್‌ಎಸ್ ಗುಂಪಿನವರು ಅವರ ಮೇಲೆ ಪ್ರಶ್ನೆಗಳ ಸುರಿಮಳೆಗೈದು ಅತ್ಯಂತ ಅಸಭ್ಯ ಭಾಷೆಯಲ್ಲಿ ಮಾತನಾಡಿದರು - "ನೀವು ಯಾಕೆ ಬರುತ್ತಿದ್ದೀರಿ? ನೀವು ಹಿಂದೂಗಳಾಗಿ ಹುಟ್ಟಿಲ್ಲವೇ? ನಿಮ್ಮೆಲ್ಲರಿಗೂ ಯಾರು ಹಣ ನೀಡುತ್ತಿದ್ದಾರೆ? ಅವರು ನಿಮಗೆ ಊಟ, ವಸತಿ ಅಥವಾ ಮೋಟರ್‌ಬೈಕ್ ನೀಡುತ್ತಿದ್ದಾರೆಯೇ? ನೀವೆಲ್ಲರೂ ಏಕೆ ಮತಾಂತರವಾಗುತ್ತೀದ್ದೀರಿ?" | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ |

| | | | | | | |
|---|---|---|---|---|---|---|
| | | | ಈಗ ಎಂದಿನಂತೆ ಪ್ರಾರ್ಥನೆ ಮಾಡುತ್ತಿದ್ದ ಸ್ಥಳದಲ್ಲಿ ಅದಕ್ಕೆ ಅವಕಾಶ ನಿರಾಕರಿಸಿರುವುದರಿಂದ ಅಲ್ಲಿ ಪ್ರಾರ್ಥನೆ ನಡೆಯುತ್ತಿಲ್ಲ. ಕ್ರೈಸ್ತರು ಭಯಬೀತರಾಗಿದ್ದಾರೆ.<br><br>ವೀಡಿಯೊಗಳು ಮತ್ತು ಹೇಳಿಕೆಗಳು ವಾಟ್ಸಾಪ್ ಮತ್ತು ಸ್ಥಳೀಯ ಮಾಧ್ಯಮಗಳ ಮೂಲಕ ಪ್ರಸಾರವಾಗಿ ಸ್ಥಳೀಯ ಶಾಲೆಗಳಿಗೂ ತಲುಪಿವೆ. ಭೂಮಾಲೀಕರು/ ಮನೆಯ ಮಾಲೀಕರು ಅನೇಕ ಕ್ರೈಸ್ತರಿಗೆ ಮನೆ ಬಾಡಿಗೆಗೆ ನೀಡುತ್ತಿಲ್ಲ.<br><br>ಕೆಲವೇ ಕ್ರಿಶ್ಚಿಯನ್ನರು (ಕೇವಲ ಚರ್ಚುಗಳನ್ನು ಹೊಂದಿರುವವರು) ಪ್ರಾರ್ಥನೆಗೆ ಹೋಗುತ್ತಾರೆ ಆದರೆ ಪಾದ್ರಿಗಳು ಹೆಚ್ಚಾಗಿ ಕೆಲವು ಕುಟುಂಬಗಳಿಗೆ ವೈಯಕ್ತಿಕವಾಗಿ ಭೇಟಿ ನೀಡುತ್ತಾರೆ. ತಿಪಟೂರಿನಲ್ಲಿ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. | | | |

| | | | | | | |
|---|---|---|---|---|---|---|
| 10 | 18/03/21 | ಸಂ.15, 18 ನೇ ಅಡ್ಡರಸ್ತೆ, ಕನಕ ನಗರ, ಆರ್.ಟಿ ನಗರ, ಡಿ.ಜೆ ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು- 560032 | ಭಾನುವಾರದ ಪ್ರಾರ್ಥನಾ ಸಭೆ ನಡೆಸುತ್ತಿದ್ದ ಪಾದ್ರಿಯೊಬ್ಬರ ಮನೆಗೆ ಒಂದು ಗುರುವಾರದಂದು ಸಂಜೆ ಅದೇ ರಸ್ಥೆಯಲ್ಲಿದ್ದ ಒಬ್ಬ ವ್ಯಕ್ತಿ ಇನ್ನಿಬ್ಬರೊಂದಿಗೆ ಚರ್ಚ್ ಗೆ ಬಂದರು. ಬಂದವರು ಪಾದ್ರಿ ಮತ್ತು ಅವರ ಹೆಂಡತಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಲು ಆರಂಭಿಸದ. ಮುಂದುವರೆದು "ನಾವು ನಿನ್ನನ್ನು ಸುಟ್ಟುಹಾಕುತ್ತೇವೆ !" ಎಂದು ಕೂಗಾಡಿದ.<br><br>ಚರ್ಚ್ ಸದಸ್ಯರಲ್ಲಿ ಒಬ್ಬರು ಮುಂದೆ ಬಂದು ಅವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು. ಪಾದ್ರಿ ಕೂಡ ಆ ವ್ಯಕ್ತಿಯನ್ನು ತಬ್ಬಿ ಏನು ಸಮಸ್ಯೆ ಎಂದು ಕೇಳಿದರು. ಕ್ಷಣ ಮಾತ್ರದಲ್ಲಿ ಹೊರಗೆ ಜನರ ಗುಂಪು ಸೇರಿತು. ಇದು ನಮ್ಮ ಮೇಲೆ ನಡೆದ ಯೋಜಿತ ದಾಳಿಯೇನೋ ಅನ್ನಿಸಿತು. ಕ್ರಿಶ್ಚಿಯನ್ನರು ತುಂಬಾ ಭಯಗೊಂಡರು ಏಕೆಂದರೆ ನೆರೆದಿದ್ದ ಗುಂಪು ಅಸಭ್ಯವಾಗಿ ನಿಂದಿಸತೊಡಗಿದ್ದಲ್ಲದೆ ಚರ್ಚ್ ಗೆ ಬೆಂಕಿ ಇಡುವುದಾಗಿ ಬೆದರಿಸುತ್ತಿದ್ದರು. ಕೆಲವು ಪೀಠೋಪಕರಣಗಳನ್ನು ಒಡೆದುಹಾಕಿ ಅನುಯಾಯಿಗಳನ್ನು ಬೆದರಿಸಿದರು.<br><br>ಪಾದ್ರಿಯವರು ಎಫ್ಐಆರ್ ದಾಖಲಿಸಲು ಪೊಲೀಸ್ ಠಾಣೆಗೆ ಹೋದರು ಆದರೆ ಅಲ್ಲಿ ಕಂಪ್ಯೂಟರ್ ಕೆಟ್ಟಿದೆ ಎಂಬ ಉತ್ತರ ಬಂದಿದೆ. ಅವರು ಮುಂದುವರೆದು ದೂರು ದಾಖಲಿಸಬೇಕೆಂದು ಒತ್ತಾಯಿಸಿದಾಗ ಮರುದಿನ ಬರಲು ಹೇಳಲಾಯಿತು. ಮರುದಿನ ಅವರು ವಕೀಲರೊಂದಿಗೆ ಪೊಲೀಸ್ ಠಾಣೆಯನ್ನು ತಲುಪಿದರು. ಆದರೆ ಪಾದ್ರಿಯ ಪರವಾಗಿ ವಕೀಲರಿದ್ದಾಗ್ಯೂ ಸಹ ಪೋಲೀಸರು ಕ್ರಿಶ್ಚಿಯನ್ನರ ವಿರುದ್ಧ ಕೇಸ್ ದಾಖಲಿಸಲು ವಿರೋಧಿಗಳಿಗೆ ಅವಕಾಶ ಮಾಡಿಕೊಟ್ಟರು. "ಅವರು ಏಕೆ ಪಕ್ಷಪಾತಿಯಾಗಿದ್ದರು? ನಮ್ಮ ಎಫ್ಐಆರ್ ಅನ್ನು ಸ್ಥಳದಲ್ಲೇ ದಾಖಲಿಸುವ ಅವಕಾಶವನ್ನು ಏಕೆ ನಿರಾಕರಿಸಲಾಯಿತು?<br><br>ಈ ಘಟನೆಯು ಬಹಳಷ್ಟು ಅನುಯಾಯಿಗಳಲ್ಲಿ ಆಳವಾದ ಆತಂಕ ಮತ್ತು ಭಯವನ್ನು ಉಂಟುಮಾಡಿದೆ. ಅವರು ನನ್ನ ಹೆಂಡತಿ ಮತ್ತು ನನ್ನ ಮಗುವಿಗೆ ಬೆದರಿಕೆ ಹಾಕಿದರು. ಇನ್ನು ಆ ಸಭಾಂಗಣದಲ್ಲಿ ಪ್ರಾರ್ಥನೆ ಸಲ್ಲಿಸಲು ನಮಗೆ ಅವಕಾಶವಿಲ್ಲವಾಗಿ ಮತ್ತು ಅದಕ್ಕಾಗಿ ಬೇರೆ ಸ್ಥಳವನ್ನು ಹುಡುಕಬೇಕಾಯಿತು. ಪ್ರಾರ್ಥನಾ ಮಂದಿರದಲ್ಲಿ ಅನೇಕ ಮಹಿಳೆಯರು ಮತ್ತು ಮಕ್ಕಳು ಇದ್ದರು. ಅವರು ಈಗ ಆತಂಕದಲ್ಲಿದ್ದಾರೆ" ಎಂದು ಪಾದ್ರಿ ಹೇಳಿದರು. | - | https://drive.google.com/drive/folders/1HzrUbvgldQu7lbOksLj3PmpJ8lzTxDa6?usp=sharing | ಬೆದರಿಕೆ, ತೊಂದರೆ. ಕಿರುಕುಳ, ಧಾರ್ಮಿಕ ಸಭೆಗಳಿಗೆ ನಿರ್ಬಂಧ |

| | | | | | | |
|---|---|---|---|---|---|---|
| 11 | 18/03/21 | ತರೀಕೆರೆ, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ | ಮಾರ್ಚ್ 18, 2021 ರಂದು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಾದ್ರಿಯೊಬ್ಬರನ್ನು ಬಂಧಿಸಲಾಯಿತು. ಮುರುಗನ್ ಎಂಬಾತನು ತನ್ನ ಹೆಂಡತಿಯನ್ನು ಕ್ರಿಶ್ಚಿಯನ್ನರು ಮತಾಂತರಗೊಳಿಸಿದ್ದಾರೆ ಎಂದು ದೂರು ನೀಡಿದ ಹಿನ್ನೆಲೆಯಲ್ಲಿ ಪಾದ್ರಿಯನ್ನು ಬಂದಿಸಲಾಯಿತು. ಈ ದೂರುದಾರ ಕೆಲವು ಧಾರ್ಮಿಕ ತೀವ್ರವಾದಿಗಳಿಗೆ ಠಾಣೆಗೆ ಬರುವಂತೆಯೂ ಸೂಚಿಸಿದ್ದರು. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಬಂಧನ |
| 12 | 28/03/21 | ಸೊರಬ ತಾಲೂಕ್ ಶಿವಮೊಗ್ಗ, ಕರ್ನಾಟಕ | ಬಂಜಾರ ಸಮುದಾಯವು ದಸರಾವನ್ನು ಪ್ರತಿ ವರ್ಷವೂ ಅದ್ಧೂರಿಯಾಗಿ ಆಚರಿಸುತ್ತದೆ. ಅವರು 5 ವರ್ಷಗಳ ಹಿಂದೆ ಗ್ರಾಮದ ಪಾದ್ರಿಯೊಬ್ಬರನ್ನು ಬಹಿಷ್ಕರಿಸಿದ್ದರು. ನಂತರ ಪಾದ್ರಿ ಆ ಗ್ರಾಮದಲ್ಲಿ ಪ್ರಾರ್ಥನೆ ನಡೆಸುವುದನ್ನು ನಿಲ್ಲಿಸಿದ್ದರು. ಈಗಲೂ ಪಾದ್ರಿ ಆ ಗ್ರಾಮದಲ್ಲಿ ಸ್ವಂತ ಮನೆಯನ್ನು ಹೊಂದಿದ್ದಾರೆ.<br>ಮಾರ್ಚ್‌ನಲ್ಲಿ ಒಂದು ದಿನ, 16 ಜನರ ಗುಂಪು ಅವರ ಮನೆಗೆ ತಮ್ಮ ಧ್ವಜಗಳನ್ನಿಡಿದು ಬಂದು ಒಳಗೆ ನುಗ್ಗಿ ಮತಾಂತರ ಮಾಡುತ್ತಿದ್ದೀರಿ ಎಂದು ಆರೋಪಿಸಿತು. ಆತನನ್ನು ಬಲವಂತವಾಗಿ ಕೈ ಮುಗಿಯುವಂತೆ ಮಾಡಿ, ದೈಹಿಕವಾಗಿ ಮತ್ತು ಮೌಖಿಕವಾಗಿ ಪಾದ್ರಿ ಮತ್ತು ಆತನ ಹೆಂಡತಿಯನ್ನು ಹಿಂಸಿಸಿದರು. ಇಬ್ಬರನ್ನೂ ಸಮುದಾಯ ಭವನಕ್ಕೆ ಕರೆದೊಯ್ದು ಪಂಚಾಯಿತಿ ಸದಸ್ಯರನ್ನು ಕರೆದರು. ಪಂಚಾಯ್ತಿಯವರು ಆರೋಪಗಳನ್ನು ನಿರಾಕರಿಸಿದರು ಮತ್ತು ಪಾದ್ರಿಗಳು ತಮ್ಮ ದೇವರನ್ನು ನಂಬುತ್ತಾರೆ ಮತ್ತು ಬೇರೆಯವರು ತಮ್ಮ ದೇವರನ್ನು ನಂಬಬಹುದು ಎಂದು ಹೇಳಿದರು.<br>ಅವರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಮತ್ತು ಎಲ್ಲಾ ಕ್ರಿಶ್ಚಿಯನ್ನರ ಮೀಸಲಾತಿ ಮತ್ತು ಜಾತಿ ಪ್ರಮಾಣಪತ್ರವನ್ನು ಕಿತ್ತುಕೊಳ್ಳುವುದಾಗಿ ಪಾಸ್ಟರ್‌ಗೆ ಬೆದರಿಕೆ ಹಾಕಿದ್ದಾರೆ. ಶಿವಮೊಗ್ಗದಾದ್ಯಂತ ಪ್ರತಿಭಟನೆ ಆಯೋಜಿಸಿದ್ದಲ್ಲದೆ ಬೆಂಗಳೂರಿನಲ್ಲೂ ಪ್ರತಿಭಟನೆ ನಡೆಸಿದರು. ಹೆಚ್ಚಿನ ಜನರು ತಮ್ಮ ಮೀಸಲಾತಿಯನ್ನು ಕಳೆದುಕೊಳ್ಳುವ ಭಯದಿಂದ ಚರ್ಚ್ ತೊರೆದಿದ್ದಾರೆ. ಈಗ ಅವರು ಸ್ವಲ್ಪ ದೂರದಲ್ಲಿ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದಾರೆ. | ಎಫ್ ಐ ಆರ್ (ಪರವಾಗಿ)<br>ಎಫ್.ಐ.ಆರ್ ಸಂಖ್ಯೆ: : 0033/2021<br>ಸೆಕ್ಷನ್: 1860 (ಯು/ಎಸ್-323,324,354,506,34 (ವಿರುದ್ಧ) | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ದೈಹಿಕ ದಾಳಿ |
| 13 | 31/03/21 | ಬಾಗೇಪಲ್ಲಿ ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಕರ್ನಾಟಕ | ಪಂಚಾಯತ್ ಸದಸ್ಯರೊಬ್ಬರು ಒಬ್ಬ ಪಾದ್ರಿಗೆ ಪ್ರಾರ್ಥನಾ ಸಭೆಗಳನ್ನು ನಡೆಸಬೇಡಿ ಎಂದು ಹೇಳಿದರು. ಆತನ ವಿರುದ್ಧ ದೂರು ದಾಖಲಿಸಿದರು. ಪೊಲೀಸರು ಕ್ರಿಶ್ಚಿಯನ್ನರಿಗೆ ತೊಂದರೆ ನೀಡಬಾರದೆಂದು ಪಂಚಾಯಿತಿಗೆ ಎಚ್ಚರಿಕೆ ನೀಡಿದರು ಮತ್ತು ಕ್ರಿಶ್ಚಿಯನ್ನರು ಪ್ರಾರ್ಥನೆಯನ್ನು ಮುಂದುವರಿಸಬಹುದು ಎಂದು ಭರವಸೆ ನೀಡಿದರು. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ದೈಹಿಕ ದಾಳಿ |

| | | | | | | |
|---|---|---|---|---|---|---|
| 14 | 04/04/21 | . ದಾವಣ ಗೆರೆ ಜಿಲ್ಲೆ, ಕರ್ನಾಟಕ | ಏಪ್ರಿಲ್ 4, 2021 ರಂದು ಪಾದ್ರಿಯೊಬ್ಬರು ತಮ್ಮ ವಾರದ ಚರ್ಚ್ ಸೇವೆಯಲ್ಲಿ ತೊಡಗಿದ್ದಾಗ ಧಾರ್ಮಿಕ ತೀವ್ರವಾದಿಗಳ ಗುಂಪೊಂದು ಸಭಾಂಗಣಕ್ಕೆ ನುಗ್ಗಿ ಕ್ರಿಶ್ಚಿಯನ್ನರನ್ನು ನಿಂದಿಸಿ ಬೆದರಿಕೆ ಹಾಕಿತು. ತೀವ್ರವಾದಿಗಳು ಕ್ರಿಶ್ಚಿಯನ್ನರ ಮೇಲೆ ಧಾರ್ಮಿಕ ಮತಾಂತರದ ಆರೋಪವನ್ನೂ ಮಾಡಿದ್ದಾರೆ. ಸ್ಥಳೀಯ ಪೊಲೀಸ್ ಠಾಣೆಗೆ ವರದಿ ಮಾಡುವಂತೆ ಪಾದ್ರಿಯನ್ನು ಹೇಳಲಾಯಿತು. ಬಾಡಿಗೆ ಹಾಲ್‌ನಲ್ಲಿ ಧಾರ್ಮಿಕ ಸಭೆಗಳನ್ನು ನಡೆಸಲು ಅನುಮತಿ ನಿರಾಕರಿಸಿ ಕ್ರಿಶ್ಚಿಯನ್ನರಿಗೆ ಸಂದೇಶ ಕೊಡಲಾಗಿತ್ತು. | ಎಫ್ ಐ ಆರ್ ಸಂಖ್ಯೆ 0040/2021 ದಿನಾಂಕ 06/04/2021 | https://m.dailyhunt.in/buzz/video/kannada/misc/daavanagereyalli+munduvaridha+mataantara+chatuvatike+paravaanagi+illade+nade yuttide+praarthana+mandira-b23843702?s=a&uu=0x8ddb566e71999dc4&ss=wsp<br><br>https://drive.google.com/drive/folders/1T1WGiHp1YIpO3SEDIrvm8W-J3oaDEw1Q?usp=sharing | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಗುಂಪಿನ ಕ್ರೌರ್ಯ, ಧಾರ್ಮಿಕ ಸಭೆಗಳ ನಿಬಂಧ |
| 15 | 05/04/21 | # 460 ದೊಡ್ಡಣ್ಣವರ್ ಹೈ ಸ್ಕೂಲ್ ಹತ್ತಿರ, ದರ್ಗಾ ರಸ್ತೆ ಹಾಲಗ. ಬೆಳಗಾವಿ, ಕರ್ನಾಟಕ : 590003 | ಈಸ್ಟರ್ ನಂತರದ ರಾತ್ರಿ ಪಾದ್ರಿ ತನ್ನ ಹೆಂಡತಿ ಮತ್ತು ಮೂವರು ಮಕ್ಕಳೊಂದಿಗೆ ಇದ್ದಾಗ ಅವರ ಹೆಂಡತಿಗೆ ಎದೆ ನೋವು ಕಾಣಿಸಿಕೊಂಡಿದೆ.<br>ಪಾದ್ರಿ ತಮ್ಮ ಕುಟುಂಬ ವೈದ್ಯರಿಗೆ ಕರೆ ಮಾಡಿದಾಗ ಅವರು ಸೋಮವಾರ ಮಧ್ಯಾಹ್ನ ಬರಲು ಹೇಳಿದರು. ವೈದ್ಯರನ್ನು ನೋಡುವವರೆಗೂ ವಿಶ್ರಾಂತಿ ಪಡೆಯಲು ಅವರು ಮೊದಲು ಅವರ ಅತ್ತಿಗೆ/ನಾದಿನಿಯ ಮನೆಗೆ ಹೋದರು. 11:30 ರ ಸುಮಾರಿಗೆ 60 ಜನರ ಗುಂಪು ಹೊರಗೆ ಕಾಯುತ್ತಿತ್ತು.<br><br>ಅವರು ಪಾದ್ರಿಯನ್ನು ಹೊರಗೆ ಎಳೆದೊಯ್ದು ಯಾರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸಲು ಬಂದಿದ್ದಾರೆ ಎಂದು ಕಿರುಚಾಡಿದರು. ಪಾದ್ರಿ ಅವರಿಗೆ ತಿಳಿಸಿ ಹೇಳಲು ಪ್ರಯತ್ನಿಸಿದರರೂ ಯಾರೂ ಅವರ ಮಾತನ್ನು ಕೇಳಲು ಸಿದ್ಧರಿರಲಿಲ್ಲ. ಅವರು ಯಾವುದೇ ಪ್ರಾರ್ಥನೆಗಾಗಿ ಕೂಡಾ ಹೋಗುತ್ತಿಲ್ಲ ಎಂದು ಹೇಳಲು ಪ್ರಯತ್ನಿಸಿದರು. ಕ್ಷಣಾರ್ಧದಲ್ಲಿ ಪಾದ್ರಿಯ ವಿರುದ್ಧ ಬೈಗುಳ ತಾರಕಕ್ಕೇರಿತು ಜೊತೆಗೆ ಪಾದ್ರಿಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಲಾಯಿತು. ಚರ್ಚ್ ಗೆ ಬರುತ್ತಿದ್ದ ಎಲ್ಲಾ ಕ್ರಿಶ್ಚಿಯನ್ ಅನುಯಾಯಿಗಳನ್ನು ಚರ್ಚ್ ಗೆ ಬರಬಾರದೆಂದು ಸೂಚಿಸಬೇಕೆಂದು ಹೇಳಿದರು.<br>ಅಲ್ಲಿಂದ ಪಾದ್ರಿಯನ್ನು ಮುಖ್ಯ ರಸ್ತೆಗೆ ಎಳೆದೊಯ್ದರು | ಎಫ್ ಐ ಆರ್ ಸಂಖ್ಯೆ 0020/2021 ದಿನಾಂಕ: 06/04/2021 ಸೆಕ್ಷನ್: ಐಪಿಸಿ(ಯು/ಎಸ್-143,147,323,341,504,506,149 ಠಾಣೆ - ಶಹಾಪುರ | | ಬೆದರಿಕೆ,ತೊಂದರೆ, ಕಿರುಕುಳ, ದೈಹಿಕ ಹಲ್ಲೆ |

| | | | | | | |
|---|---|---|---|---|---|---|
| | | | ಮತ್ತು ಗುಂಪಿನಲ್ಲಿದ್ದ ಕನಿಷ್ಠ 30 ಜನರು ಅವನನ್ನು ಹಿಗ್ಗಾ ಮುಗ್ಗಾ ಥಳಿಸಿದರು. ಸಹಾಯ ಮಾಡಲು ಬಂದ ಪಾದ್ರಿಯ ಹೆಂಡತಿಯನ್ನು ಪದೇ ಪದೇ ಪಕ್ಕಕ್ಕೆ ತಳ್ಳಿದರು. "ಈಗ ಇವನನ್ನು ಕೊಂದುಬಿಡೋಣ!" ಎಂದು ಕಿರುಚುತಿದ್ದ ಗುಂಪಿನ ಆರ್ಭಟವನ್ನು ಪಾದ್ರಿಯ ಮಕ್ಕಳು ಭಯಭೀತರಾಗಿ ನೋಡುತ್ತಿದ್ದರು.<br><br>ಪಾದ್ರಿಯನ್ನು ರಸ್ತೆಯಲ್ಲಿ ಮೆರವಣಿಗೆ ಮಾಡಿ ತಲೆಗೆ ಕಲ್ಲಿನಿಂದ ಹೊಡೆದರು. ಅವರು ಬಲವಂತವಾಗಿ ಆತನ ಹಣೆಯ ಮೇಲೆ ಮತ್ತು ಆತನ ಹೆಂಡತಿಯ ಹಣೆಯ ಮೇಲೆ ಕುಂಕುಮವನ್ನು ಹಚ್ಚಿದರು. ಅವರು ಪೊಲೀಸ್ ಠಾಣೆಗೆ ಹೋದಾಗ ಅವರು ಅವರನ್ನು ಅಲೆದಾಡಿಸಿದರು ಮತ್ತು ದೂರು ದಾಖಲಿಸುವ ಮೊದಲು ಆಸ್ಪತ್ರೆಯಿಂದ ಮೆಡಿಕೋ-ಲೀಗಲ್ ಕೇಸ್ ಪಡೆಯಬೇಕು ಎಂದು ಹೇಳಿದರು.<br><br>"ನಾನು ತೀವ್ರವಾಗಿ ಗಾಯಗೊಂಡಿದ್ದೇನೆ, ನನ್ನ ಕಿವಿಗಳಿಂದ ರಕ್ತಸ್ರಾವವಾಯಿತು ಮತ್ತು ಒಂದು ತಿಂಗಳಿನಿಂದ ನನಗೆ ಸರಿಯಾಗಿ ಕೇಳಲು ಸಾಧ್ಯವಾಗಲಿಲ್ಲ. ನನ್ನ ಒಳಗಿನ ಕಿವಿಯಲ್ಲಿ ನೋವು ಅಸಹನೀಯವಾಗಿತ್ತು ಮತ್ತು ಇಂದಿಗೂ ಅದರ ನೋವಿದೆ.", ಎಂದು ಪಾದ್ರಿ ಹೇಳಿದರು. | | | |

| | | | | | | |
|---|---|---|---|---|---|---|
| 16 | 11/05/21 | ಕೋಲಾರ ತಾಲೂಕು ರೋಣಿ ತಾಂಡಾ. ವಿಜಯಪುರ ಜಿಲ್ಲೆ, ಕರ್ನಾಟಕ | 11 ಮೇ 2021 ರಂದು ಸುಮಾರು ಸಂಜೆ ಸುಮಾರು 7 ಗಂಟೆಯಲ್ಲಿ ಬಂಜಾರ ಸಮುದಾಯದ ಕೆಲವರು ರಾಡ್ ಮತ್ತು ಕೋಲುಗಳಿಂದ ಪಾದ್ರಿ ಮತ್ತು ಅವರ ಕೆಲವು ಚರ್ಚ್ ಸದಸ್ಯರ ಮೇಲೆ ಹಲ್ಲೆ ನಡೆಸಿದರು. ಈ ಘಟನೆ ಸಂಭವಿಸಿದ್ದಕ್ಕೆ ಕಾರಣ ಕ್ರಿಶ್ಚಿಯನ್ನರು ಯಾರದ್ದೋ ಶವ ಸಂಸ್ಕಾರ ಮಾಡಿದ್ದಾರೆಂದೂ, ಅಲ್ಲಿ ಸಾಂಪ್ರದಾಯಿಕ ವಿಧಿ ವಿಧಾನಗಳನ್ನು ನೆರವೇರಿಸಿಲ್ಲವೆಂಬುದು ಕಾರಣವಾಗಿದೆ.<br><br>ಸತ್ತ ವ್ಯಕ್ತಿಯನ್ನು ಹೂಳಲು ಕ್ರೈಸ್ತರು ಬಂಜಾರ ಸಮುದಾಯವನ್ನು ಸಂಪರ್ಕಿಸಿದ್ದರು. ಆದರೆ ಬಂಜಾರ ಸಮುದಾಯವು ಶವ ಸಂಸ್ಕಾರವನ್ನು ನಿರಾಕರಿಸಿದ್ದಕ್ಕೆ ಕ್ರಿಶ್ಚಿಯನ್ನರು ಸತ್ತ ವ್ಯಕ್ತಿಯನ್ನು ತಮ್ಮ ಸ್ವಂತ ಭೂಮಿಯಲ್ಲಿ ಹೂಳಲು ನಿರ್ಧರಿಸಿದ್ದರು. | - | | ಬೆದರಿಕೆ, ತೊಂದರೆ, ಕಿರುಕುಳ, ದೈಹಿಕ ಹಲ್ಲೆ |
| 17 | 02/07/21 | ಸೊರಬ ತಾಲೂಕು, ಶಿವಮೊಗ್ಗ, ಕರ್ನಾಟಕ | 2ನೇ ಜುಲೈ 2021 ರಂದ 2 ಕಾರುಗಳಲ್ಲಿ ಪ್ರಯಾಣಿಸುತ್ತಿದ್ದ ಕೆಲವು ಪಾದ್ರಿಗಳನ್ನು 70 ರಿಂದ 80 ಜನರ ಗುಂಪೊಂದು ಕಿರುಕುಳ ಕೊಟ್ಟು ಮತ್ತು ನಿಂದಿಸಿದ್ದಾರೆ. ರಾಡ್ ಮತ್ತು ದೊಣ್ಣೆಗಳಿಂದ ಕಾಲಿಗೆ ಹೊಡೆಯುತ್ತಿದ್ದರು. ಆ ಗುಂಪು ಪಾದ್ರಿಗಳನ್ನು ಬಲವಂತವಾಗಿ ಮತಾಂತರ ಮಾಡುತ್ತಿದ್ದೀರಿ ಎಂದು ಆರೋಪಿಸುತ್ತಿದ್ದಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಅವರು ಗ್ರಾಮಕ್ಕೆ ತಲುಪುತ್ತಿದ್ದಂತೆ ಹೆಚ್ಚಿನ ಜನರು ಜಮಾಯಿಸಿ ಪಾದ್ರಿಗಳ ತಂಡಕ್ಕೆ ಕಿರುಕುಳ ನೀಡಲು ಪ್ರಯತ್ನಿಸಿದರು. ಪೋಲೀಸರು ಆಗಮಿಸಿ ಗುಂಪನ್ನು ಚದುರಿಸಿದರು. | - | | ತೊಂದರೆ, ಬೆದರಿಕೆ, ಕಿರುಕುಳ |
| 18 | 14/07/21 | ಕನಕಪುರ ತಾಲೂಕು, ರಾಮನಗರ ಜಿಲ್ಲೆ, ಕರ್ನಾಟಕ. | .<br>14 ಜುಲೈ 2021 ರಂದು ಚರ್ಚ್ ನ ಸದಸ್ಯರೊಬ್ಬರ ಮನೆಯಲ್ಲಿ ಪಾದ್ರಿಯು ಪ್ರಾರ್ಥನಾ ಸಭೆ ನಡೆಸುತ್ತಿರುವುದಾಗಿ ತಿಳಿದು ಬಂದ ಹಿನ್ನೆಲೆಯಲ್ಲಿ ಭಜರಂಗದಳದ ಸದಸ್ಯರು ಗುಂಪುಗೂಡಿ ಪ್ರಾರ್ಥನೆಯನ್ನು ನಿಲ್ಲಿಸುವಂತೆ ತಾಕೀತು ಮಾಡಿದರು. ಸ್ಥಳೀಯ ಎಸ್ಐ ಅದೇ ಸಮಯದಲ್ಲಿ ಆ ಸ್ಥಳದಲ್ಲಿ ಗಸ್ತು ತಿರುಗುತ್ತಿದ್ದು ಗಲಾಟೆ ಕೇಳಿ ಸ್ಥಳಕ್ಕೆ ಬಂದು ಕ್ರಿಶ್ಚಿಯನ್ನರನ್ನು ಮಾತನಾಡಿಸಿ ಪಾದ್ರಿಯನ್ನು ಮನೆಗೆ ಆಹ್ವಾನಿಸಲಾಗಿದೆಯೇ ಎಂದು ಖಚಿತಪಡಿಸಿಕೊಂಡರು. ನಂತರ ನೆರೆದಿದ್ದ ಗುಂಪಿಗೆ ಅವರ ಪ್ರಾರ್ಥನೆಗೆ ಅಡ್ಡಿಪಡಿಸಬಾರದೆಂದು ಧಾರ್ಮಿಕ ತೀವ್ರವಾದಿಗಳಿಗೆ ಎಚ್ಚರಿಕೆ ನೀಡಿದ್ದಾರೆ. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಧಾರ್ಮಿಕ ಸಭೆಗಳಿಗೆ ನಿರ್ಬಂಧ |
| 19 | 29/07/21 | ದೊಡ್ಡಸಾಲ, ಕೋಲಾರ, ಕರ್ನಾಟಕ | ಕೋಲಾರದಲ್ಲಿ 29 ಜುಲೈ 2021 ರಂದು ಪಾದ್ರಿ ಮತ್ತು ಅವರ ಪತ್ನಿ ಪ್ರಾರ್ಥನೆಗಾಗಿ ಒಂದು ಕ್ರಿಶ್ಚಿಯನ್ ಕುಟುಂಬದ ಮನೆಗೆ ತೆರಳುತ್ತಿದ್ದರು. ಮುಖ್ಯರಸ್ತೆಯಲ್ಲಿ ಸಂಚರಿಸುತ್ತಿದ್ದಾಗಲೇ ಚಂದ್ರಶೇಖರ್ ಮತ್ತಿತರ ಧಾರ್ಮಿಕ ತೀವ್ರವಾದಿಗಳು ಅವರ ಮೇಲೆ ಬಿದ್ದರು. ಈ ತೀವ್ರವಾದಿಗಳು ಪಾದ್ರಿಗಳಿಗೆ ಬೆದರಿಕೆ ಹಾಕಿ | - | https://drive.google.com/drive/folders/1-9WxW3k4aD2YsxEk_O7VHcx1bo4fhr1j | ಬೆದರಿಕೆ, ತೊಂದರೆ ಮತ್ತು ಕಿರುಕುಳ, ದೈಹಿಕ ಹಲ್ಲೆ |

| | | | | | | |
|---|---|---|---|---|---|---|
| | | | ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ.<br>ದಾರಿ ಹೋಕರು ಪಾದ್ರಿಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಪಾದ್ರಿ ತಲೆಬುರುಡೆಯ ಮೂಳೆ ಮುರಿದಿತ್ತು. ನಂತರ ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದ್ದು ಅವರು ಎನ್‌ಸಿಆರ್ ದಾಖಲಿಸಿದ್ದಾರೆ. ಪೊಲೀಸರು ಎರಡೂ ಕಡೆಯವರನ್ನು ಠಾಣೆಗೆ ಕರೆಸಿ ದುಷ್ಕರ್ಮಿಗಳಿಗೆ ಎಚ್ಚರಿಕೆ ನೀಡಿದರು. ದುಷ್ಕರ್ಮಿಗಳು ಪಾದ್ರಿಯಲ್ಲಿ ಕ್ಷಮೆಯಾಚಿಸಿದರು. | | | |
| 20 | 23/08/21 | ಗೌರಿಬಿದನೂರು ತಾಲೂಕ್ ಚಿಕ್ಕಬಳ್ಳಾಪುರ ಜಿಲ್ಲೆ ಕರ್ನಾಟಕ | 23 ಆಗಸ್ಟ್ 2021 ರಂದು ರಾಜಕೀಯ ಪಕ್ಷವೊಂದರ ಮಾಜಿ ಅಧ್ಯಕ್ಷರು ಮತಾಂತರಗೊಂಡಿದ್ದ 10 ಕ್ರಿಶ್ಚಿಯನ್ ಕುಟುಂಬಗಳನ್ನು ಪುನಃ ಹಿಂದೂ ಧರ್ಮಕ್ಕೆ ಮರುಪರಿವರ್ತಿಸಲು ವಿಶೇಷ ಪೂಜೆ ಮತ್ತು ಕಾರ್ಯಕ್ರಮವನ್ನು ಆಯೋಜಿಸಿದರು. ಕ್ರಿಶ್ಚಿಯನ್ನರು ಅಮಾಯಕರನ್ನು ಆಕರ್ಷಿಸಿ ಅವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುತ್ತಿದ್ದಾರೆ ಇದನ್ನು ನಿಲ್ಲಿಸಬೇಕು ಎಂದು ಅವರು ಹೇಳಿದರು. | - | https://youtu.be/uiFHQpQg9u8 | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಧಾರ್ಮಿಕ ಸಭೆಗಳ ನಿರ್ಬಂಧ |
| 21 | 05/09/21 | ಯಲಹಂಕ ತಾಲೂಕು, ಬೆಂಗಳೂರು ಕರ್ನಾಟಕ | ಸೆಪ್ಟೆಂಬರ್ 5, 2021 ರಂದು ಪಾದ್ರಿಯೊಬ್ಬರು ಚರ್ಚ್ ಸೇವೆಯಲ್ಲಿ ತೊಡಗಿದ್ದಾಗ ಹಿಂದೂ ಜಾಗರಣಾ ವೇದಿಕೆಯ ಕೆಲವು ಧಾರ್ಮಿಕ ತೀವ್ರವಾದಿಗಳು ಅಲ್ಲಿಗೆ ನುಗ್ಗಿ ಚರ್ಚ್ ಸೇವೆಯನ್ನು ನಿಲ್ಲಿಸಿದರು. ಅವರು ಯಾವುದೇ ಧಾರ್ಮಿಕ ಸಭೆ ನಡೆಸದಂತೆ ಪಾದ್ರಿಗೆ ಎಚ್ಚರಿಸಿ ಬೆದರಿಕೆ ಹಾಕಿದರು. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಧಾರ್ಮಿಕ ಸಭೆಗಳ ನಿರ್ಬಂಧ |
| 22 | 14/09/21 | ತುಮಕೂರು ಕರ್ನಾಟಕ | ಸೆಪ್ಟೆಂಬರ್ 14, 2021 ರಂದು ತುಮಕೂರಿನಲ್ಲಿ ಕ್ರಿಶ್ಚಿಯನ್ ವ್ಯಕ್ತಿಯನ್ನು ಚೇಳೂರು ಪೊಲೀಸ್ ಠಾಣೆಯಲ್ಲಿ ಬಂಧಿಸಿದ್ದರು.<br>ಆತನ ನಂಬಿಕೆ ಮತ್ತು ಸಮುದಾಯದಲ್ಲಿ ಆತನ ಚಟುವಟಿಕೆಗಳ ಬಗ್ಗೆ ಪೊಲೀಸರು ವಿಚಾರಣೆ ನಡೆಸಿದರು. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ. |

| | | | | | | |
|---|---|---|---|---|---|---|
| 23 | 10/09/21 | ನಿಟ್ಟೆ ಗ್ರಾಮ. ಕಾರ್ಕಳ ತಾಲೂಕ್, ಉಡುಪಿ ಜಿಲ್ಲೆ, ಕರ್ನಾಟಕ | ಅದೊಂದು ದಿನ ನಾನು ನಮ್ಮ ಹಳ್ಳಿಯಲ್ಲಿರುವ ಡಿಸೋಜಾ ಕಾಂಪ್ಲೆಕ್ಸ್ ಹೆಸರಿನ ಕಾಂಪ್ಲೆಕ್ಸ್ ನಲ್ಲಿ ಪ್ರಾರ್ಥನಾ ಸಭೆ ನಡೆಸುತ್ತಿದ್ದೆ. ನಾವು ಮಾರ್ಚ್ 2011 ರಿಂದ ಅದೇ ಸ್ಥಳವನ್ನು ಪ್ರಾರ್ಥನೆಗಾಗಿ ಬಳಸುತ್ತಿದ್ದೆವು. ಸೆಪ್ಟೆಂಬರ್‌ನಲ್ಲಿ, ಕೋವಿಡ್ ಪ್ರೋಟೋಕಾಲ್ ಕಾರಣದಿಂದಾಗಿ ವಾರಾಂತ್ಯದ ಕರ್ಫ್ಯೂ ಇತ್ತು. ಹಾಗಾಗಿ ಡಿಸೋಜಾ ಕಾಂಪ್ಲೆಕ್ಸ್ ಲಭ್ಯವಿಲ್ಲದ ಕಾರಣ ಭಾನುವಾರದಂದು ಪ್ರಾರ್ಥನೆ ಮಾಡುವ ಬದಲು ಶುಕ್ರವಾರ ಬೆಳಗ್ಗೆ ಬೇರೆ ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನೆ ಆಯೋಜಿಸಿದ್ದೆ.<br><br>ಪ್ರಾರ್ಥನೆ ಆರಂಭಿಸಿದ 15 ನಿಮಿಷಗಳಲ್ಲಿ 25-30 ಮಂದಿ ಪುರುಷರು ಕೂಗುತ್ತಾ ಜನರನ್ನು ಥಳಿಸಿ ಭಾರೀ ಗೊಂದಲವುಂಟು ಮಾಡಿದರು. ಈ ಹಿಂಸಾಚಾರದಲ್ಲಿ ನಮ್ಮ ಅನೇಕ ಭಕ್ತರಿಗೆ ಮೂಗೇಟುಗಳು ಮತ್ತು ಗಾಯಗಳಾಗಿವೆ. ಮಹಿಳೆಯೊಬ್ಬರ ರವಿಕೆಯೂ ಸೇರಿದಂತೆ ಇಬ್ಬರ ಬಟ್ಟೆಗಳು ಹರಿದಿವೆ.<br><br>ಸ್ವಲ್ಪ ಸಮಯದ ನಂತರ ಪೊಲೀಸರು ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿ, "ನೀವು ಗಣೇಶ ಚತುರ್ಥಿಯಂದು ಏಕೆ ಪ್ರಾರ್ಥಿಸುತ್ತಿದ್ದೀರಿ?" ಎಂದು ಕೇಳಿದರು.<br><br>10 ವರ್ಷಗಳಿಂದ ಬಳಸುತ್ತಿದ್ದ ನಮ್ಮ ಪ್ರಾರ್ಥನಾ ಮಂದಿರವು ಇದ್ದಕ್ಕಿದ್ದಂತೆ ಲಭ್ಯವಿಲ್ಲ ಮತ್ತು ವಾರಾಂತ್ಯದ ಕರ್ಫ್ಯೂ ಇರುವುದರಿಂದ ಭಾನುವಾರ ನಮ್ಮ ಪ್ರಾರ್ಥನೆಯನ್ನು ಮಾಡಲು ನಮಗೆ ಅನುಮತಿ ಇಲ್ಲ ಎಂದು ನಾನು ವಿವರಿಸಲು ಪ್ರಯತ್ನಿಸಿದೆ.<br><br>ನಾನು ದುಷ್ಕರ್ಮಿಗಳ ವಿರುದ್ಧ ದೂರು ನೀಡಲು ಪೊಲೀಸ್ ಠಾಣೆಗೆ ಹೋದೆ ಆಶ್ಚರ್ಯವೆಂಬಂತೆ ನಾನು ಎರಡು ವರ್ಷಗಳ ಹಿಂದೆ ಭೇಟಿಯಾಗಿದ್ದ ಸುನಿಲ್ ಎಂಬವವರು ಅದಾಗಲೇ ನನ್ನ ವಿರುದ್ಧ 295 ಎ ಅಡಿಯಲ್ಲಿ ನನ್ನ ವಿರುದ್ಧ ಎಫ್‌ಐಆರ್ ಅನ್ನು ದಾಖಲಿಸಿದ್ದರು ಎಂದು ತಿಳಿದು ಆಘಾತಗೊಂಡೆ.<br><br>ಹಿಂಸಾತ್ಮಕ ತೀವ್ರವಾದಿಗಳ ವಿರುದ್ಧ ದೂರು ದಾಖಲಿಸಬೇಕೆಂದು ನನ್ನ ಒತ್ತಾಯವನ್ನು ಮುಂದುವರಿಸಿದೆ. ಈ ಹಿಂಸಾಚಾರದ ಸಂದರ್ಭದಲ್ಲಿ ಮಹಿಳೆಯ ಮೇಲೂ ದಾಳಿ ನಡೆದಿದೆ ಅವರ ರವಿಕೆ ಹರಿದಿದೆ ಎಂದು ನಾನು ಅವರಿಗೆ ತಿಳಿಸಿದ್ದಲ್ಲದೆ, ಆಕೆಯೂ ಪ್ರತ್ಯೇಕ ದೂರನ್ನು ದಾಖಲಿಸಲು ಬಯಸಿದ್ದಳು ಎಂದು ಹೇಳಿದೆ. ಆದರೆ ಎಲ್ಲಾ ಮಾಹಿತಿಯು ಒಂದೇ ದೂರಿನಲ್ಲಿರಬಹುದು ಎಂದು ಪೊಲೀಸರು ತಿಳಿಸಿದರು. | ಎಫ್.ಐ.ಆರ್(ವಿರುದ್ಧ ): ಎಫ್.ಐ.ಆರ್ ಸಂಖ್ಯೆ 90/2021 ಸೆಕ್ಷನ್: ಐಪಿಸಿ 295ಎ, 298 ದಿನಾಂಕ: 30-07-2021<br><br>ಎಫ್.ಐ.ಆರ್(ವಿರುದ್ಧ) ಸಂಖ್ಯೆ: ಎಫ್.ಐ.ಆರ್ ಸಂಖ್ಯೆ 111/2021 ಸೆಕ್ಷನ್: ಐಪಿಸಿ 295ಎ, 298 ದಿನಾಂಕ: 10-09-2021<br><br>ಎಫ್.ಐ.ಆರ್(ಪರ): 110/2021 ದಿನಾಂಕ: 10/09/2021 ಸೆಕ್ಷನ್: ಐಪಿಸಿ 506,504, 143, 147, 149, 448, 323, 354 | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಗುಂಪಿನ ಕ್ರೌರ್ಯ, ಧಾರ್ಮಿಕ ಸಭೆಗಳ ನಿರ್ಬಂಧ, ದೈಹಿಕ ಹಲ್ಲೆ |

| | | | | | | |
|---|---|---|---|---|---|---|
| | | | ಅವರು ನನ್ನ ದೂರನ್ನು ದಾಖಲಿಸಿರುವುದಾಗಿ ಹೇಳಿದರು.ಆದರೆ ಅದನ್ನು ದೃಢೀಕರಿಸುವ ಯಾವುದೇ ಸ್ವೀಕೃತಿ ಅಥವಾ ದಾಖಲೆಯನ್ನು ನೀಡಲು ನಿರಾಕರಿಸಿದರು. ರವಿಕೆಯ ಹರಿದ ಭಾಗವನ್ನು ತರಲು ಅವರು ಮಹಿಳೆಯನ್ನು ಕೇಳಿದರು ಮತ್ತು ಆಕೆ ತಂದಾಗ, ಪೊಲೀಸ್ ಅಧಿಕಾರಿಯೊಬ್ಬರು, "ನೀವು ಇದನ್ನು ಕತ್ತರಿಯಿಂದ ಕತ್ತರಿಸಿಲ್ಲ ಎಂದು ನಮಗೆ ಹೇಗೆ ಗೊತ್ತು?" ಎಂದು ಕೇಳಿದರು.<br><br>ಅದರ ನಂತರ ಎರಡು ವಾರಗಳವರೆಗೆ ಪ್ರಾರ್ಥನೆಗಳು ಸಂಪೂರ್ಣವಾಗಿ ನಿಂತುಹೋದವು. "ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಇರುತ್ತದೆ ಆದ್ದರಿಂದ ಪ್ರಾರ್ಥನೆ ಸಭೆಗಳನ್ನು ಮಾಡದಿರುವುದು ಉತ್ತಮ. ನೀವು ಇನ್ನೂ ಅದನ್ನು ಮಾಡಲು ನಿರ್ಧರಿಸಿದರೆ ನಾವು ನಿಮ್ಮನ್ನು ರಕ್ಷಿಸಲು ಸಾಧ್ಯವಿಲ್ಲ" ಎಂದು ಪೊಲೀಸರು ನಮಗೆ ಹೇಳಿದರು.<br><br>ಪೊಲೀಸ್ ಅಧಿಕಾರಿಗಳು ನನ್ನನ್ನು ಹುಡುಕಿ ಮನೆಗೆ ಬರುತ್ತಿದ್ದನ್ನು ಕಂಡು ನನ್ನ ಮನೆ ಮಾಲೀಕರು ನಾನು ವಾಸಿಸುತ್ತಿದ್ದ ಮನೆಯನ್ನು ಖಾಲಿ ಮಾಡಲು ಹೇಳಿದರು ಮತ್ತು ಹೊಸ ಮನೆಯನ್ನು ಹುಡುಕಲು ನನಗೆ ಒಂದು ತಿಂಗಳ ಕಾಲಾವಕಾಶ ನೀಡಿದರು. ಎರಡು ವಾರಗಳ ನಂತರ ನಾನು ಅಂತಿಮವಾಗಿ ಮನೆಯನ್ನು ಹುಡುಕಿಕೊಂಡೆ ಮತ್ತು ನನ್ನ ವಸ್ತುಗಳನ್ನು ಕೊಂಡೊಯ್ಯಲಾರಂಭಿಸಿದೆ.<br><br>ಅದೊಂದು ದಿನ ನಾನು ವಿಚಾರಣೆಯ ಉದ್ದೇಶಕ್ಕಾಗಿ ಪೊಲೀಸ್ ಠಾಣೆಯಲ್ಲಿದ್ದಾಗ ಪೋಲೀಸ್ ಅಧಿಕಾರಿ, "ನೀವು ಈಗ ಎಲ್ಲಿ ವಾಸಿಸುತ್ತಿದ್ದೀರಿ?" ಎಂದು ಕೇಳಿದರು<br><br>"ನಾನು ಹೊಸ ಮನೆಯನ್ನು ಹುಡುಕಿಕೊಂಡೆ, ಸರ್." ಎಂದೆನು<br><br>"ನಿಮ್ಮ ಬಳಿ ಬಾಡಿಗೆ ಒಪ್ಪಂದ ಪತ್ರ ಇದೆಯೇ?"ಎಂದರು<br><br>ನಾನು ಹೌದು ಎಂದು ಹೇಳಿದೆ ಮತ್ತು ಪ್ರತಿಯನ್ನು ಅವರಿಗೆ ಕಳುಹಿಸಲು ಒಪ್ಪಿಕೊಂಡೆ. ಅವರು ನನ್ನ ಹೊಸ ಮಾಲೀಕರಿಗೆ ಕರೆ ಮಾಡಿ ಆದಷ್ಟು ಬೇಗ ನನ್ನನ್ನು ಹೊರಹಾಕುವಂತೆ ಹೇಳಿದರು.<br><br>ಈಗ ನಾನು 37 ಕಿಲೋಮೀಟರ್ ದೂರದಲ್ಲಿ ವಾಸಿಸುತ್ತಿದ್ದೇನೆ ಮತ್ತು ನನ್ನ ಹೊಸ ಮನೆಯಲ್ಲಿ ನಾನು ವಾಸಿಸಲು ಆರಂಭಿಸಿ ನಾಲ್ಕು ದಿನಗಳಾಗಿವೆ. | | | |

| | | | | | | |
|---|---|---|---|---|---|---|
| 24 | 20/09/21 | ತಾಳಗುಪ್ಪ ಗ್ರಾಮ, ಶಿವಮೊಗ್ಗ ಜಿಲ್ಲೆ ಕರ್ನಾಟಕ | ತಾಳಗುಪ್ಪಾ ರೈಲ್ವೇ ನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದ ಜ್ಯೋತಿ ಅವರಿಗೆ ಒಂದು ಬ್ಯಾಗ್ ಸಿಕ್ಕಿತು. ಅದು ಗ್ರೇಸ್ ಎನ್ನುವ ಮಹಿಳೆಗೆ ಸೇರಿದ್ದು ಎಂದು ತಿಳಿದು ಅದನ್ನು ಹಿಂತಿರುಗಿಸುವ ಸಲುವಾಗಿ ಬ್ಯಾಗ್ ಮಾಲೀಕರನ್ನು ಪತ್ತೆಹಚ್ಚಲು ಪಾದ್ರಿಯ ಸಹಾಯವನ್ನು ಕೇಳಿದಳು. ಈ ಕೆಲಸಕ್ಕಾಗಿ ಅವರೀರ್ವರೂ ಫೋನ್‌ನಲ್ಲಿ ಕೆಲಕಾಲ ಮಾತನಾಡುತ್ತಿದ್ದರು.<br>ಅದೊಂದು ದಿನ ಆಕೆ ಪಾದ್ರಿಯನ್ನು ತನ್ನ ಮನೆಗೆ ಕರೆದು ತನ್ನ ಸಮಸ್ಯೆಗಳನ್ನು ಹೇಳಿಕೊಂಡು ತನಗಾಗಿ ಪ್ರಾರ್ಥಿಸುವಂತೆ ವಿನಂತಿಸಿದಳು.<br>ಪಾದ್ರಿ ಅವಳೊಂದಿಗೆ ಸುವಾರ್ತೆಯನ್ನು ಹಂಚಿಕೊಂಡರು ಮತ್ತು ಅವಳಿಗೆ ಬೈಬಲ್ ಅನ್ನು ಉಡುಗೊರೆಯಾಗಿ ನೀಡಿದರು. ಆದರೆ ಪಾದ್ರಿ ಅಲ್ಲಿಂದ ಹೊರಡುವ ಸಮಯಕ್ಕೆ ತೀವ್ರವಾದಿಗಳ ಗುಂಪು ಏಕಾಏಕಿ ನುಗ್ಗಿ ಪಾದ್ರಿಯನ್ನು ಪೊಲೀಸ್ ಠಾಣೆಗೆ ಕರೆದೊಯ್ದಿದೆ. ಜ್ಯೋತಿ ಅವರು ಪಾಸ್ಟರ್ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಅದರ ಅನ್ವಯ ಅವರನ್ನು ಸೆಕ್ಷನ್ 295ಎ, 298 ಅಡಿಯಲ್ಲಿ ಬಂಧಿಸಲಾಗಿದೆ. | ಎಫ್.ಐ.ಆರ್ ( ವಿರುದ್ಧ) - 0250/2021<br>ಸೆಕ್ಷನ್: 295(ಎ), 298 & 34<br>ದಿನಾಂಕ: 20/9/2021 | https://drive.google.com/drive/folders/1SvhQU5EKKpRhymy4-LjuuYngbg7w0G6C? usp=sharing | ಬೆದರಿಕೆ, ತೊಂದರೆ ಮತ್ತು ಕಿರುಕುಳ, ಬಂಧನ |

| | | | | | | |
|---|---|---|---|---|---|---|
| 25 | 22/09/21 | ಹಾಸನ | 22ನೇ ಸೆಪ್ಟೆಂಬರ್ 2021 ರಂದು ಕರ್ನಾಟಕದ ಹಾಸನ ಜಿಲ್ಲೆಯ ಮಹಿಳೆಯೊಬ್ಬರು ಉದ್ಯಾನವನದಲ್ಲಿ ಕರಪತ್ರಗಳನ್ನು ಹಂಚುತ್ತಿದ್ದಾಗ ಕೆಲವು ಧಾರ್ಮಿಕ ತೀವ್ರವಾದಿಗಳು ಆಕೆಯನ್ನು ಪ್ರಶ್ನಿಸಿ ನಗರ ಪೊಲೀಸ್ ಠಾಣೆಗೆ ಕರೆದೊಯ್ದರು. ಈಕೆ ಆಮಿಷಗಳನ್ನೊಡ್ಡಿ ಮತಾಂತರ ಮಾಡುವಲ್ಲಿ ತೊಡಗಿದ್ದಾರೆ ಎಂದು ಧಾರ್ಮಿಕ ತೀವ್ರವಾದಿಗಳು ಆರೋಪಿಸಿದ್ದಾರೆ.<br>ನಂತರ ಆಕೆಯ ವಿರುದ್ಧ 295(ಎ) ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. | - | https://fb.watch/9FYGCsnij4/<br><br>https://fb.watch/9F_1ZMVLOG/ | ಬೆದರಿಕೆ, ತೊಂದರೆ, ಕಿರುಕುಳ |
| 26 | 19/09/21 | ಯಾದಗಿರಿ | 15 ಅನುಯಾಯಿಗಳಿಗಾಗಿ ಒಂದೇ ಪ್ರಾರ್ಥನಾ ಮಂದಿರದಲ್ಲಿ 8 ತಿಂಗಳ ಕಾಲ ವಾರಾಂತ್ಯದ ಪ್ರಾರ್ಥನೆಯನ್ನು ಪಾದ್ರಿಯೊಬ್ಬರು ಆಯೋಜಿಸುತ್ತಿದ್ದರು. ಅಂತಹ ಒಂದು ಭಾನುವಾರ 200 ಜನರು ಪ್ರಾರ್ಥನಾ ಮಂದಿರಕ್ಕೆ ಬಂದು ಕ್ರಿಶ್ಚಿಯನ್ ಧರ್ಮದ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು. ನರಸಪ್ಪ ಎಂಬ ಹೆಸರಿನ ಒಬ್ಬ ಪಂಚಾಯತ್ ಸದಸ್ಯ<br><br>ಹಾಗೂ ಗ್ರಾಮದ ಅನೇಕರು ಗುಂಪು ಸೇರಿ ಇನ್ನು ಮುಂದೆ ಚರ್ಚ್‌ಗೆ ಹೋಗದಂತೆ ಅನುಯಾಯಿಗಳ ಮೇಲೆ ಒತ್ತಡ ಹೇರಲು ಆರಂಭಿಸಿದರು. ಅವರು ಪಾದ್ರಿ ವಿರುದ್ಧ ನಿಂದನೀಯ ಭಾಷೆಯಲ್ಲಿ ಮಾತನಾಡಿದರು.<br><br>ಜನರ ಮೌಖಿಕ ನಿಂದನೆ ಮತ್ತು ಕೂಗಾಟ ಆರಂಭವಾದ ಐದು ನಿಮಿಷಗಳಲ್ಲಿ ಪೊಲೀಸರು ಬಂದರು. ಬಹುಶಃ ಅವರು ಹತ್ತಿರದಲ್ಲಿದ್ದರು ಏಕೆಂದರೆ ಇದು ನಡೆಯುತ್ತಿದೆ ಎಂದು ಅವರಿಗೆ ತಿಳಿದಿತ್ತು. ಪೊಲೀಸರು ಯಾವುದೇ ಮಾಹಿತಿ ನೀಡುವ ಮೊದಲು 4 ಕ್ರಿಶ್ಚಿಯನ್ನರನ್ನು ರಾತ್ರಿ 8 ಗಂಟೆಯವರೆಗೆ ಠಾಣೆಯಲ್ಲಿ ಬಂಧಿಸಿದ್ದಾರೆ. ಅವರು ಪಾದ್ರಿ, ಒಬ್ಬ ಮಹಿಳೆ, ಅವರ ಪತಿ ಮತ್ತು ಅವರ ಮಗನ ವಿರುದ್ಧ 295 ಎ ಅಡಿಯಲ್ಲಿ ದೂರು ದಾಖಲಿಸಿದರು, ಆದರೆ ಅವರನ್ನು ಮಾತಿನಲ್ಲಿ ನಿಂದಿಸುತ್ತಿರುವ ಹಿಂದುತ್ವದ ಗುಂಪಿನ ವಿರುದ್ಧ ದೂರು ದಾಖಲಿಸಲು ನಿರಾಕರಿಸಿದರು.<br><br>ಅವರ ವಕೀಲರು ಸಂಜೆ 5 ಗಂಟೆಗೆ ಪೊಲೀಸ್ ಠಾಣೆಗೆ ಬಂದರು ಚರ್ಚೆಯ ನಂತರವೂ ದೂರು ದಾಖಲಿಸಲು ಪೊಲೀಸರು ನಿರಾಕರಿಸಿದರು. ಕ್ರಿಶ್ಚಿಯನ್ನರ ಪರವಾಗಿ | - | https://drive.google.com/drive/folders/1tZn72UWhww1F9E9qX0p-zYJRjyFawovA?usp=sharing | ಬೆದರಿಕೆ, ತೊಂದರೆ, ಕಿರುಕುಳ ಮತ್ತು ಬಂಧನ |

| | | | | | | |
|---|---|---|---|---|---|---|
| | | | ಯಾವುದೇ ದೂರು ದಾಖಲಿಸದಂತೆ ಸಬ್ ಇನ್ಸ್‌ಪೆಕ್ಟರ್ ಸೂಚನೆ ನೀಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಅವರು 3 ದಿನಗಳು ಜೈಲಿನಲ್ಲಿದ್ದರು.<br><br>ಈಗ ಪ್ರಾರ್ಥನೆಗಳು ಸಂಪೂರ್ಣವಾಗಿ ನಿಂತುಹೋಗಿವೆ ಮತ್ತು ಆ ಗ್ರಾಮದ ಅನುಯಾಯಿಗಳು ಈಗ ಚರ್ಚ್‌ಗೆ ಬರುತ್ತಿಲ್ಲ. ತಮ್ಮ ಮಕ್ಕಳನ್ನು ಶಾಲೆಯಿಂದ ಹೊರಹಾಕುವುದಾಗಿ ಶಾಲಾ ಶಿಕ್ಷಕರಿಂದಲೂ ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ. ಪಡಿತರ ಅಂಗಡಿಗಳು ಮತ್ತು ಸಣ್ಣ ವ್ಯಾಪಾರಿಗಳು ಕ್ರಿಶ್ಚಿಯನ್ ಗ್ರಾಹಕರಿಗೆ ಮಾರಾಟ ಮಾಡಲು ನಿರಾಕರಿಸಲು ಪ್ರಾರಂಭಿಸಿವೆ. | | | |
| 27 | 26/09/21 | ಸಕಲೇಶಪುರ, ಹಾಸನ , ಕರ್ನಾಟಕ | ಚರ್ಚ್‌ನ ಚಟುವಟಿಕೆಗಳು ಮುಗಿಯುವುದರಲ್ಲಿದ್ದಾಗ ಹಿಂದೆಯೇ ಕಾದಿದ್ದ ದೊಡ್ಡ ಗುಂಪಿನಿಂದ ಇಬ್ಬರು (ದೀಪಕ್ ಮತ್ತು ಶಿವ) ಒಳಗೆ ನುಗ್ಗಿದರು ಮತ್ತು ಎಲ್ಲಾ ಅನುಯಾಯಿಗಳನ್ನು ನಿಂದನೀಯ ಅಸಭ್ಯ ಭಾಷೆ ಬಳಸಿ ಅವರ ಆಧಾರ್ ಕಾರ್ಡ್ ತೋರಿಸುವಂತೆ ಕೇಳಿದರು ಮತ್ತು ಅವರು ಯಾವ ಜಾತಿಯಲ್ಲಿ ಹುಟ್ಟಿದರು, ಚರ್ಚ್‌ಗೆ ಬರಲು ಎಷ್ಟು ಹಣ ನೀಡುತ್ತಿದ್ದಾರೆ ಮತ್ತು ಪಾದ್ರಿಗಳು ಅವರನ್ನು ಬಲವಂತವಾಗಿ ಪರಿವರ್ತಿಸುತ್ತಿದ್ದರಾ? ಎಂದು ಕೇಳಲು ಪ್ರಾರಂಭಿಸಿದರು . ಅವರು ಅಶ್ಲೀಲ ಭಾಷೆ ಬಳಸಿ ಇಬ್ಬರು ಮಹಿಳೆಯರನ್ನು ಮೌಖಿಕವಾಗಿ ನಿಂದಿಸಲು ಪ್ರಾರಂಭಿಸಿದರು. ಆ ಇಬ್ಬರು ಮಹಿಳೆಯರು ಸಹ ಅವರಿಗೆ ಬಲವಾಗಿ ಪ್ರತಿಕ್ರಿಯಿಸಿದರು. ಅವರು ಕರೆ ಮಾಡಿದ ತಕ್ಷಣ ಪೊಲೀಸರು ಒಳಗೆ ಪ್ರವೇಶಿಸಿದರು ಮತ್ತು ಎಸ್ಐ, ಕಾನ್ಸ್ಟೆಬಲ್ ಮತ್ತು ಚಾಲಕ ನಮ್ಮನ್ನು ನಿಂದಿಸಲು ಪ್ರಾರಂಭಿಸಿದರು ಮತ್ತು ಮಹಿಳೆಯರೊಂದಿಗೆ ತುಂಬಾ ಅಸಭ್ಯವಾಗಿ ಮಾತನಾಡಿದರು. ಪಾದ್ರಿಗಳಿಗೆ ಅಂದು ಸಂಜೆ ಪೊಲೀಸ್ ಠಾಣೆಗೆ ಬರಲು ಹೇಳಿದರು.<br><br>ಪೋಲೀಸರೊಬ್ಬರು ಎಲ್ಲವನ್ನೂ ವಿಡಿಯೋ ಮಾಡಿ ಚರ್ಚ್ ದಾಖಲೆಗಳು ನೀಡುವಂತೆ ಒತ್ತಾಯಿಸುತ್ತಿದ್ದರು. ಸಂಜೆ ಠಾಣೆಗೆ ಬರುವಾಗ ತಂದು ಕೊಡುತ್ತೇವೆ ಎಂದು ಪಾದ್ರಿಗಳು ಹೇಳಿದರು. ದೊಡ್ಡ ಗುಂಪು ಹೊರಗೆ ಕಾಯುತ್ತಿದೆ ಮತ್ತು ಅವರನ್ನು ಚದುರಿಸಲು ಮತ್ತು ಪರಿಸ್ಥಿತಿಯನ್ನು ನಿಯಂತ್ರಿಸಲು ಅವರು ದಾಖಲೆಗಳನ್ನು ನೋಡಬೇಕಾಗಿದೆ ಎಂದು ಹೇಳಿದರು.<br><br>ನಾವು ಠಾಣೆಗೆ ಹೋದಾಗ ಆಗಲೇ ನಮ್ಮ ವಿರುದ್ಧ | - | https://drive.google.com/drive/folders/1sIqtyJ_PKU_sPmftjDPHAGX5IZsaGs92?usp=sharing | ಬೆದರಿಕೆ, ತೊಂದರೆ, ಕಿರುಕುಳ |

| | | | | | | |
|---|---|---|---|---|---|---|
| | | | ಎಫ್‌ಐಆರ್ ದಾಖಲಾಗಿತ್ತು. ಪೊಲೀಸರು ನಮ್ಮ ಹೇಳಿಕೆಗಳನ್ನು ತೆಗೆದುಕೊಂಡರು. ಒಬ್ಬ ಮಹಿಳೆ ಮತ್ತು ನನ್ನ ಕಡೆಯಿಂದ ದೂರು ದಾಖಲಿಸಿದ್ದೇವೆ. ಇದು ಎಫ್‌ಐಆರ್ ಅಲ್ಲ ಕೇವಲ ನಮ್ಮ ರಕ್ಷಣೆಗಾಗಿ ನೀಡಿರುವ ದೂರು. | | | |

| | | | | | | |
|---|---|---|---|---|---|---|
| 28 | 26/09/21 | ಬ್ಯಾಡರಹಳ್ಳಿ ಪಿ.ಎಸ್, ಬೆಂಗಳೂರು ಕರ್ನಾಟಕ | ಸೆಪ್ಟೆಂಬರ್ 2021 ರ ಭಾನುವಾರದಂದು ಬೆಂಗಳೂರಿನ ಬ್ಯಾಡರಹಳ್ಳಿಯಲ್ಲಿರುವ ಸಣ್ಣ ಪ್ರಾರ್ಥನಾ ಮಂದಿರದಲ್ಲಿ, ಬೆಳಿಗ್ಗೆ 10 ಗಂಟೆಗೆ ಪ್ರಾರ್ಥನಾ ಸಭೆಯು ಆರಂಭವಾಯಿತು. ಕೋವಿಡ್ ಸಾಂಕ್ರಾಮಿಕ ರೋಗದಿಂದಾದ ಲಾಕ್‌ಡೌನ್‌ಗಳ ಸಮಯದಲ್ಲಿ ಕೆಲವು ತಿಂಗಳುಗಳನ್ನು ಹೊರತುಪಡಿಸಿ,<br>ಅವರು 12 ವರ್ಷಗಳಿಂದ ಪ್ರತಿ ಭಾನುವಾರ ಅದೇ ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದರು.<br><br>ಪ್ರಾರ್ಥನೆ ಆರಂಭವಾಗಿ ಒಂದು ಗಂಟೆಯ ತರುವಾಯ ಪುನೀತ್ ಕೆರಹಳ್ಳಿ ಎಂಬ ವ್ಯಕ್ತಿಯ ನೇತೃತ್ವದಲ್ಲಿ ಕೇಸರಿ ಸ್ಕಾರ್ಫ್ ಧರಿಸಿದ್ದ 10 ಜನರ ಗುಂಪು ಪ್ರಾರ್ಥನಾ ಮಂದಿರಕ್ಕೆ ನುಗ್ಗಿತು. ಗುಂಪು ತಮ್ಮ ಫೋನ್ ಗಳಲ್ಲಿ ವೀಡಿಯೊಗಳನ್ನು ತೆಗೆದುಕೊಳ್ಳುತ್ತಿದ್ದರು ಮತ್ತು ಭಕ್ತರು ಮತ್ತು ಪಾದ್ರಿಗಳ ಮೇಲೆ ಅಸಭ್ಯವಾಗಿ ಬೈಯುತ್ತಿದ್ದರು. ಅವರಲ್ಲಿ ಕೆಲವರು ಆರ್‌ಎಸ್‌ಎಸ್‌ನ ಸಕ್ರಿಯ ಕಾರ್ಯಕರ್ತರು.<br><br>ಅವರು “ಇಂತಹ ಪ್ರಾರ್ಥನಾ ಸಭೆಗಳನ್ನು ನಡೆಸಲು ನೀವು ಪಡೆದ ಅನುಮತಿಯನ್ನು ನಮಗೆ ತೋರಿಸಿ? ನಿಮಗೆ ಸ್ಪೀಕರ್ ಬಳಸಲು ಯಾರು ಅನುಮತಿ ನೀಡಿದರು?” ಎಂದು ಕೇಳಿದರು.<br><br>“ನಿಮ್ಮ ಹೆಸರು ಮತ್ತು ನಿಮ್ಮ ಜಾತಿಯನ್ನು ನಮಗೆ ತಿಳಿಸಿ! ನೀವು ಯಾವ ಕುಟುಂಬದಲ್ಲಿ ಜನಿಸಿದವರು? ನಿಮ್ಮ ಮನೆ ಎಲ್ಲಿದೆ? ” ಎಂಬ ಪ್ರಶ್ನೆಗಳಿಗೆ ಉತ್ತರ ಹೇಳುವಂತೆ ಅನುಯಾಯಿಗಳನ್ನು ಒತ್ತಾಯಿಸುತ್ತಾ ಮತ್ತಷ್ಟು ವಿಡೀಯೋಗಳನ್ನು ಮಾಡಿದರು.<br><br>ಅನುಯಾಯಿಗಳು ಕ್ರಿಸ್ತನಲ್ಲಿ ನಂಬಿಕೆಯಿಟ್ಟಿದ್ದೇವೆ ಎಂದು ವಿವರಿಸಲು ಪ್ರಯತ್ನಿಸಿದರು. ಆದಾಗ್ಯೂ ಅವರ ಹೆಸರುಗಳು ಇನ್ನೂ ಹಿಂದೂ ಹೆಸರುಗಳಾಗಿರುವುದನ್ನು ಗಮನಿಸಿದ ಆ ಗುಂಪು ತಮ್ಮ ವೀಡಿಯೊದಲ್ಲಿ ಹೀಗೆ ಘೋಷಿಸಲು ಪ್ರಾರಂಭಿಸಿತು, “ಈ ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಬಲವಂತವಾಗಿ ಮತಾಂತರಿಸುವುದನ್ನು ನೋಡಿ! ಪಾದ್ರಿಗಳು ಮತ್ತು ಚರ್ಚುಗಳಿಗೆ ಅಂತರಾಷ್ಟ್ರೀಯ ಕ್ರಿಶ್ಚಿಯನ್ ಸಂಸ್ಥೆಗಳಿಂದ ದಂಡಿಯಾಗಿ ಹಣ ಬರುತ್ತಿದೆ. ಇವರ ವಿರುದ್ಧ ಕ್ರಮ ಕೈಗೊಳ್ಳಲು ನಾವಿಲ್ಲದ್ದೇವೆ ಎಂದು ಅಬ್ಬರಿಸುತ್ತಿದ್ದರು.<br><br>ಅನುಯಾಯಿಗಳು ತಮ್ಮ ಅಜ್ಜಿ/ತಾತಂದಿರೂ ಸಹ ಕ್ರಿಶ್ಚಿಯನ್ನರಾಗಿದ್ದರು ಎಂದು ವಿವರಿಸಿ ಅವರನ್ನು ಶಾಂತಗೊಳಿಸಲು ಪ್ರಯತ್ನಿಸಿದರಾದರೂ ಅವರ ಪ್ರಯತ್ನ ವ್ಯರ್ಥವಾಯಿತು. ಸ್ವಲ್ಪ ಸಮಯದ ನಂತರ ನಾವು ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಹೋದಾಗ ಕೆಲವು ಅನುಯಾಯಿಗಳು ನಮ್ಮೊಂದಿಗೆ ಸೇರಿಕೊಂಡರು. ಆಗ 20-30 ಜನರ ದೊಡ್ಡ ಗುಂಪು | - | https://drive.google.com/drive/folders/1ZnBMeGVE2I1h2THAPS5XkKQIFJwF12fk?usp=sharing | ಬೆದರಿಕೆ, ತೊಂದರೆ ಮತ್ತು ಕಿರುಕುಳ |

| | | | | | | |
|---|---|---|---|---|---|---|
| | | ೬ | ಸೇರಿತು.<br><br>ಈ ಜನರಲ್ಲಿ ಕೆಲವರು ಚರ್ಚ್‌ನ ನೆರೆಹೊರೆಯವರಾಗಿದ್ದರು ಅವರು ತುಂಬಾ ಕೋಪದಿಂದ ಮಾತನಾಡಿದರು. "ಈ ಕ್ರಿಶ್ಚಿಯನ್ನರು ಪ್ರತಿದಿನ ಗಲಾಟೆ ಮಾಡುತ್ತಾರೆ ಮತ್ತು ಇದರಿಂದ ಇಡೀ ರಸ್ತೆಯಲ್ಲಿ ಕೆಲಸ ಮಾಡಲು, ಮಲಗಲು ಅಥವಾ ಓದಲು ಸಾಧ್ಯವಾಗುವುದಿಲ್ಲ." ನಾವು ನಗರದಲ್ಲಿ ನಿತ್ಯವೂ ಸಂವಾದ ನಡೆಸುತ್ತಿದ್ದ ಜನರೂ ಈ ಗುಂಪಿನೊಂದಿಗೆ ಸೇರಿ ನಮ್ಮ ವಿರುದ್ಧದ ಹೋರಾಟಕ್ಕೆ ಉತ್ತೇಜನ ನೀಡುವುದನ್ನು ನೋಡಿ ನನಗೆ ತುಂಬಾ ಆಘಾತವಾಯಿತು.<br><br>ತಾವು ಭಾನುವಾರದಂದು ಮಾತ್ರ ಪ್ರಾರ್ಥನಾ ಸಭೆಗಳನ್ನು ನಡೆಸುತ್ತೇವೆ ಮತ್ತು ಇದು ಕಳೆದ 12 ವರ್ಷಗಳಿಂದ ನಡೆಯುತ್ತಿದೆ ಎಂದು ಪಾದ್ರಿ ಪ್ರತಿಕ್ರಿಯಿಸಿದರು. "ನಮ್ಮ ಧ್ವನಿವರ್ಧಕದಿಂದ ಬೇರೆಯವರಿಗೆ ತೊಂದರೆಯಾಗುತ್ತಿದೆ ಎಂದು ಒಮ್ಮೆಯಾದರೂ ಹೇಳಿದ್ದರೆ ನಾವು ಅದನ್ನು ಬಳಸುತ್ತಿರಲಿಲ್ಲ. ನಮ್ಮ ಪ್ರದೇಶದಲ್ಲಿ ಗೊಂದಲವನ್ನು ಉಂಟುಮಾಡಿದ್ದಕ್ಕಾಗಿ ನಾನು ತುಂಬಾ ವಿಷಾದಿಸುತ್ತೇನೆ. " ಎಂದು ಅವರು ಗುಂಪು ಮತ್ತು ಕೆಲವು ಪೊಲೀಸ್ ಪೇದೆಗಳಿಗೆ ವಿವರಿಸಲು ಪ್ರಯತ್ನಿಸಿದರು.<br><br>ಪುನೀತ್ ಮತ್ತು ಗುಂಪಿನ ಇತರ ಇಬ್ಬರು ವ್ಯಕ್ತಿಗಳು ಇದ್ದಕ್ಕಿದ್ದಂತೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳಲು ಬಲವಂತಪಡಿಸುತ್ತಿದ್ದಾರೆ ಎಂದು ಪೊಲೀಸರಿಗೆ ಹೇಳಲು ಪ್ರಾರಂಭಿಸಿದರು ಮತ್ತು ಅವರು ಸುವಾರ್ತೆಯ ಕುರಿತು ಕೆಲವು ಕರಪತ್ರಗಳನ್ನು ಪೊಲೀಸರಿಗೆ ತೋರಿಸಿದರು. ಆದರೆ ಪಾದ್ರಿ 'ನಾನು ಈ ವ್ಯಕ್ತಿಯನ್ನು ನೋಡಿಲ್ಲ' ಎಂದು ಪೊಲೀಸರಿಗೆ ತಿಳಿಸಿದ್ದಾರೆ.<br><br>ಮತ್ತೊಬ್ಬ ವ್ಯಕ್ತಿ ತನ್ನನ್ನು ಆಂಜನೇಯನ ಭಕ್ತ ಎಂದು ಪರಿಚಯಿಸಿಕೊಂಡು, ನಾನು ಹಿಂದೂ ದೇವರುಗಳನ್ನು ನಿಂದಿಸುತ್ತಿದ್ದೇನೆ ಎಂದು ಅವನು ಆರೋಪಿಸಿದನು. ತಾನಾಗಲೀ ಅಥವಾ ತನಗೆ ತಿಳಿದಿರುವ ಯಾವುದೇ ಪಾದ್ರಿಯಾಗಲಿ ಇದನ್ನು ಮಾಡಲು ಸಾಧ್ಯವಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು. ಆದರೆ ಆತನು ನಾವು ಸುಳ್ಳು ಕಥೆಗಳನ್ನು ಹೇಳುತ್ತಿದ್ದೇವೆ ಎಂದು ಪೊಲೀಸರಿಗೆ ತಿಳಿಸಿದನು.<br><br>ಕೊನೆಗೆ ಪೊಲೀಸರು ಗುಂಪನ್ನು ಚದುರಿಸಲು ನಡೆಸಿದ ಪ್ರಯತ್ನ ವ್ಯರ್ಥವಾಯಿತು. ಪ್ರಾರ್ಥನಾ ಸಭೆಯಲ್ಲಿ ಕೋವಿಡ್ ಪ್ರೋಟೋಕಾಲ್‌ಗಳನ್ನು ಉಲ್ಲಂಘಿಸಿದ್ದಕ್ಕಾಗಿ ದಂಡ ಪಾವತಿಸಲು ಒಬ್ಬ ಅಧಿಕಾರಿ ನಮ್ಮನ್ನು ಕೇಳಿದರು. ಹೀಗಾಗಿ ದಂಡ ಪಾವತಿಸಿ ನಮ್ಮ ಮನೆಗಳಿಗೆ ಮರಳಿದೆವು.<br><br>ನಂತರ ಎರಡು ದಿನಗಳ ಕಾಲ ಈ ಗುಂಪು ಪೊಲೀಸ್ | | | |

| | | | | | | |
|---|---|---|---|---|---|---|
| | | | ಠಾಣೆ ಹಾಗೂ ಬಿಬಿಎಂಪಿ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಲೇ ಇತ್ತು. ಪೊಲೀಸರು ಎಲ್ಲಾ ಕ್ರಿಶ್ಚಿಯನ್ನರ ಮನೆಗಳಿಗೆ ಭೇಟಿ ನೀಡಿ ನಾವು ಬಲವಂತವಾಗಿ ಮತಾಂತರ ಮಾಡುತ್ತಿದ್ದೇವೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ವಿವರವಾದ ವಿಚಾರಣೆ ನಡೆಸಿದರು.<br><br>ಕೆಲವೇ ದಿನಗಳಲ್ಲಿ ಬಿಬಿಎಂಪಿಯು ಚರ್ಚ್‌ಗೆ ಇನ್ನು ಮುಂದೆ ಪ್ರಾರ್ಥನೆ ನಡೆಸಬಾರದೆಂದು ನೋಟೀಸ್ ಜಾರಿಮಾಡಿತು. ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲು ಪಾದ್ರಿಗಳು ಹಣ ನೀಡುತ್ತಿದ್ದಾರೆಯೇ ಎಂದು ತಿಳಿಯಲು ಪೊಲೀಸರು ಎರಡನೇ ಸುತ್ತಿನ ವಿಚಾರಣೆ ನಡೆಸಿದರು.<br><br>ಕೆಲವು ದಿನಗಳ ನಂತರ ಹೊಸ ಪೊಲೀಸ್ ಇನ್ಸ್‌ಪೆಕ್ಟರ್ ಬಂದರು ಅವರು ಪ್ರಾರ್ಥನಾ ಸಭೆಗಳನ್ನು ಪುನರಾರಂಭಿಸಲು ಅವರಿಗೆ ಸಹಾಯ ಮಾಡಿದರು ಮತ್ತು ಯಾವುದೇ ರೀತಿಯ ಭಯವಿಲ್ಲದೆ ಮುಂದುವರಿಯಬಹುದೆಂದು ಅವರಿಗೆ ಭರವಸೆ ನೀಡಿದರು. ಬಿಬಿಎಂಪಿಗೆ ಉಚಿತವಾಗಿ ಪ್ರತಿಕ್ರಿಯಿಸುವಂತೆ ಪಾದ್ರಿಗಳಿಗೆ ಹೇಳಿದರು ಮತ್ತು ಅವರಿಗೆ ಅನುಮತಿ ನೀಡುವಂತೆ ಬಿಬಿಎಂಪಿ ಗೆ ಮನವಿ ಮಾಡಿಕೊಳ್ಳಿ ಎಂದು ಸೂಚಿಸಿದರು. | | | |

| | | | | | | |
|---|---|---|---|---|---|---|
| 29 | 03/10/21 | ಕಂದಾವರ ಚಿಕ್ಕಬಳ್ಳಾಪುರ ಕರ್ನಾಟಕ | ಅಕ್ಟೋಬರ್ 03, 2021 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಪಾದ್ರಿಯೊಬ್ಬರು ಪ್ರಾರ್ಥನೆ ಮಾಡುತ್ತಿದ್ದಾಗ ಧಾರ್ಮಿಕ ತೀವ್ರವಾದಿಗಳ ಗುಂಪು ಪಾದ್ರಿಯನ್ನು ಚರ್ಚ್ ಒಳಗೆ ಕೂಡಿ ಬೀಗ ಹಾಕಿದರು.<br><br>ನಂತರ ತೀವ್ರವಾದಿಗಳು ಪೊಲೀಸರನ್ನು ಕರೆದರು ಅವರು ಯಾವುದೇ ವಿಚಾರಣೆಯಿಲ್ಲದೆ ಪಾದ್ರಿಯನ್ನು ಬಂಧಿಸಿದರು. ಆತನ ವಿರುದ್ಧ ಐಪಿಸಿ ಸೆಕ್ಷನ್ 295ಎ ಅಡಿಯಲ್ಲಿ ಎಫ್ಐಆರ್ ದಾಖಲಿಸಲಾಗಿದೆ. | ಎಫ್ ಐ ಆರ್ (ವಿರುದ್ಧ)- 0075/2021 ದಿನಾಂಕ- 3/10/2021 295ಎ ಸೆಕ್ಷನ್ | https://drive.google.com/drive/folders/1TWtacmje3GlCDkL4FTfyw7vpwlk18vOY?usp=sharing | ಬೆದರಿಕೆ, ತೊಂದರೆ, ಮತ್ತು ಕಿರುಕುಳ, ಧಾರ್ಮಿಕ ಸಭೆಗಳಿಗೆ ನಿಬಂಧ |
| 30 | 03/10/21 | ನಾಗಮಂಗಲ, ಮಂಡ್ಯ ಕರ್ನಾಟಕ | ಅಕ್ಟೋಬರ್ 3, 2021 ರಂದು ಪಾದ್ರಿಯೊಬ್ಬರು ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದಾಗ ಆ ಪ್ರದೇಶದ ಪೊಲೀಸ್ ಇನ್ಸ್‌ಪೆಕ್ಟರ್ ಬಂದು ಕೋವಿಡ್ ನಿಯಮಾವಳಿಗಳನ್ನು ಪಾಲಿಸುತ್ತಿಲ್ಲವಾಗಿ ಆರೋಪಿಸಿದ್ದಲ್ಲದೆ ಚರ್ಚ್ ಕಟ್ಟಡಕ್ಕೆ ಸರಿಯಾದ ದಾಖಲೆಗಳಿಲ್ಲವೆಂದು ಪಾದ್ರಿಯನ್ನು ಬಂಧಿಸಿದರು.<br><br>ಪ್ರಾರ್ಥನೆ ಸೇವೆಗಳಿಗಾಗಿ ಚರ್ಚ್ ಅನ್ನು ತೆರೆಯದಂತೆ ಎಚ್ಚರಿಕೆ ನೀಡಿದ ನಂತರ ಸಂಜೆ ಪಾದ್ರಿಯನ್ನು (ಸಂತ್ರಸ್ಥ) ಬಿಡುಗಡೆ ಮಾಡಲಾಯಿತು. ಚರ್ಚ್ ತೆರೆಯಲು ಅನುಮತಿ ನೀಡುವಂತೆ ಅರ್ಜಿಯೊಂದಿಗೆ ತಹಸೀಲ್ದಾರ್ ಅವರನ್ನು ಸಂಪರ್ಕಿಸಲಾಗಿದೆ ಅಲ್ಲಿಂದ ಜಿಲ್ಲಾಧಿಕಾರಿಗಳ ಬಳಿ ಕಳುಹಿಸಲಾಗಿದೆ ಆದರೆ ಇನ್ನೂ ಯಾವ ತೀರ್ಮಾನವನ್ನು ಕೊಟ್ಟಿಲ್ಲ. ನಾವು ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಕರೆ ಮಾಡಿದಾಗ ಅವರು ಪಾದ್ರಿಯ ಮನೆಗೆ ಹೋಗಿ ಪಾದ್ರಿಯ ಬಳಿ ಕ್ಷಮೆ ಕೇಳಿದರು ಮತ್ತು ಪ್ರಾರ್ಥನಾ ಸಭೆಗಳನ್ನು ಮುಂದುವರಿಸುವಂತೆ ಹೇಳಿದರು. | - | | ಧಾರ್ಮಿಕ ಸಭೆಗೆ ನಿಬಂಧ |
| 31 | 03/10/21 | ಸೋಮವಾರ ಸಂತೆ, ಕೊಡಗು ಕರ್ನಾಟಕ | ಅಕ್ಟೋಬರ್ 3 2021 ರಂದುಪಾದ್ರಿಯೊಬ್ಬರು ಸುಮಾರು 20 ಸದಸ್ಯರೊಂದಿಗೆ ಚರ್ಚ್ ಸೇವೆಯಲ್ಲಿ ತೊಡಗಿದ್ದಾಗ ಪೊಲೀಸರು ಅವರನ್ನು ಅಡ್ಡಿಪಡಿಸಿದರು ಮತ್ತು ಮನೆಯಲ್ಲಿ ಪ್ರಾರ್ಥನೆ ಸೇವೆಯನ್ನು ನಡೆಸಲು ಅನುಮತಿ ಎಲ್ಲಿದೆ ತೋರಿಸಿ ಎಂದು ಕೇಳಲಾಯಿತು. | - | | ಧಾರ್ಮಿಕ ಸಭೆಗೆ ನಿಬಂಧ |

| | | | | | | |
|---|---|---|---|---|---|---|
| | | | ಆತನ ವಿರುದ್ಧ ಎಫ್ಐಆರ್ ಇದ್ದು, ದೂರು ಸ್ವೀಕರಿಸಲು ಪೊಲೀಸರು ನಿರಾಕರಿಸಿದ್ದರಿಂದ ಎಸ್‌ಪಿ ಅವರನ್ನು ಭೇಟಿ ಮಾಡಿದರು. ಪೊಲೀಸರು ಪಾದ್ರಿ ಮತ್ತು ಆತನ ಪತ್ನಿ ಮತ್ತು ಮಗಳ ವಿರುದ್ಧ ಎಫ್ಐಆರ್ ದಾಖಲಿಸಿದ್ದಾರೆ. | | | |
| 32 | 04/10/21 | ಹುಟೇನಹಳ್ಳಿ ಮೈಸೂರು | ಅಕ್ಟೋಬರ್ 4, 2021 ರಂದು ಕರ್ನಾಟಕದ ಮೈಸೂರು ಜಿಲ್ಲೆಯಲ್ಲಿ ಪಾದ್ರಿಯೊಬ್ಬರ ಮೇಲೆ ತೀವ್ರವಾದಿಗಳ ಗುಂಪು ದಾಳಿ ಮಾಡಿತು ಮತ್ತು ಅದರಿಂದ ಅವರ ಮುಖ ಮತ್ತು ತಲೆಗೆ ಗಾಯವಾಗಿದೆ. | - | | ಬೆದರಿಕೆ, ತೊಂದರೆ ಮತ್ತು ಕಿರುಕುಳ, ದೈಹಿಕ ಹಲ್ಲೆ |
| 33 | 04/10/21 | ಮುಂದವಾಡ, ಕಾರವಾರ, ಕರ್ನಾಟಕ | ಕಾರವಾರದ ಈ ಗ್ರಾಮದಲ್ಲಿ ಸುಮಾರು 3ರಿಂದ 4 ಕ್ರೈಸ್ತರ ಮನೆಗಳಿವೆ. ಒಂದು ದಿನ ಪಂಚಾಯತಿಯವರು ಗ್ರಾಮದ 4 ಕ್ರೈಸ್ತರ ಮನೆಯವರನ್ನು ಕರೆದರು. ನಾಲ್ವರಲ್ಲಿ ಎರಡು ಕುಟುಂಬಗಳು ಪಂಚಾಯಿತಿಗೆ ಹೋದವು. ಅಲ್ಲಿ ಅವರ ನಂಬಿಕೆಯ ಬಗ್ಗೆ ಮತ್ತು ಇದು ಅವರ ಆಯ್ಕೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸಾಕಷ್ಟು ವೈಯಕ್ತಿಕ ಮತ್ತು ಖಾಸಗಿಯಾದ ಪ್ರಶ್ನೆಗಳನ್ನು ಕೇಳಲಾಯಿತು.<br>ಎರಡು ಮನೆಯವರಿಗೆ ಕ್ರೂರವಾಗಿ ಕಿರುಕುಳ ನೀಡಲಾಗಿದೆ ಮತ್ತು ದೈಹಿಕ ಹಲ್ಲೆಯಿಂದ ಗಾಯಗೊಂಡಿದ್ದಾರೆ. ಸ್ವಲ್ಪ ಸಮಯದ ನಂತರ ಪೊಲೀಸರು ಆಗಮಿಸಿದರು ಮತ್ತು ಗ್ರಾಮದಲ್ಲಿರುವ ಪಂಚಾಯತ್ ಸದಸ್ಯರು ಮತ್ತು ಇತರರಿಗೆ ಕ್ರಿಶ್ಚಿಯನ್ನರನ್ನು ಏಕಾಂಗಿಯಾಗಿ ಬಿಡುವಂತೆ ಒತ್ತಾಯಿಸಿದರು. ಇದು ಅವರ "ರಾಜಿ"ಯ ಕಲ್ಪನೆಯಾಗಿತ್ತು. ಅವರು ಗ್ರಾಮಸ್ಥರು ಮತ್ತು ಕ್ರೈಸ್ತರಿಂದ ಹೇಳಿಕೆ ಪಡೆದರು.<br>ಕ್ರಿಶ್ಚಿಯನ್ನರನ್ನು ನಿಂದಿಸಿದ ಕೆಲವು ಪಂಚಾಯತ್ ಮುಖಂಡರು ಮತ್ತು ಇತರರ ವಿರುದ್ಧ ಪಾದ್ರಿಗಳು ದೂರು ದಾಖಲಿಸಿದರು. ಆದರೆ ಆ ಗ್ರಾಮದ ಪೊಲೀಸರು ಮಾಜಿ ಶಾಸಕ ಹಾಗೂ ಹಾಲಿ ಬಿಜೆಪಿ ಸದಸ್ಯ ಸುನೀಲ್ ಹೆಗಡೆ ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಕ್ರೈಸ್ತರು ಪ್ರಾರ್ಥನಾ ಸಭೆಗಳಿಗೆ ಹೋಗುವುದನ್ನು | - | | ಬೆದರಿಕೆ, ತೊಂದರೆ, ದೈಹಿಕ ಹಲ್ಲೆ, ಕಿರುಕುಳ |

| | | | | | | |
|---|---|---|---|---|---|---|
| | | | ನಿರ್ಬಂಧಿಸಬಾರದು ಎಂದು ಪಾದ್ರಿಗಳು ಪ್ರತಿಪಾದಿಸಲು ಪ್ರಯತ್ನಿಸಿದರು.<br><br>ಎಲ್ಲಾ ನಾಲ್ಕು ಕುಟುಂಬಗಳು ಸಾಮಾಜಿಕ ಬಹಿಷ್ಕಾರ ಮತ್ತು ಬಹಿಷ್ಕಾರದ ಬೆದರಿಕೆಗಳನ್ನು ಎದುರಿಸುತ್ತಲೇ ಇವೆ. ಅವರು ಯಾವುದೇ ಉದ್ಯೋಗ ಅಥವಾ ಅಂಗಡಿಗಳಿಂದ ಯಾವುದೇ ಸರಕುಗಳನ್ನು ಕೊಳ್ಳಲು ನಿರಾಕರಿಸಲಾಗುತ್ತಿದೆ. ಎರಡು ಕುಟುಂಬಗಳು ಜೀವನೋಪಾಯವನ್ನು ಕಳೆದುಕೊಂಡು ಸಂಕಷ್ಟದಲ್ಲಿವೆ.<br><br>ಈ ಗ್ರಾಮದಲ್ಲಿ ಭಾರತೀಯ ಜನತಾ ಪಾರ್ಟಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಹಿಂದೂ ಜಾಗರಣಾ ವೇದಿಕೆ ಬಹಳ ಸಕ್ರಿಯವಾಗಿವೆ.<br><br>"ಈ ಕ್ರಿಶ್ಚಿಯನ್ನರು ತಮ್ಮ ದೈವವನ್ನು ಸ್ವಯಂಪ್ರೇರಣೆಯಿಂದ ಒಪ್ಪಿಕೊಂಡಿದ್ದಾರೆ ಮತ್ತು ಸಹೋದರತ್ವದ ಮೌಲ್ಯವನ್ನು ಗೌರವಿಸುತ್ತಾರೆ. ಆದರೆ ಇಲ್ಲಿ ಅವರಿಗೆ ಬದುಕಲು ಸಹ ಅವರಿಗೆ ಅವಕಾಶವಿಲ್ಲ." ಎಂಬುದಾಗಿ ಪಾದ್ರಿ ಹೇಳಿದರು. | | | |

| | | | | | | |
|---|---|---|---|---|---|---|
| 34 | 10/10/21 | ಸೋಲದೇವನ ಹಳ್ಳಿ ಪೊಲೀಸ್ ಠಾಣೆ, ಸೋಲದೇವನ ಹಳ್ಳಿ, ಬೆಂಗಳೂರು | ಪಾದ್ರಿಯೊಬ್ಬರು ಅಕ್ಟೋಬರ್ ತಿಂಗಳಿನ ಒಂದು ಭಾನುವಾರದಂದು ಪ್ರಾರ್ಥನಾ ಸೇವೆಯನ್ನು ನಡೆಸುತ್ತಿದ್ದರು. ಏಕಾಏಕಿ ನಾಲ್ಕು ಮಂದಿ ಕೋಣೆಗೆ ನುಗ್ಗಿ ಪಾದ್ರಿಯನ್ನು ಬೈಯಲು ಆರಂಭಿಸಿದರು. ನಂತರ 40 ಜನರು ಜಮಾಯಿಸಿ ಆತನೊಂದಿಗೆ ಜಗಳವಾಡಿದರು. ಅವರು ಪಾದ್ರಿಯನ್ನು ಹೊರಗೆ ಬರುವಂತೆ ಹೇಳಿದರು ಮತ್ತು ನಂತರ ಅವರನ್ನು ಸಾಕಷ್ಟು ನಿಂದಿಸಿದರು. ಅವರು ಬಲವಂತವಾಗಿ ಹಿಂದೂಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಬಲವಂತವಾಗಿ ಮತಾಂತರಿಸುತ್ತಿದ್ದೀಯ ಎಂದು ಆರೋಪಿಸಿದರು.<br><br>ಅವರ ಚರ್ಚ್ ಅನ್ನು ಸುಲಭವಾಗಿ ಗೂಗಲ್ ನಕ್ಷೆಗಳಲ್ಲಿ ಕಾಣಬಹುದು ಎಂಬುದೇ ಅವರು ಕೋಪಗೊಳ್ಳಲು ಇರುವ ಕಾರಣಗಳಲ್ಲೊಂದಾಗಿತ್ತು. ಇದು ಸ್ವೀಕಾರಾರ್ಹವಲ್ಲ ಎಂದು ಅವರು ಹೇಳಿದರು.<br><br>ಕೆಲವೇ ಕ್ಷಣಗಳಲ್ಲಿ ಪೊಲೀಸರು ಆಗಮಿಸಿ ಎಲ್ಲರನ್ನೂ ಠಾಣೆಗೆ ಕರೆದೊಯ್ದರು. ಸಬ್ ಇನ್ಸ್ ಪೆಕ್ಟರ್ ಪರಿಸ್ಥಿತಿ ತಿಳಿಗೊಳಿಸಲು ಯತ್ನಿಸಿದರು. ಆದರೆ ಆಘಾತಕಾರಿ ಸಂಗತಿಯೆಂದರೆ ಅವರು ಅನುಯಾಯಿಗಳಿಗೆ ಅವರ ವೈಯಕ್ತಿಕ ವಿವರಗಳ ಬಗ್ಗೆ ಸರಣಿ ಪ್ರಶ್ನೆಗಳನ್ನು ಕೇಳಿದರು. “ನೀವು ಯಾವ ಜಾತಿಯಲ್ಲಿ ಹುಟ್ಟಿದ್ದೀರಿ? ನಿಮ್ಮ ಮೂಲಸ್ಥಾನ(ಹುಟ್ಟೂರು) ಯಾವುದು? ನೀವು ಚರ್ಚಿಗೆ ಏಕೆ ಹೋಗುತ್ತಿದ್ದೀರಿ? ಚರ್ಚ್‌ಗೆ ಹೋಗಲು ನಿಮಗೆ ಯಾರು ಹಣ ಕೊಡುತ್ತಾರೆ?”<br><br>ಅವರು ಚರ್ಚ್‌ನ ಪಾದ್ರಿಯ ಐಡಿ ನೇಮಕಾತಿ ಪತ್ರ, ದಾಖಲೆಗಳು ಮತ್ತು ನೋಂದಣಿ ದಾಖಲೆಗಳನ್ನು ಸಹ ಕೇಳಿದರು.<br><br>ಈಗ ಪ್ರಾರ್ಥನೆಗಳು ಸಂಪೂರ್ಣವಾಗಿ ನಿಂತಿವೆ. | - | | ಬೆದರಿಕೆ, ಧಾರ್ಮಿಕ ಸಭೆಗಳಿಗೆ ನಿರ್ಬಂಧ |

| | | | | | | |
|---|---|---|---|---|---|---|
| 35 | 10/10/21 | ಉಡುಪಿ ಕರ್ನಾಟಕ | ಅಕ್ಟೋಬರ್ 10, 2021 ರಂದು ಪಾದ್ರಿಯೊಬ್ಬರು ಭಾನುವಾರದ ಪ್ರಾರ್ಥನೆಯನ್ನು ನಡೆಸುತ್ತಿದ್ದಾಗ ಧಾರ್ಮಿಕ ತೀವ್ರವಾದಿಗಳು ಸಲ್ಲಿಸಿದ ಧಾರ್ಮಿಕ ಮತಾಂತರದ ಸುಳ್ಳು ಆರೋಪದ ಮೇಲೆ ಪೊಲೀಸರು ಅವರನ್ನು ಅಡ್ಡಿಪಡಿಸಿದರು.<br><br>ಪಾದ್ರಿ ಒಬ್ಬ ಮಹಿಳೆ ಮತ್ತು ಇತರ ಇಬ್ಬರು ಕ್ರಿಶ್ಚಿಯನ್ನರನ್ನು ಪೊಲೀಸರು ಬಂಧಿಸಿದ್ದಾರೆ ಮತ್ತು ಅವರ ವಿರುದ್ಧ ಐಪಿಸಿ ಸೆಕ್ಷನ್ 295 ಎ ಅಡಿಯಲ್ಲಿ ಎಫ್ ಐ ಆರ್ ದಾಖಲಿಸಲಾಗಿದೆ. | - | https://drive.google.com/drive/folders/1HPAteqBSOaHNIegDaIF5AOYDPvlX8C0-?usp=sharing | ಬೆದರಿಕೆ ಮತ್ತು ಕಿರುಕುಳ |
| 36 | 10/10/21 | ಹಳಿಯಾಳ, ಉತ್ತರ ಕನ್ನಡ, ಕರ್ನಾಟಕ | ಸೆಪ್ಟೆಂಬರ್ 10, 2021 ರಂದು ಪಾದ್ರಿಯೊಬ್ಬರು ಬಾಡಿಗೆ ಮನೆಯಲ್ಲಿ ಭಾನುವಾರದ ಪ್ರಾರ್ಥನೆಯನ್ನು ನಡೆಸುತ್ತಿದ್ದಾಗ ಧಾರ್ಮಿಕ ತೀವ್ರವಾದಿಗಳ ಗುಂಪು ಅವರ ಸೇವೆಗೆ ಅಡ್ಡಿಪಡಿಸಿತು ಅವರ ಮೇಲೆ ಧಾರ್ಮಿಕ ಮತಾಂತರದ ಆರೋಪ ಮಾಡಿದರು ಜೊತೆಗೆ ಮನೆಯಲ್ಲಿದ್ದ ಕ್ರೈಸ್ತರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು.<br><br>ಗುಂಪು ಹಳಿಯಾಳ ಠಾಣೆಯ ಪೊಲೀಸರಿಗೆ ಕರೆ ಮಾಡಿದಾಗ ಪೊಲೀಸರು ಜಾಗಕ್ಕೆ ಧಾವಿಸಿ ಕುಟುಂಬಸ್ಥರಿಗೆ ಮಾತ್ರ ಮನೆಯಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶವಿದೆ ಎಂದು ಕ್ರೈಸ್ತರಿಗೆ ತಿಳಿಸಿದರು.<br><br>ಜನರು ಚರ್ಚ್‌ನಿಂದ ಹೊರಬರುವಾಗ, ಅವರನ್ನು ತಡೆದು ಅವರ ಹೆಸರು ಮತ್ತು ವೈಯಕ್ತಿಕ ವಿವರಗಳನ್ನು ಕೇಳುವುದನ್ನು ಕ್ಯಾಮೆರಾದಲ್ಲಿ ದಾಖಲಿಸಲಾಯಿತು.<br><br>6 ಜನರ ವಿರುದ್ಧ ಎಫ್ಐಆರ್ ದಾಖಲಿಸಿದ್ದೇವೆ. ಅವರು ಪ್ರತಿಯಾಗಿ 5 ಜನರ ವಿರುದ್ಧ ಎಫ್ಐಆರ್ ದಾಖಲಿಸಿದ್ದಾರೆ. ಕ್ರಿಶ್ಚಿಯನ್ನರು ಪ್ರಾರ್ಥನೆ ನಿಲ್ಲಿಸಿದ್ದಾರೆ. | - | | ಬೆದರಿಕೆ ಮತ್ತು ಕಿರುಕುಳ |

| | | | | | | |
|---|---|---|---|---|---|---|
| 37 | 17/10/21 | ಹುಬ್ಬಳ್ಳಿ, ಕರ್ನಾಟಕ | ಕ್ರಿಶ್ಚಿಯನ್ನರು ಪ್ರಾರ್ಥನಾ ಸಭೆಯನ್ನು ಆರಂಭಿಸಿದಾಗ, ಆಗಲೇ ಚರ್ಚ್ ಒಳಗೆ ಕೇಸರಿ ಸ್ಕಾರ್ಫ್ ಧರಿಸಿದ ಕೆಲವರು ಕುಳಿತಿದ್ದರು. ಪ್ರಾರ್ಥನೆಯ ಸಮಯದಲ್ಲಿ, ಅವರು ಇದ್ದಕ್ಕಿದ್ದಂತೆ ಭಜನೆಯನ್ನು ಪಠಿಸಲು ಮತ್ತು ಜೈ ಶ್ರೀ ರಾಮ್ ಎಂಬ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು. ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ತಿನ ಈ ಗುಂಪು ತಕ್ಷಣ ಪಾದ್ರಿಯ ಮೇಲೆ ಕಿರುಚಲು ಪ್ರಾರಂಭಿಸಿತು ಮತ್ತು ವಿಶ್ವನಾಥ್ ಎಂಬವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗುವಂತೆ ಒತ್ತಾಯಿಸಿದ್ದಾರೆ ಎಂದು ಆರೋಪಿಸಿದರು.<br><br>ಅವರು ಅನುಯಾಯಿಗಳನ್ನು ಥಳಿಸಲು ಪ್ರಾರಂಭಿಸಿದರು ಮತ್ತು ಅವರಲ್ಲಿ ಕೆಲವರು ಪಾದ್ರಿಯ ಮೇಲೆ ಹಲ್ಲೆ ಮಾಡಲು ಆರಂಭಿಸಿದಾಗ ಅವರಿಗೆ ತೀವ್ರ ಗಾಯಗಳಾಗಿವೆ.<br><br>ಅನುಯಾಯಿಗಳು ಮತ್ತು ಪಾದ್ರಿಯನ್ನು ಪೊಲೀಸ್ ಠಾಣೆಗೆ ಎಳೆದೊಯ್ದ ನಂತರ, ಸುಮಾರು 100 ಜನರ ದೊಡ್ಡ ಗುಂಪು ಜಮಾಯಿಸಿತು. ಜನಸಮೂಹವು ಹೆಚ್ಚುತ್ತಿರುವ ಕಾರಣ ಮತ್ತು ಹಿಂಸಾತ್ಮಕವಾಗಿ ಬೆಳೆಯುತ್ತಿದ್ದರಿಂದ ಪೊಲೀಸರಿಗೆ ಹೆಚ್ಚಿನ ಕ್ರಮ ಜರುಗಿಸಲು ಸಾಧ್ಯವಾಗಲಿಲ್ಲ. ಅವರಲ್ಲಿ ಕೆಲವರನ್ನು ಪೊಲೀಸ್ ಠಾಣೆಯಲ್ಲಿ ಇರಿಸಿಕೊಂಡು ಅವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಏಳು ಜನರನ್ನು ಆಂಬ್ಯುಲೆನ್ಸ್ ನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ನಂತರ ಆಸ್ಪತ್ರೆಯು ವರದಿ ನೀಡಿ, ಅವರಿಗೆ ಸಣ್ಣ ಮೂಗೇಟುಗಳು ಮಾತ್ರ ಆಗಿವೆ ಮತ್ತು ಯಾವುದೇ ಮುರಿತಗಳಿಲ್ಲ ಎಂದು ಹೇಳಿದರು. ಪೊಲೀಸರು ಕೆಲವರನ್ನು ಬಂಧಿಸಿ 11 ದಿನಗಳ ಕಾಲ ಜೈಲಿನಲ್ಲಿಟ್ಟರು.<br><br>ಈಗ, ಅವರು ಚರ್ಚ್‌ನಲ್ಲಿ ಒಟ್ಟಿಗೆ ಪ್ರಾರ್ಥನೆ ಮಾಡುತ್ತಿಲ್ಲ.<br><br>"ಕ್ರೈಸ್ತರು ನಿತ್ಯವೂ ನೆರೆಹೊರೆಯವರಿಂದ ಮತ್ತು ಊರಿನ ಇತರರಿಂದ ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ. ನನಗಷ್ಟೇ ಅಲ್ಲ, ನಮ್ಮ ಅನೇಕ ಅನುಯಾಯಿಗಳಿಗೂ ಅವರ ಮನೆ ಮಾಲೀಕರು ತಮ್ಮ ಮನೆಗಳನ್ನು ಖಾಲಿ ಮಾಡುವಂತೆ ಹೇಳುತ್ತಿದ್ದಾರೆ. | ಎಫ್ ಐ ಆರ್ (ಪರವಾಗಿ) ಸಂಖ್ಯೆ: 0092/2021<br>ದಿನಾಂಕ: 19/10/2021<br>ಸೆಕ್ಷನ್: 504,143,147,149,153, 295ಎ, 298,353 ಐಪಿಸಿ 1860<br>ಠಾಣೆ: ಎಪಿಎಂಸಿ ನವನಗರ<br><br>ಎಫ್ ಐ ಆರ್ (ವಿರುದ್ಧ): ಪ್ರತಿಯನ್ನು ನಿರೀಕ್ಷಿಸಲಾಗಿದೆ. | https://www.ndtv.com/karnataka-news/karnataka-hubbali-bajrang-dal-vishwa-hindu-parishad-activists-sing-bhajans-at-church-as-protest-2579526 | ದೈಹಿಕ ಹಲ್ಲೆ, ಬೆದರಿಕೆ, ಧಾರ್ಮಿಕ ಸಭೆಗಳಿಗೆ ನಿರ್ಬಂಧ, ತೊಂದರೆ |

| | | | | | | |
|---|---|---|---|---|---|---|
| | | | ಭಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ನ ಅದೇ ಗುಂಪು ಕ್ರಿಶ್ಚಿಯನ್ನರನ್ನು ಅವರ ಕೆಲಸದಿಂದ ವಜಾಗೊಳಿಸಲು ಮತ್ತು ಹೊಸದಾಗಿ ಅರ್ಜಿ ಸಲ್ಲಿಸುವ ಕ್ರಿಶ್ಚಿಯನ್ನರಿಗೆ ಕಷ್ಟವಾಗುವಂತೆ ಮಾಡಲು ಕೆಟ್ಟ ವದಂತಿಗಳನ್ನು ಹರಡುತ್ತಿದೆ.<br><br>ನಮ್ಮ ಪ್ರದೇಶದಲ್ಲಿ ಕ್ರಿಶ್ಚಿಯನ್ನರು ತುಂಬಾ ಭಯಭೀತರಾಗಿದ್ದಾರೆ ಮತ್ತು ಅನೇಕರು ನಿಧಾನವಾಗಿ ಭಾನುವಾರದಂದು ಪ್ರಾರ್ಥನೆ ಮಾಡಲು ಹಿಂತಿರುಗಲು ಪ್ರಯತ್ನಿಸುತ್ತಿದ್ದಾರೆ.<br><br>ಹನ್ನೊಂದು ದಿನಗಳ ಕಾಲ ನಾನು ಅನುಭವಿಸಿದ ಮಾನಸಿಕ ಹಿಂಸೆಯನ್ನು ನೆನಪಿಸಿಕೊಳ್ಳುವುದು ಹಾಗೂ ನಾವೆಲ್ಲರೂ ಅನುಭವಿಸಿದ ದೈಹಿಕ ಮತ್ತು ಭಾವನಾತ್ಮಕ ನೋವು ಈಗಲೂ ತುಂಬಾ ಆತಂಕವನ್ನು ಉಂಟುಮಾಡುತ್ತದೆ ಮತ್ತು ಈ ಕಥೆಯನ್ನು ಮತ್ತೆ ಹೇಳುವುದು ನನಗೆ ತುಂಬಾ ಕಷ್ಟಕರವಾಗಿದೆ.", ಎಂದು ಪಾದ್ರಿ ಹೇಳಿದರು. | | | |
| 38 | 17/10/21 | ಅರಸಿಕೆರೆ, ಹುಬ್ಬಳ್ಳಿ, ಕರ್ನಾಟಕ | ಪ್ರಾರ್ಥನಾ ಸಭೆಯ ಸಂದರ್ಭದಲ್ಲಿ ಇಬ್ಬರು ವ್ಯಕ್ತಿಗಳು ಪಾದ್ರಿ ಸಂತೋಷ್ ಮತ್ತು ಫಾದರ ಅವರನ್ನು ಹೊರಗೆ ಕರೆದರು. ಅವರ ಮೇಲೆ ಮತಾಂತರದ ಆರೋಪ ಹೊರಿಸಿ ಥಳಿಸಿದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು, ಮತ್ತು ನಂತರ ಎಂ.ಎಲ್.ಸಿ ಅವರು ಪೊಲೀಸ್ ಠಾಣೆಗೆ ಕರೆದೊಯ್ದರು, ಅಲ್ಲಿ ಪೊಲೀಸರು ಎನ್‌ಸಿಆರ್ ದಾಖಲಿಸಿದ್ದಾರೆ. | - | | ದೈಹಿಕ ಹಲ್ಲೆ, ಬೆದರಿಕೆ |
| 39 | 14/11/2021 | ಚಿತ್ರದುರ್ಗ, ಕರ್ನಾಟಕ | ನವೆಂಬರ್ 14 ರಂದು, ಪಾದ್ರಿ ಅಬ್ರಾಹಂ ಮಾಲೂರಿನ ಬಾಡಿಗೆ ಮನೆಯೊಂದರೊಳಗೆ 50 ಅನುಯಾಯಿಗಳ ಪ್ರಾರ್ಥನೆ ಸಭೆ ನಡೆಸುತ್ತಿದ್ದರು. ಆರ್‌ಎಸ್‌ಎಸ್‌ಗೆ ಸೇರಿದ 30 ಜನರ ಗುಂಪು ಒಳಗೆ ಬಂದು ಜೈ ಶ್ರೀರಾಮ್ ಎಂದು ಘೋಷಣೆಗಳನ್ನು ಕೂಗತೊಡಗಿದರು. ಅವರು ಜೋರಾಗಿ ಮತ್ತು ಅವಾಚ್ಯ ಶಬ್ದಗಳಿಂದ ನಿಂದಿಸಿದರು 15 ನಿಮಿಷಗಳಲ್ಲಿ ಪೊಲೀಸರು ಬಂದರು. ಮತ್ತು ಪಾದ್ರಿಯನ್ನು ಪೊಲೀಸ್ ಠಾಣೆಗೆ | ಎಫ್ ಐ ಆರ್ ಸಂಖ್ಯೆ<br>0497/2021<br>ದಿನಾಂಕ<br>14/11/2021 | https://www.youtube.com/watch?v=HIhNV4T7hAk<br><br>https://drive.google.com/drive/folders/1HPAteq BSOaHNIegDaIF5AOYDPvlX8C0- | ಬೆದರಿಕೆ, ತೊಂದರೆ |

| | | | | | | |
|---|---|---|---|---|---|---|
| | | | ಕರೆದೊಯ್ದರು. ಸುಮಾರು ಮೂರು ಗಂಟೆಗಳಲ್ಲಿ ಅವರನ್ನು ಬಿಡುಗಡೆ ಮಾಡಿದರು. | | ?usp=sharing | |